ಸಂಚಿಕೆ
೧೮
ಸೆಪ್ಟೆಂಬರ್, ೨೦೧೮

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



Karnataka Cultural Organization – Brindavana (KCOB) 501(C)(3), NJ

Copyright © KCO – Brindavana

ಸಂಚಿಕೆ
೧೮
ಸೆಪ್ಟೆಂಬರ್, ೨೦೧೮

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



ಈ ಸಂಚಿಕೆಯಲ್ಲಿ....

ಅಭಿಮಾನಿ ತಂಡದ ನುಡಿ ೦೨
ಧರ್ಮವಾಣಿ ೦೩
ಹರಟೆ ೦೫
ಮಹಿಳಾ ವಾಣಿ ೦೭
ಲಲಿತ ಪ್ರಭಂದ ೦೮
ಪ್ರದಕ್ಷಿಣೆ ೧೧
ಕಿಶೋರ ವಾಣಿ ೧೫

**ಸಂಪಾದಕ ವರ್ಗ**


ಸತ್ಯ ಪ್ರಸಾದ್


ಭಾಸ್ಕರ ತೈಲಗೇರಿ


ಅನಿಲ್ ಭಾರದ್ವಾಜ


ಉಮಾ ಮೂರ್ತಿ


ಲಕ್ಷ್ಮಿ ಕೊಲಾಲ್


ಪ್ರಶಾಂತ ಎಂ.


ಅಮೂಲ್ಯ ಕಟ್ಟೀಮನಿ

ಮುಖಪುಟ ಚಿತ್ರ:
ಸಾಸಿವೆ ಕಾಳು ಗಣಪತಿ
ಹಂಪಿ

ಸಂಪಾದಕೀಯ ಪುಟ ಚಿತ್ರ:
ದೊಡ್ಡ ಗಣಪತಿ,
ಬೆಂಗಳೂರು

ಚಿತ್ರ ಕೃಪೆ : ಅಂತರ್ಜಾಲ

## ಸಂಪಾದಕ ವರ್ಗದಿಂದ......

**ಬೇ**ಸಿಗೆಯ ರಜಾ ಮುಗಿದು ಮಕ್ಕಳು ಶಾಲಾ-ಕಾಲೇಜುಗಳಿಗೆ ವಾಪಸ್ಸಾಗುವ ಸಮಯ ಬಂದೇ ಬಿಟ್ಟಿತು. ಅದೆಷ್ಟು ಬೇಗನೆ ಬೇಸಿಗೆಯ ರಜೆ ಕಳೆದುಹೋಗುತ್ತದಲ್ಲವೆ? ನೀವೆಲ್ಲರೂ ನಿಮ್ಮ ಮಕ್ಕಳೊಂದಿಗೆ ಚೆನ್ನಾಗಿ ಕಾಲ ಕಳೆದಿದ್ದೀರಿ ಎಂದು ನಾವು ತಿಳಿದಿದ್ದೇವೆ - ಕಡಲ ತೀರದಲ್ಲಿ ಆಡುವುದಿರಲಿ, ರಾಷ್ಟ್ರೀಯ ಪಾರ್ಕ್ ಗಳ ಪ್ರವಾಸವಿರಲಿ, ಇಲ್ಲವೇ ಮನೆ ಹತ್ತಿರ ಸೈಕಲ್ ತುಳಿಯುವುದಿರಲಿ ಅಥವಾ ಸುಮ್ಮನೆ ಸೋಫಾ ಮೇಲೆ ಒಟ್ಟಿಗೆ ಕುಳಿತು ದೂರದರ್ಶನ ನೋಡುವುದಿರಲಿ. ಮಕ್ಕಳೊಂದಿಗೆ ಕಾಲ ಕಳೆಯುವುದು ಮುದ ಕೊಡುತ್ತದೆ, ಮುಖ್ಯವೂ ಹೌದು.

ಅತ್ತ ಕಡೆ ಭಾರತದಲ್ಲಿ, ಭಾರಿ ಮಳೆಯಿಂದ ಜನರ ಜೀವನ ಅಸ್ತವ್ಯಸ್ತಗೊಂಡಿದೆ. ಕೇರಳ ಮತ್ತು ಕರ್ನಾಟಕದ ಕೊಡಗು ಮತ್ತು ಪಶ್ಚಿಮ ಘಟ್ಟದ ಭಾಗಗಳು ಪ್ರಕೃತಿಯ ವಿಕೋಪಕ್ಕೆ ಸಿಲುಕಿ ಅಲ್ಲಿನ ಜನರು ಕಂಗೆಟ್ಟಿದ್ದಾರೆ. ಬಹಳಷ್ಟು ಸ್ವಯಂಸೇವಕ ಸಂಸ್ಥೆಗಳು ಸಂತ್ರಸ್ತ ಜನರಿಗೆ ಸಹಾಯ ಮಾಡುತ್ತಿದ್ದಾರೆ. ಯಥಾಶಕ್ತಿ ನಮಗಾಗುವ ಸಹಾಯ ಮಾಡುವುದು ಉಚಿತ. ಹೀಗೆ ಪ್ರಕೃತಿಯ ವಿಪರೀತಗಳು ಜಗತ್ತೆಲ್ಲೆಡೆ ಪ್ರತಿವರ್ಷ ಸಂಭವಿಸುತ್ತಿದೆ - ವರ್ಷದಿಂದ ವರ್ಷಕ್ಕೆ ಉಗ್ರವಾಗುತ್ತಿರುವ ಚಂಡಮಾರುತಗಳು, ನೀರಿಲ್ಲದೆ ಶುಷ್ಕವಾಗಿ ಹತ್ತಿ ಉರಿಯುತ್ತಿರುವ ಕಾಡ್ಗಿಚ್ಚುಗಳು, ಪ್ರಳಯಾಂತಕ ಮಳೆಗಾಲಗಳು, ಕುಸಿದು ಬೀಳುತ್ತಿರುವ ಹಿಮಪರ್ವತಗಳು ಇತ್ಯಾದಿ., ಮನುಷ್ಯನಿಗೆ ಕೃತ್ಯಗಳನ್ನು ತಿದ್ದಿಗೊಳ್ಳಲು ತೋರಿಸುತ್ತಿರುವ ಸಂಕೇತಗಳಿರಬಹುದು. ನಮ್ಮೆಲ್ಲರಿಗೂ ಆಶ್ರಯ ಕೊಡುತ್ತಿರುವ ಈ ಭೂತಾಯಿಯನ್ನು ನಾವು ಕೂಡ ಜೋಪಾನವಾಗಿ ಕಾಪಾಡಿಕೊಳ್ಳಬೇಕು.

ತಮ್ಮ ಕ್ಷೇತ್ರಗಳಲ್ಲಿ ಸ್ತುತ್ಯರ್ಹವಾದ ಸೇವೆ ಸಲ್ಲಿಸಿರುವ ಪ್ರಮುಖ ವ್ಯಕ್ತಿಗಳು ನಮ್ಮನ್ನು ಅಗಲಿದ್ದಾರೆ: ಧೀಮಂತ ರಾಜಕಾರಣಿಗಳಾದ, ಭಾಜಪವನ್ನು ಸಾಕಿ, ಸಲಹಿ ಹೆಮ್ಮರಮಾಡಿದ ಅಟಾಲ್ ಬಿಹಾರಿ ವಾಜಪೇಯಿಯವರು; ೭೦ಕ್ಕೂ ಹೆಚ್ಚು ವರ್ಷ ತಮಿಳುನಾಡಿನಲ್ಲಿ ದ್ರವಿಡೀಯ ರಾಜಕಾರಣದಲ್ಲಿ ತಮ್ಮನ್ನೇ ತೊಡಗಿಸಿಕೊಂಡಿದ್ದ ಎಂ ಕರುಣಾನಿಧಿಯವರು; ಪ್ರಸಿದ್ಧ ಹಿರಿಯ ಕವಿ, ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲ ಸಾಹಿತ್ಯ ಪ್ರಶಸ್ತಿ ಪುರಸ್ಕೃತರು ಆದ ಸುಮತೀಂದ್ರ ನಾಡಿಗರು; ನೈತಿಕ ಬುನಾದಿಯ ಮೇಲೆ ನಿಂತ, ನಿರ್ಭಯದ ಪತ್ರಿಕೋದ್ಯಮ ನಡೆಸುತ್ತಿದ್ದ, ೧೪ಕ್ಕೂ ಹೆಚ್ಚು ಭಾಷೆಗಳ, ಡೆಕ್ಕನ್ ಹೆರಾಲ್ಡ್ ಸೇರಿ ೮೦ಕ್ಕೂ ಹೆಚ್ಚು ದಿನಪತ್ರಿಕೆಗಳಲ್ಲಿ ಸುಮಾರು ೭೦ ವರ್ಷಗಳ ಕಾಲ ಪತ್ರಿಕಾಲೇಖನಗಳು ಬರೆದ ಪ್ರಮುಖ ವರದಿಗಾರ ಕುಲದೀಪ್ ನಾಯರ್ ಅವರು. ಇವರೆಲ್ಲರಿಗೂ ನಮ್ಮ ಗೌರವಪೂರ್ವಕವಾದ ನಮನಗಳು.

ಭಾರತ ದೇಶ ತನ್ನ ೭೨ನೇ ಹುಟ್ಟುಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿತು. ಭಾರತೀಯರು ದಿಲ್ಲಿಯ ಕೆಂಪು ಕೋಟೆಯ ಮೇಲಿಂದ ಹಿಡಿದು ಪ್ರಸಿದ್ಧ ಮೈದಾನಗಳಲ್ಲಿ, ಕೋರ್ಟು-ಕಛೇರಿಗಳಲ್ಲಿ, ಶಾಲಾ-ಕಾಲೇಜುಗಳಲ್ಲಿ ತ್ರಿವರ್ಣದ ಪತಾಕೆಯನ್ನು ಗರ್ವ, ಅಭಿಮಾನ ಮತ್ತು ಭಕ್ತಿಯಿಂದ ಹಾರಿಸಿ, ನಮಿಸಿದರು. ಹೊರನಾಡು ಭಾರತೀಯರು ಸಂಚಾರ ಪಥಗಳು, ಮೆರವಣಿಗೆಗಳ ಮೂಲಕ ತಮ್ಮ ಗೌರವ ವ್ಯಕ್ತಪಡಿಸಿ ಸ್ವಾತಂತ್ರ್ಯ ದಿನವನ್ನು ನೆರವೇರಿಸಿದರು. ಪ್ರಧಾನಿ ನರೇಂದ್ರ ಮೋದಿಯವರು ಇದೇ ಸಂದರ್ಭದಲ್ಲಿ ದೇಶವನ್ನುದ್ದೇಶಿಸಿ ಮಾತನಾಡಿ, "೨೦೨೦ರ ಒಳಗೆ ಭಾರತ ಮಾತೆಯ ಒಬ್ಬ ಮಗ ಅಥವಾ ಮಗಳು ರಾಷ್ಟ್ರಧ್ವಜ ಹಿಡಿದು ಬಾಹ್ಯಾಕಾಶಕ್ಕೆ ಹೋಗುವರು," ಎಂದು ಘೋಷಣೆ ಮಾಡಿದರು. ಅಲ್ಲದೆ, ಪ್ರಪಂಚದಲ್ಲೇ ಅತೀ ದೊಡ್ಡದಾದ ಸರ್ಕಾರ-ಬೆಂಬಲಿತವಾದ ಆರೋಗ್ಯ ಪೋಷಣಾ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಮೋದಿಯವರು ಈ ಜನಪರ ಕಾರ್ಯನೀತಿಗಳಲ್ಲಿ ಬೃಹತ್ ಯಶಸ್ಸು ಕಾಣಲಿ ಎಂದು ನಮ್ಮ ಅಭಿಲಾಷೆ.

ಈ ದಿನಗಳಲ್ಲಿ ಶ್ರಾವಣಮಾಸದ ಹಬ್ಬಗಳನ್ನು ಆಚರಿಸಿ, ಎಲ್ಲರ ಇಷ್ಟ ದೇವತೆಯಾದ ವಿಘ್ನೇಶ್ವರನ ದಿನವಾದ ಗಣೇಶ ಚತುರ್ಥಿಯನ್ನೂ ಆಚರಿಸಿದ್ದೇವೆ. ಗಜಾನನ ಈ ವರ್ಷ ನೀವು ಮಾಡುವ ಕಾರ್ಯಗಳನ್ನು ನಿರ್ವಿಘ್ನವಾಗಿ ನೆರವೇರಿಸಲಿ ಎಂದು ನಮ್ಮೆಲ್ಲರ ಆಶಯ. ಇದೆ ಸಂದರ್ಭದಲ್ಲಿ ಬೃಂದಾವನ ಕನ್ನಡ ಕೂಟ ಆಯೋಜಿಸಿರುವ ಗಣೇಶೋತ್ಸವ ಸಮಾರಂಭಕ್ಕೆ ಎಲ್ಲರೂ ತಪ್ಪದೆ ಆಗಮಿಸಿ.

ಬೃಂದಾವನ ವಾಣಿಯ ಈ ಸಂಚಿಕೆಯಲ್ಲಿ ಹಲವು ವಿಚಾರಗಳ ಬಗ್ಗೆ ವಿಚಾರ, ವಿಮರ್ಶೆ ಮತ್ತು ಕಥೆಗಳು ಪ್ರಕಟವಾಗಿದೆ. ದಯವಿಟ್ಟು ಓದಿ, ತಪ್ಪದೆ ನಿಮ್ಮ ಅನಿಸಿಕೆಗಳನ್ನು ಕಳಿಸಿ. ಅಲ್ಲದೆ ಮುಂದಿನ ಸಂಚಿಕೆಗಳಿಗೆ ನಿಮ್ಮ ಬರಹಗಳನ್ನು ಕಳುಹಿಸುವುದು ಮರೆಯದಿರಿ. ಮುಂದಿನ ಸಂಚಿಕೆಯಲ್ಲಿ ಮತ್ತೆ ನಿಮ್ಮ ಭೇಟಿ!.

*ಅನಿಲ್ ಭಾರದ್ವಾಜ*


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಅಭಿಮಾನಿ ತಂಡದ ನುಡಿ

ಆತ್ಮೀಯ ನ್ಯೂ ಜೆರ್ಸಿ ಕನ್ನಡ ಸ್ನೇಹಿತರೇ,

ಬೃಂದಾವನದ ಎಲ್ಲ ಕಾರ್ಯ ಚಟುವಟಿಕೆಗಳನ್ನು ಪ್ರೀತಿಯಿಂದ ಪ್ರೋತ್ಸಾಹಿಸುತ್ತಿರುವ ನಿಮಗೆ, ಅಭಿಮಾನಿ ತಂಡದ ಹೃದಯ ಪೂರ್ವಕ ನಮನ. ಇದೇ ಸೆಪ್ಟೆಂಬರ್೨೨ ಶನಿವಾರದಂದು, ನಮ್ಮ ಗಣೇಶೋತ್ಸವ, ಸಾಹಿತ್ಯೋತ್ಸವ ಮತ್ತು ನಾಟಕೋತ್ಸವವನ್ನು ಅತ್ಯಂತ ವಿಜೃಂಬಣೆಯಿಂದ ಆಚರಿಸಲು ಸಿದ್ದತೆ ನೆಡೆಸುತ್ತಿದ್ದೇವೆ. "ದಿನವೆಲ್ಲ ಹಬ್ಬ, ನಮಗಾಗಿ ನಮ್ಮ ಮಕ್ಕಳಿಗಾಗಿ" ಬೆಳಿಗ್ಗೆ ೧೦.೩೦ಕ್ಕೆ ಸಾಹಿತ್ಯೋತ್ಸವ, ಮಕ್ಕಳಿಂದ ಮಣ್ಣಿನ ಗಣೇಶ ರಚನೆ ಹಾಗೂ ಪೂಜೆಯೊಂದಿಗೆ ಪ್ರಾರಂಭವಾಗುವ ಈ ಕಾರ್ಯಕ್ರಮದಲ್ಲಿ ಬೆಳಗಿನ ಲಘು ಉಪಹಾರ, ಮಧ್ಯಾಹ್ನದ ಹಬ್ಬದೂಟ, ಸಂಜೆ ಬಾಕ್ಸ್ ಡಿನ್ನರ್ ಏರ್ಪಡಿಸಲಾಗಿದೆ. ಆಹ್ವಾನಿತ ಶ್ರೇಷ್ಠ ಕಲಾವಿದರೊಂದಿಗೆ ನಮ್ಮ ನ್ಯೂ ಜೆರ್ಸಿ ಕನ್ನಡದ ಕಲಾವಿದರೆಲ್ಲ ಭಾಗವಹಿಸಲಿದ್ದಾರೆ. ತಪ್ಪದೇ ಬನ್ನಿ!!

ಲಿಂಕ್ ಉಪಯೋಗಿಸಿ ಕಾರ್ಯಕ್ರಮಕ್ಕಾಗಿ ರಿಜಿಸ್ಟರ್ ಮಾಡಿ....




ನಿಮ್ಮ ಭೇಟಿಯ ನಿರೀಕ್ಷೆಯಲ್ಲಿ,....

**ಅಭಿಮಾನಿ ತಂಡ**


Copyright © KCO – Brindavana

ಸಂಚಿಕೆ
೧೮
ಸೆಪ್ಟೆಂಬರ್, ೨೦೧೮



# ಜೀವನದಲ್ಲಿ ದೈವೀ ಮತ್ತು ಆಸುರೀ ಗುಣಗಳ ಪ್ರಭಾವ





ಡಾ|| ಎಂ.ಜಿ.ಪ್ರಸಾದ್

## ಪರಿಚಯ

ಸರ್ವವ್ಯಾಪಿಯಾದ ಪರಮಾತ್ಮನು ಧರ್ಮದ ಪುನರುತ್ಥಾನಕ್ಕಾಗಿ ಶ್ರೀ ಕೃಷ್ಣನಾಗಿ ಹುಟ್ಟಿದ ದಿನವನ್ನೇ ನಾವು ಶ್ರೀ ಕೃಷ್ಣ ಜನ್ಮಾಷ್ಟಮಿ ಅಥವಾ ಶ್ರೀ ಕೃಷ್ಣ ಜಯಂತಿಯೆಂದು ಸಂಭ್ರಮದಿಂದ ಆಚರಿಸುತ್ತೇವೆ. ಶ್ರೀ ಕೃಷ್ಣನ ಅವತಾರವು ಪೂರ್ಣಾವತಾರ. ಏಕೆಂದರೆ ಶ್ರೀ ಕೃಷ್ಣನ ಪೂರ್ಣ ಜೀವನದಿಂದ ಎಲ್ಲ ಮಟ್ಟದಲ್ಲಿರುವ ಜನರು ಹಾಗೂ ಎಲ್ಲ ವಯಸ್ಸಿನವರು ಪ್ರಭಾವಿತರಾಗಿದ್ದಾರೆ. ಕರ್ನಾಟಕದ ಮಹಾ ಯೋಗಿಯೂ ಹಾಗೂ ಜ್ಞಾನಿಯೂ ಆದ ಶ್ರೀರಂಗ ಸದ್ಗುರು ಹೇಳಿದಂತೆ, "ಮಕ್ಕಳೊಡನೆ ಮಗುವಾಗಿ, ಜ್ಞಾನಿಗಳೊಡನೆ ಜ್ಞಾನಿಯಾಗಿ, ಗೋವಳರೊಡನೆ ಗೋಪಾಲನಾಗಿ, ಯುದ್ಧರಂಗದಲ್ಲಿ ರಾಜನೀತಿಜ್ಞನಾಗಿ, ಸ್ತ್ರೀಯರೊಡನೆ ಅವರಿಗನುಗುಣನಾಗಿ ಸರ್ವ ವಿಧದಿಂದಲೂ ಸುಂದರ ಜೀವನ ನಡೆಸಿದ." ಮಹರ್ಷಿ ವೇದವ್ಯಾಸರು ರಚಿಸಿದ ಶ್ರೀಮದ್ಭಾಗವತ ಮಹಾ ಪುರಾಣದಲ್ಲಿ ಶ್ರೀ ಕೃಷ್ಣನ ಸುಂದರಮಯ ಜೀವನದ ವಿವರಗಳ ವರ್ಣನೆಯನ್ನು ನೋಡುತ್ತೇವೆ. ಹಾಗೆಯೇ ಶ್ರೀ ಕೃಷ್ಣನು ಪರಮಾತ್ಮನ ಪೂರ್ಣ ಪ್ರತಿನಿಧಿ ಎಂಬುದನ್ನು ಆಧ್ಯಾತ್ಮಿಕ ತತ್ವಗಳ ಮೂಲಕ ಶ್ರೀಮದ್ಭಾಗವತದಲ್ಲಿ ಮನಗಾಣುತ್ತೇವೆ. ಜಗತ್ತಿಗೇ ಸರ್ವಕಾಲಿಕವಾದ ಉಪದೇಶವನ್ನು ಜಗದ್ಗುರುವಾದ ಶ್ರೀ ಕೃಷ್ಣನು ಶ್ರೀಮದ್ಭಗವದ್ಗೀತೆಯಲ್ಲಿ ನೀಡಿದ್ದಾನೆ.

## ಜಗದ್ಗುರು ಶ್ರೀ ಕೃಷ್ಣನ ಶ್ರೀಮದ್ಭಗವದ್ಗೀತಾ

ಮಹಾಭಾರತದಲ್ಲಿ ಇನ್ನೇನು ಮಹಾಯುದ್ಧ ಆರಂಭಿಸಬೇಕು ಎನ್ನುವ ಸಮಯದಲ್ಲಿ ಮಹಾವೀರನಾದ ಅರ್ಜುನನಿಗೆ ಬಂದ ಸಂದೇಹ ಹಾಗೂ ವಿಷಾದವನ್ನು ಪರಿಹರಿಸಲು ಶ್ರೀ ಕೃಷ್ಣನು ನೀಡಿದ ಉತ್ತರವೇ ಶ್ರೀಮದ್ಭಗವದ್ಗೀತಾ. ಇಲ್ಲಿ ಶ್ರೀ ಕೃಷ್ಣಗೀತಾ ಎನ್ನುವ ಬದಲು ಶ್ರೀಮದ್ಭಗವದ್ಗೀತಾ ಎಂದು ಹೇಳಿರುವುದರ ಕಾರಣವೇನೆಂದರೆ ಶ್ರೀ ಕೃಷ್ಣನೇ ಶ್ರೀಮದ್ಭಗವದ್ರೂಪ. ಇದನ್ನು ಶ್ರೀ ಕೃಷ್ಣನು ತೋರಿದ ವಿಶ್ವರೂಪದರ್ಶನದಿಂದ ನೋಡಬಹುದು. ಆದ್ದರಿಂದಲೇ ಶ್ರೀಮದ್ಭಗವದ್ಗೀತೆಯು ನೇರವಾಗಿ ಭಗವಂತನು ನೀಡಿದ ಉಪದೇಶ. ಇದರಿಂದ ಎಲ್ಲ ರೀತಿಯ ವ್ಯಕ್ತಿಗಳು ಅಂದರೆ ಹಿಂದಿನ ಕಾಲದ ಋಷಿಗಳಿಂದ ಆರಂಭಿಸಿ ಇಂದಿನ ಕಾಲದ ಚಿಂತಕರು, ವಿಜ್ಞಾನಿಗಳು, ನಾಯಕರು, ಸಾಧಕರು, ಸಾಧಕಿಯರು ಹಾಗೂ ಸಾಮಾನ್ಯರೂ ಪ್ರಭಾವಿತರಾಗಿದ್ದಾರೆ. ಹದಿನೆಂಟು ಅಧ್ಯಾಯಗಳನ್ನೊಳಗೊಂಡ ಶ್ರೀಮದ್ಭಗವದ್ಗೀತೆ ಒಂದು ಉಪನಿಷತ್ತಿನಂತೆ. ಏಕೆಂದರೆ ಉಪನಿಷತ್ತಿನಲ್ಲಿ ಶ್ರದ್ಧಾವಂತನಾದ ಶಿಷ್ಯನು ಜ್ಞಾನಿಯಾದ ಗುರುವಿನ ಬಳಿಗೆ ಹೋಗಿ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುತ್ತಾನೆ. ಹಾಗೆಯೇ ಇಲ್ಲಿಯೂ ಅರ್ಜುನನು ಶ್ರದ್ಧೆಯಿಂದ ಶ್ರೀ ಕೃಷ್ಣ ಪರಮಾತ್ಮನಿಗೆ ಪ್ರಶ್ನೆಗಳನ್ನು ಕೇಳಿ ಉತ್ತರಗಳನ್ನು ಪಡೆಯುತ್ತಾನೆ. ಇಲ್ಲಿನ ಪ್ರಶ್ನೋತ್ತರಗಳು ಬ್ರಹ್ಮವಿದ್ಯೆಗೆ ಸಂಬಂಧ ಹೊಂದಿವೆ. ಮತ್ತೊಂದು ಮುಖ್ಯವಾದುದೇನೆಂದರೆ ಇಲ್ಲಿ ಕೇವಲ ವೈಚಾರಿಕವಾಗಿ ಮಾತ್ರವಲ್ಲ ವಿಷಯಗಳನ್ನು ಪ್ರಯೋಗಕ್ಕನುಗುಣವಾಗಿ ಉಪದೇಶಿಸಲಾಗಿದೆ. ಆದುದರಿಂದಲೇ ಶ್ರೀ ಕೃಷ್ಣಾರ್ಜುನರ ಸಂವಾದದ ಶ್ರೀಮದ್ಭಗವದ್ಗೀತೆಯನ್ನು ಉಪನಿಷತ್ತು, ಬ್ರಹ್ಮವಿದ್ಯೆ, ಹಾಗೂ ಯೋಗಶಾಸ್ತ್ರವೆಂದು ಕರೆಯಲಾಗಿದೆ. ಈ ಕಾರಣಗಳಿಗಾಗಿ ಶ್ರೀಮದ್ಭಗವದ್ಗೀತಾ ಸನಾತನ ಧರ್ಮದ ಮೂರು ಅಡಿಪಾಯ ಆಧಾರಗಳಾದ ಪ್ರಸ್ಥಾನತ್ರಯದಲ್ಲಿ ಒಂದಾಗಿದೆ. ಉಪನಿಷತ್ತುಗಳು ಮತ್ತು ಬ್ರಹ್ಮಸೂತ್ರ ಉಳಿದ ಎರಡು ಆಧಾರಗಳು. ಮತ್ತೊಂದು ವಿಷಯವೆಂದರೆ ಉಪನಿಷತ್ತುಗಳ ಸಾರವೇ ಶ್ರೀಮದ್ಭಗವದ್ಗೀತೆ. ಆದ್ದರಿಂದ ಜಗತ್ತಿನಲ್ಲಿನ ಯಾವುದೇ ದೇಶದಲ್ಲಿನ ಯಾವ ಮನುಷ್ಯನೇ ಆಗಲಿ ದೈವೀ ಗುಣಗಳನ್ನು ಸಂಪಾದಿಸಿ ಆಧ್ಯಾತ್ಮಿಕ ಮಾರ್ಗದಲ್ಲಿ ಮುಂದುವರಿಯಬೇಕಾದರೆ ಜಗದ್ಗುರು ಶ್ರೀ ಕೃಷ್ಣನು ನೀಡಿರುವ ಉಪದೇಶಗಳನ್ನು ಅನುಸರಿಸಿ ಸಿದ್ಧಿಯನ್ನು ಪಡೆಯಬಹುದು.



ಚಿತ್ರ : ಅಂತರ್ಜಾಲ

## ಭಗವದ್ಗೀತೆಯ ದೈವಾಸುರ ಸಂಪದ್ವಿಭಾಗಯೋಗ

ಮನುಷ್ಯನಿಗೆ ಮನಸ್ಸು ಮತ್ತು ಬುದ್ಧಿ ಎಂಬುವು ಪರಮಾತ್ಮನು ಕರುಣಿಸಿರುವ ಸಾಧನಗಳು. ಇವುಗಳನ್ನು ಮನುಷ್ಯನು ಸರಿಯಾದ ರೀತಿಯಲ್ಲಿ ಎಂದರೆ ಮೇಲ್ಮುಖವಾಗಿ ಉಪಯೋಗಿಸಿದಾಗ ಜೀವನವು ಇಹ ಹಾಗೂ ಪರ ಎಂಬ ಎರಡು ಲೋಕಗಳಲ್ಲಿಯೂ ಶಾಂತಿ ಹಾಗೂ ಆನಂದವನ್ನು ಪಡೆಯಲು ಸಾಧ್ಯ. ಇಲ್ಲದಿದ್ದರೆ ಮನುಷ್ಯನ ಮನಸ್ಸು ಹಾಗೂ ಬುದ್ಧಿ ಕೆಳಮುಖವಾಗಿ ಹರಿದು ಜೀವನದಲ್ಲಿ ಅಶಾಂತಿ ಹಾಗೂ ದುಃಖಗಳು ಉಂಟಾಗುತ್ತವೆ. ಇದರಿಂದ ಮುಖ್ಯವಾಗಿ ತಿಳಿಯಬೇಕಾದ್ದೇನೆಂದರೆ ಮನಸ್ಸನ್ನು ಸಾಧನೆಯಿಂದ ಮೇಲ್ಮುಖವಾಗಿ ಮಾಡಿದಾಗ ಮನುಷ್ಯನು ದೈವೀ ಗುಣಗಳನ್ನು ಪಡೆಯುತ್ತಾನೆ. ಸಾಧನೆಯಿಲ್ಲದೆ ಬೇಕಾಬಿಟ್ಟಿಯಾಗಿ ಕೆಳಮುಖವಾಗಿ ಹರಿಯಬಿಟ್ಟರೆ ಆಗ ಮನುಷ್ಯನಲ್ಲಿ ಅವಗುಣಗಳು ತುಂಬುತ್ತವೆ. ಅದಕ್ಕೇ "ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೇ" ಎಂದರೆ ಮನುಷ್ಯನಿಗೆ ತನ್ನ ಮನಸ್ಸೇ ಬಂಧನಕ್ಕೆ ಅಥವಾ ಬಿಡುಗಡೆಗೆ ಕಾರಣ ಎಂದಾಗುತ್ತದೆ.

ಶ್ರೀಮದ್ಭಗವದ್ಗೀತೆಯ ಹದಿನಾರನೆಯ ಅಧ್ಯಾಯದಲ್ಲಿ ಶ್ರೀ ಕೃಷ್ಣ ಪರಮಾತ್ಮನು ದೈವೀ ಹಾಗೂ ಆಸುರೀ ಗುಣಗಳು ಯಾವುವು ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾನೆ. ಅಷ್ಟೇ ಅಲ್ಲದೆ ಮುಖ್ಯವಾಗಿ ಆಸುರೀ ಗುಣಗಳಿಂದ ಮನುಷ್ಯನು ಹೇಗೆ ವಿನಾಶವನ್ನು ಹೊಂದುತ್ತಾನೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಿದ್ದಾನೆ. ನಂತರ ಹೇಗೆ ಆಸುರೀ ಗುಣಗಳು ಬರದಂತೆ ತಡೆದು ದೈವೀ ಗುಣಗಳನ್ನು ಪಡೆಯಬಹುದೆಂದೂ ತಿಳಿಸಿದ್ದಾನೆ. ಅದಕ್ಕಾಗಿಯೇ ಭಗವದ್ಗೀತೆ ಶಾಂತಿ ಹಾಗೂ ಆನಂದ ಪಡೆಯುವ ಕೈಪಿಡಿ.

## ದೈವೀ ಗುಣಗಳ ಸಂಪತ್ತು

ಸಂಪತ್ತು ಎಂದರೆ ಹಣ ಎಂಬ ಸಂಕುಚಿತ ಅರ್ಥವಲ್ಲ. ಸಂಪತ್ ಎಂದರೆ ಶ್ರೇಷ್ಠವಾದ ಗುಣಗಳು. ಇಲ್ಲಿ ಶ್ರೇಷ್ಠವಾದ ಗುಣಗಳು ದೈವೀ ಗುಣಗಳು ಎಂದಾಗುತ್ತದೆ. ದೈವೀ ಗುಣಗಳನ್ನು ಹೊಂದುವುದರಿಂದ ಭಕ್ತನು ಅಥವಾ ಭಕ್ತೆಯು ದೇವರ ದರ್ಶನ ಮಾಡಿ ಶಾಂತಿ ಹಾಗೂ ಆನಂದವನ್ನು ಪಡೆಯುತ್ತಾನೆ ಅಥವಾ ಪಡೆಯುತ್ತಾಳೆ. ಶ್ರೀಕೃಷ್ಣ ಪರಮಾತ್ಮನು ಇಪ್ಪತ್ತಾರು ದೈವೀ ಗುಣಗಳನ್ನು ಹೇಳಿದ್ದಾನೆ. ಅವು ಯಾವುವೆಂದರೆ:

(೧) **ಅಭಯ:** ಭಯವಿಲ್ಲದೇ ಇರುವುದು. ಆಧ್ಯಾತ್ಮ ಶಕ್ತಿಯನ್ನು ಪಡೆಯುತ್ತಾ ಹೋದಂತೆ ಭಯ ಎನ್ನುವುದು ನಮ್ಮಿಂದ ದೂರ ಆಗುತ್ತಿರುತ್ತದೆ. ಆದ್ದರಿಂದ ಆಧ್ಯಾತ್ಮಿಕ ದೃಷ್ಟಿಯಿಂದ ಎಂದರೆ ಎಲ್ಲರಲ್ಲೂ ಸಮದೃಷ್ಟಿಯಿಂದ ಇದ್ದು ನಾವೂ ಭಯ ಪಡದೆ ಇತರರಿಗೂ ಭಯವನ್ನುಂಟು ಮಾಡದಿರುವುದು.

(೨) **ಸತ್ವ ಸಂಶುದ್ಧಿಃ**: ಎಂದರೆ ಅಂತಃಕರಣದ ಶುದ್ಧತೆ. ನಮ್ಮ ಜೀವನದಲ್ಲಿನ ವ್ಯವಹಾರ ಮತ್ತು ಸಂಪಾದನೆಯಲ್ಲಿ ಶುದ್ಧತೆಯಿಂದಿರುವುದು.

(೩) **ಜ್ಞಾನ ಯೋಗ ವ್ಯವಸ್ಥಿತಿಃ**: ಎಂದರೆ ಆಧ್ಯಾತ್ಮಿಯ ವಿಷಯದ ಜ್ಞಾನ ಮತ್ತು ಯೋಗದ ಅಭ್ಯಾಸದಲ್ಲಿ ತೊಡಗಿರುವುದು. ಈ ಜ್ಞಾನವನ್ನು ಪಡೆಯಲು ಮೂರು ಮಾರ್ಗಗಳಿವೆ. ಅವುಗಳೇ ಗುರು ಅಥವಾ ಆಚಾರ್ಯರ ಉಪದೇಶ, ಶಾಸ್ತ್ರಾಧ್ಯಯನ ಮತ್ತು ಸ್ವಂತ ಸಾಧನೆಯ ಅನುಭವ. ಈ ಮೂರರಿಂದ ಬರುವ ಜ್ಞಾನ ಒಂದಾಗಿರಬೇಕು. ಮುಂದುವರೆದು ಕರ್ಮ, ಭಕ್ತಿ ಹಾಗೂ ಜ್ಞಾನ ಯೋಗದಲ್ಲಿ ತೊಡಗುವುದು.

(೪) **ದಾನಂ:** ಎಂದರೆ ಪ್ರತ್ಯುಪಕಾರವನ್ನು ಬಯಸದೇ ಸತ್ಪಾತ್ರರಿಗೆ ಅವರ ಉಪಯೋಗಕ್ಕೆ ಬರುವ ವಸ್ತುಗಳನ್ನು ದಾನ ನೀಡುವುದು.

(೫) **ದಮಃ**: ಎಂದರೆ ಇಂದ್ರಿಯಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದು.

(೬) **ಯಜ್ಞಃ**: ಎಂದರೆ ದೇವಪೂಜೆ ಮಾಡುವುದು. ಇದರಲ್ಲಿ ಯಜ್ಞಾದಿ ಕರ್ಮಗಳೂ ಸೇರಿವೆ.

(ಮುಂದಿನ ಪುಟಕ್ಕೆ...)


Copyright © KCO – Brindavana

ಸಂಚಿಕೆ
೧೮
ಸೆಪ್ಟೆಂಬರ್, ೨೦೧೮



## ಜೀವನದಲ್ಲಿ ದೈವೀ ಮತ್ತು ಆಸುರೀ ಗುಣಗಳ ಪ್ರಭಾವ

(.. ಹಿಂದಿನ ಪುಟದಿಂದ)

**(೭) ಸ್ವಾಧ್ಯಾಯಃ:** ಎಂದರೆ ವೇದ ಮಂತ್ರಗಳ ಅಧ್ಯಯನ ಹಾಗೂ ಅಭ್ಯಾಸ. ಇದರಲ್ಲಿ ಪರಮಾತ್ಮನ ಸ್ತೋತ್ರ ವರ್ಣನೆಯೂ ಸೇರಿದೆ.

**(೮) ತಪಃ:** ಎಂದರೆ ತಪಸ್ಸು. ಇಲ್ಲಿ ತಪಸ್ಸು ಎಂದರೆ ಮನಸ್ಸಿನ ಏಕಾಗ್ರತೆ ಸಾಧಿಸುವುದು. ಇದಕ್ಕಾಗಿ ಶರೀರದ, ಮಾತಿನ ಹಾಗೂ ಮನಸ್ಸಿನ (ಕಾಯ, ವಾಚಾ, ಮನಸಾ) ನಿಯಮಗಳನ್ನು ಪಾಲಿಸುವುದು.

**(೯) ಆರ್ಜವಂ:** ಎಂದರೆ ಋಜುತ್ವ. ಈ ಗುಣದಿಂದ ಸರಳತೆ, ಪ್ರಾಮಾಣಿಕತೆ ಹಾಗೂ ವಂಚನೆ ಮಾಡದಿರುವುದು ಬರುತ್ತದೆ. ಮನಸ್ಸು, ಮಾತು ಹಾಗೂ ಕ್ರಿಯೆಗಳು ಒಂದಾಗುತ್ತವೆ.

**(೧೦) ಅಹಿಂಸಾ:** ಎಂದರೆ ಯಾರಿಗೂ ಮತ್ತು ಯಾವ ಪ್ರಾಣಿಗೂ ಮಾನಸಿಕವಾಗಿ, ಮಾತಿನಿಂದ ಹಾಗೂ ಶಾರೀರಿಕವಾಗಿ ಹಿಂಸೆ ಮಾಡದಿರುವುದು.

**(೧೧) ಸತ್ಯಂ:** ಎಂದರೆ ಇದ್ದದ್ದನ್ನು ಇದ್ದಂತೆ ಅಥವಾ ಕಂಡದ್ದನ್ನು ಕಂಡಂತೆ ಹೇಳುವುದು. ಅತಿ ವಿಶೇಷ ಸಂದರ್ಭಗಳಲ್ಲಿ ಮತ್ತು ವಿಶೇಷ ಕಾರಣಗಳಿಗಾಗಿ ಸತ್ಯವನ್ನು ಹೇಳದೆ ಇರಬೇಕಾಗಬಹುದು. ಆದರೆ ದಿನ ನಿತ್ಯದ ಜೀವನದಲ್ಲಿ ಸತ್ಯವನ್ನು ಪಾಲಿಸಬೇಕು.



**(೧೨) ಅಕ್ರೋಧಃ:** ಎಂದರೆ ಕೋಪಗೊಳ್ಳದೇ ಇರುವುದು. ಕೋಪವು ತಾನಾಗಿ ಬರದೇ ಅದಕ್ಕೊಂದು ಕಾರಣವಿರುತ್ತದೆ. ಸಹನೆಯಿಂದ ಆ ಕಾರಣವನ್ನು ಅರಿತು, ವಿಚಾರಿಸಿ ಕೋಪವನ್ನು ತಡೆಯಬೇಕು.

**(೧೩) ತ್ಯಾಗಃ:** ಎಂದರೆ ಬಿಡುವುದು. ಏನನ್ನು ಬಿಡುವುದು? ಎಂದರೆ ನಮ್ಮ ಆಧ್ಯಾತ್ಮಿಕ ಶಕ್ತಿಯನ್ನು ಕುಗ್ಗಿಸುವ ಗುಣಗಳನ್ನು ಬಿಡುವುದು.

**(೧೪) ಶಾಂತಿಃ:** ಎಂದರೆ ನಮ್ಮ ಅಂತಃಕರಣದಲ್ಲಿ ಅಲೆಗಳೆದ್ದು ಬಡಿದಾಟವಿರಬಾರದು. ನಮ್ಮ ಮನಸ್ಸನ್ನು ಶಾಂತಿಯ ಸಾಗರವಾದ ಪರಮಾತ್ಮನೆಡೆಗೆ ಕರೆದೊಯ್ದಾಗ ನಮಗೆ ಶಾಂತಿಯ ಅನುಭವವಾಗುತ್ತದೆ.

**(೧೫) ಅಪೈಶುನಮ್:** ಎಂದರೆ ಮತ್ತೊಬ್ಬರ ಮೇಲೆ ಚಾಡಿ ಹೇಳುವುದು ಅಥವಾ ದೂಷಿಸುವುದು. ಚಾಡಿ ಹೇಳಲೂ ಹಾಗೂ ಕೇಳಲೂ ಪ್ರಿಯವಾಗಿರಬಹುದು. ಆದರೆ ಅದು ಅನೇಕ ತೊಂದರೆಗಳನ್ನು ಉಂಟುಮಾಡುವುದಲ್ಲದೇ ನಮ್ಮ ಆಧ್ಯಾತ್ಮಿಕ ಶಕ್ತಿಯನ್ನು ಕುಗ್ಗಿಸುತ್ತದೆ.

**(೧೬) ದಯಾ:** ಎಂದರೆ ದಯೆ, ಕನಿಕರ, ಅನುಕಂಪ ಮತ್ತು ಕರುಣೆ. ನಮ್ಮ ಕೈಲಾದಷ್ಟು ನಾವು ಮತ್ತೊಬ್ಬರ ಕಷ್ಟವನ್ನು ಪರಿಹರಿಸುವುದಕ್ಕೆ ಮಾಡುವ ಪ್ರಯತ್ನವೇ ದಯೆ.

**(೧೭) ಅಲೋಲುಪ್ತತ್ವಂ:** ಎಂದರೆ ಇಂದ್ರಿಯಗಳಿಗೆ ಬೇಕಾದ ಬೇಕಾದ ವಸ್ತುಗಳು ಸಿಕ್ಕಿದೊಡನೆ ಅವುಗಳಲ್ಲಿ ಮನಸ್ಸುಗೂಡಿಸಿ ಮೈ ಮರೆಯುವುದು. ಇಂದ್ರಿಯಕ್ಕೆ ಸುಖ ಕೊಡುವ ವಸ್ತುಗಳು ಯಾವುವು ಎಂಬ ಯೋಚನೆಯನ್ನೇ ಮಾಡದೇ ಅವುಗಳ ಭೋಗದಲ್ಲಿ ತಲ್ಲೀನರಾಗುವುದು.

**(೧೮) ಮಾರ್ದವಂ:** ಎಂದರೆ ಮೃದುತ್ವ. ಮನಸ್ಸಿನಿಂದ ಹಾಗೂ ಮಾತಿನಿಂದ ಮೃದುತ್ವವಿರಬೇಕು. ಕೇವಲ ತೋರಿಕೆಯ ಮೃದುತ್ವವಲ್ಲ.

**(೧೯) ಹ್ರೀಃ:** ಎಂದರೆ ನಾಚಿಕೆ. ಎರಡು ತರಹ ನಾಚಿಕೆಗಳಿವೆ. ಮೊದಲನೆಯದು ಕೆಟ್ಟ ಕೆಲಸಗಳನ್ನು ಮನಸ್ಸಿನಿಂದ, ಮಾತಿನಿಂದ ಮತ್ತು ದೇಹದಿಂದ ಮಾಡಲು ನಾಚಿಕೆಯಾಗುವುದು. ಎರಡನೆಯದು, ನಮ್ಮನ್ನು ಬೇರೆಯವರು ಹೊಗಳಿದಾಗ ನಮಗೆ ಆಗುವ ನಾಚಿಕೆ. ಈ ಎರಡು ನಾಚಿಕೆಗಳೂ ಆಧ್ಯಾತ್ಮ ಸಾಧನೆಗೆ ಅವಶ್ಯಕ.

**(೨೦) ಅಚಾಪಲಮ್:** ಎಂದರೆ ಮನಸ್ಸಿನ ಅನೇಕ ರೀತಿಗಳಲ್ಲಿನ ಚಪಲತೆ. ಕ್ಷಣ-ಕ್ಷಣಕ್ಕೂ ಮನಸ್ಸು ಏನಾನ್ನಾದರೂ ಬೇಕು ಎಂದು ಓಡುತ್ತಿರುವುದು.

**(೨೧) ತೇಜಃ:** ಎಂದರೆ ಇಲ್ಲಿ, ಎಷ್ಟೇ ಕಷ್ಟ ಬಂದರೂ ಕುಗ್ಗದಿರುವುದು ಎಂದಾಗುತ್ತದೆ. ಆಧ್ಯಾತ್ಮ ಸಾಧನೆಗೆ ಇಂತಹ ತೇಜಸ್ಸು ಇರಬೇಕು.

**(೨೨) ಕ್ಷಮಾ:** ಎಂದರೆ ತಾಳ್ಮೆ. ಎಂತಹ ಸಮಯ ಅಥವಾ ಸನ್ನಿವೇಶ ಬಂದರೂ ಉದ್ವೇಗಗೊಳ್ಳದಿರುವುದು. ನಮ್ಮ ವಿಷಯದಲ್ಲಿ ಯಾರಾದರೂ ತಪ್ಪೆಸಗಿದ್ದರೂ ನಾವು ಅವರಿಗೆ ಕೆಟ್ಟದ್ದೆಣಿಸದಿರುವಂತಹ ಗುಣವೇ ಕ್ಷಮೆ. ನಮ್ಮಲ್ಲಿ ಉದ್ವೇಗದ ಪ್ರತಿಕ್ರಿಯೆ ಏಳಬಾರದು.

**(೨೩) ಧೃತಿಃ:** ಎಂದರೆ ಧೈರ್ಯ. ಕಷ್ಟ ಬಂದ ಕಾಲಕ್ಕೂ ವಿಚಲಿತರಾಗದಿರುವುದು. ಯಾವುದೇ ಕಾರಣಕ್ಕೂ ಮನಸ್ಸನ್ನು ವಿಕಾರಕ್ಕೊಳಗಾಗಿಸದೇ ಧೈರ್ಯ ಹಾಗೂ ಸ್ಥಿರತೆಯಿಂದಿರುವುದು.

**(೨೪) ಶೌಚಂ:** ಎಂದರೆ ಶುಚಿತ್ವ. ಇದರಲ್ಲಿ ಎರಡು ಬಗೆ- ಮೊದಲನೆಯದು ಅಂತಃ ಶುದ್ಧಿ ಮತ್ತು ಅದರ ಜೊತೆಗೆ ಬಹಿಃ ಶುದ್ಧಿ. ಶರೀರ ಮಾತು ಮತ್ತು ಮನಸ್ಸುಗಳು ಶುದ್ಧಿಯಾಗಬೇಕು.

**(೨೫) ಅದ್ರೋಹ:** ಎಂದರೆ ದ್ರೋಹ ಮತ್ತು ವಂಚನೆ ಮಾಡದಿರುವುದು. ದ್ರೋಹ ಅಥವಾ ವಂಚನೆ ಮಾಡಿದಾಗ ಇನ್ನೊಬ್ಬರಿಗೆ ಅನಿಷ್ಟ ಉಂಟಾಗುವುದಲ್ಲದೆ ತೊಂದರೆಯೂ ಆಗುತ್ತದೆ. ಅಷ್ಟೇ ಅಲ್ಲದೆ ನಮಗೆ ವಂಚನೆ ಮಾಡುವ ಬುದ್ಧಿಯೂ ಬೇರೂರುತ್ತದೆ.

**(೨೬) ನಾತಿಮಾನಿತಾ:** ಎಂದರೆ ದುರಭಿಮಾನ. ತನ್ನ ಬಗ್ಗೆಯೇ ತಾನು ಅತಿಯಾದ ಅಭಿಮಾನ ಇಟ್ಟುಕೊಂಡು, ಅದರಿಂದ ಇತರರು ತನ್ನನ್ನು ಹೊಗಳುತ್ತಿರಬೇಕು ಎಂಬ ಭಾವನೆ ಬೇರೂರುತ್ತದೆ.

**ಆರು ಅಸುರೀ ಗುಣಗಳು**

ಶ್ರೀಕೃಷ್ಣ ಜಗದ್ಗುರುವು ಮನುಷ್ಯನನ್ನು ಖಂಡಿತವಾಗಿಯೂ ಕೆಳಕ್ಕೆ ತಳ್ಳುವ ಆರು ದುರ್ಗುಣಗಳನ್ನು ಹೇಳುತ್ತಾನೆ. ಈ ಆರೂ ದುರ್ಗುಣಗಳೂ ಪರಸ್ಪರವಾಗಿ ಸೇರಿ ವೃದ್ಧಿಗೊಂಡು ಮನುಷ್ಯನನ್ನು ರಾಕ್ಷಸ ಅಥವಾ ಅಸುರನನ್ನಾಗಿ ಮಾಡುತ್ತದೆ. ಈ ಆರು ಆಸುರೀ ಗುಣಗಳು ಯಾವುವೆಂದರೆ:

**(೧) ದಂಭಃ:** ಎಂದರೆ ಬರೀ ಹೊರ ತೋರಿಕೆಗೆ ಮಾಡುವ ನಾಟಕ. ಧಾರ್ಮಿಕತೆ ಒಳ ಜೀವನದಲ್ಲಿಟ್ಟುಕೊಳ್ಳದೆ ಕೇವಲ ಹೊರ ತೋರಿಕೆಗೆ ಧಾರ್ಮಿಕತೆಯ ಡೋಂಗು ಹಾಕುವುದು. ಇದೇ ರೀತಿ ಹಣ, ವಿದ್ಯೆ ಮುಂತಾದ ವಿಷಯಗಳಲ್ಲಿ ಸಹಜವಾದ ನೈಜತೆಯಿಲ್ಲದೆ ಕೇವಲ ಕೃತಕತೆ ತೋರುವುದು.

**(೨) ದರ್ಪ:** ಎಂದರೆ ಸೊಕ್ಕು, ಗರ್ವ ಮತ್ತು ಕೊಬ್ಬು. ದರ್ಪವಿರುವವನು- ಹಣವಂತ ಅಥವಾ ವಿದ್ಯಾವಂತನಿರಬಹುದು. ಆದರೆ ಅದರ ಆಧಾರದ ಮೇಲೆಯೇ ದುರಹಂಕಾರವಿರುತ್ತದೆ.

**(೩) ಅಭಿಮಾನಃ:** ಎಂದರೆ, ತನ್ನನ್ನು ಎಲ್ಲರೂ ದೊಡ್ಡವನೆಂದು ಭಾವಿಸಬೇಕು ಮತ್ತು ತನಗೆ ಎಲ್ಲರೂ ಹೆಚ್ಚಾಗಿ ಮರ್ಯಾದೆ ನೀಡಬೇಕು ಎಂಬ ಕಾಂಕ್ಷೆ.

**(೪) ಕ್ರೋಧಃ:** ಎಂದರೆ ಸಹನೆಯಿಲ್ಲದ ಕೋಪ. ದರ್ಪವಿದ್ದಾಗ ಸುಲಭವಾಗಿ ಕೋಪ ಬರುತ್ತದೆ. ತನ್ನ ಮಾನಕ್ಕೇನಾದರೂ ಸ್ವಲ್ಪ ಕುಂದುಂಟಾದರೆ ಸಹನೆಯಿಲ್ಲದ ಕೋಪ ಬಂದು ಕಣ್ಣುಗಳು ಕೆಂಪಾಗುವುದಲ್ಲದೆ ತುಟಿಗಳು ಅದುರತೊಡಗುತ್ತವೆ.

**(೫) ಪಾರುಷ್ಯಂ:** ಎಂದರೆ ಸದಾಕಾಲ ಜೋರಾದ ಹಾಗೂ ಕಠಿಣವಾದ ಮಾತುಗಳು ಹಾಗೂ ಅಪಶಬ್ದ ಬರುತ್ತದೆ.

**(೬) ಅಜ್ಞಾನಂ:** ಎಂದರೆ ವಿವೇಕ ಶೂನ್ಯತೆ. ಅಜ್ಞಾನದ ಸ್ಥಿತಿಯಲ್ಲಿ ಏನು ಮಾಡಬೇಕು ಅಥವಾ ಮಾಡಬಾರದು, ಏನು ಹೇಳಬೇಕು ಅಥವಾ ಹೇಳಬಾರದು ಎಂಬ ವಿವೇಚನೆಯಿರುವುದಿಲ್ಲ.

**ಆಸುರೀ ಗುಣಗಳಿಂದ ವಿನಾಶ**

ಮೇಲೆ ಹೇಳಿದ ೩೨ ಗುಣಗಳಲ್ಲಿ ಇಪ್ಪತ್ತಾರು ದೈವೀ ಗುಣಗಳು ಮತ್ತು ಆರು ಆಸುರೀ ಗುಣಗಳು. ಆಸುರೀ ಗುಣಗಳಿಂದ ಮನುಷ್ಯನಿಗೆ ಜೀವನದಲ್ಲಿ ಅಶಾಂತಿ ಮತ್ತು ಬಂಧನಗಳುಂಟಾಗಿ, ಜೀವನವು ಕೆಳ ಮುಖವಾಗಿದ್ದು ನಾಶದ ಕಡೆಗೆ ಹೋಗುತ್ತದೆ. ಆದರೆ ದೈವೀ ಗುಣಗಳು ಜೀವನವನ್ನು ಮೇಲ್ಮುಖವಾಗಿಸಿ ಮನುಷ್ಯನನ್ನು ಬಂಧನಗಳಿಂದ ಬಿಡಿಸುತ್ತದೆ.

(೭ನೇ ಪುಟಕ್ಕೆ…)


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



# ಅಪ್ಪನ ತಪ್ಪಾ?



ಅನಿಲ್ ಭಾರಧ್ವಾಜ

'ಮನುಷ್ಯನ ವೇಷ ಹಾಕಿಕೊಂಡು ಹೋಗುವುದು ಮರೆಯಬೇಡ. ಇಲ್ಲೇ ಕೂತು ಎಲ್ಲವನ್ನು ನೋಡಬಹುದಲ್ಲ, ಅಲ್ಲಿಗೇ ಹೋಗಿ ಅನುಭವಿಸುವ ನಿನ್ನ ಕುತೂಹಲ, ಹುಡುಗು ಬುದ್ಧಿಯೋ, ಸಾಹಸ ಮನೋಭಾವವೋ ತಿಳಿಯದು,' ಸ್ವಲ್ಪ ತಲ್ಲಣಿಸಿದಂತೆಯೇ ಇದ್ದ ತಾಯಿ ನುಡಿದಳು.

ಭೂಲೋಕಕ್ಕೆ ಹೊರಡಲು ಸಜ್ಜಾಗುತ್ತಿದ್ದ ಸೃಷ್ಟಿಕರ್ತನ ಮಗನಿಗೆ ಅದೇನೋ ಸಡಗರ ಮತ್ತು ಅದರ ಜೊತೆ ಮೊದಲನೇ ಬಾರಿ ಹೋಗುತ್ತಿರುವ ಕಾರಣ ದುಗುಡ ಮನಸ್ಸು. ಅಪ್ಪ ತಾನು ಸೃಷ್ಟಿಸಿದ ಮನುಷ್ಯ ಜೀವಿಯ ಬಗ್ಗೆ ಬಹಳ ಹೆಮ್ಮೆಯಿಂದ ಆಗಾಗ್ಗೆ ಹೇಳಿದ್ದು ಅವನ ಕುತೂಹಲ ಮತ್ತಷ್ಟು ಕೆರಳಿಸಿತ್ತು. ಎಲ್ಲಾ ಪ್ರಾಣಿಗಳಿಗೂ ಮೀರಿ ಮನುಷ್ಯನಲ್ಲಿ ತುಂಬಿರುವ ಬುದ್ಧಿಶಕ್ತಿ, ಅದರಿಂದ ಅವನು ಭೂಲೋಕದಲ್ಲಿ ಮಾಡಿರುವ ಮುನ್ನಡೆ ಕಂಡು ಗೆಲುವಿನಿಂದ ಹಿಗ್ಗುತ್ತಿದ್ದನು.

'ನೀನು ದುಂಡಾದ ಮನುಷ್ಯನ ಆಕಾರ ತಾಳಿ, "ಗೋಲು" ಎಂಬ ನಾಮಧೇಯ ಧರಿಸಿ ಭೂಮಿಗೆ ಹೋಗು,' ಅಮ್ಮ ಹೇಳಿದಳು. 'ನಿನ್ನ ತಂದೆ ಹೇಳಿದಂತೆ ವಿಸ್ತಾರವಾದ ವರದಿ ಮಾಡಿಕೊಂಡು ಜೋಪಾನವಾಗಿ ಮರಳಿ ಬಾ.'

ತಾಯಿಗೆ ನಮಸ್ಕರಿಸಿ, ತಂದೆಯನ್ನು ನೆನೆದು, ಭೂಮಿಯ ಕಡೆಗೆ ಗೋಲುವಾಗಿ ಇಳಿಯ ತೊಡಗಿದ. ನಿರ್ಮಲವಾದ ಬ್ರಹ್ಮಾಂಡದ ಹಲವು ಲೋಕಗಳ ಸೊಬಗನ್ನು ನೋಡಿ ಆನಂದಿಸುತ್ತಾ ಮುಂದೆ ಸಾಗಿದ. ದೂರದಲ್ಲಿ ನೀಲವರ್ಣದಿಂದ ಗೋಳಾಕಾರದಲ್ಲಿ ಕಾಣುತ್ತಿದ್ದ ಭೂಲೋಕ, ಅದರ ಪಕ್ಕದಲ್ಲೇ ಬಿಳಿಯ ಚೆಂಡಿನಂತಿದ್ದ ಚಂದ್ರನನ್ನು ಕಂಡು ಗೋಲುವಿನ ಉದ್ರೇಕ ಹೆಚ್ಚಾಗುತ್ತಿತ್ತು. ಇನ್ನೇನು ಧರೆಗಿಳಿಯುವ ಸಮಯದಲ್ಲಿ ಒಂದು ರೀತಿಯ ಹೊಗೆಯ ವಾಸನೆಯಿಂದ ಹೊಟ್ಟೆ ತೊಳಸುವಂತೆ ಆಯಿತು. ಬಹುಶಃ ಅಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳಬೇಕೆಂದು ಯೋಚಿಸಿ, ಉಸಿರು ಹಿಡಿದುಕೊಂಡೇ ಅವತರಣ ಮಾಡಿದನು.



'ಅಯ್ಯೋ, ಏಕಿಲ್ಲಿಯ ಗಾಳಿ ಸ್ವಲ್ಪ ಉಸಿರಾಡಲು ಕಷ್ಟಪಡಿಸುತ್ತಿರುವಂತಿದೆ. ನಿನಗೇನೂ ಆಗುತ್ತಿಲ್ಲವೆ?' ಪಕ್ಕದಲ್ಲೇ ಅವಸರದಲ್ಲಿ ಚಲಿಸುತಿದ್ದ ಒಬ್ಬ ಮಾನವನನ್ನು ಗೋಲು ಕೇಳಿದ.

'ಯಾಕಪ್ಪ? ನೀನೇನು ಅಂತರಿಕ್ಷದಿಂದ ಈಗಿನ್ನೂ ಇಳಿದೆಯಾ? ಯಾವತ್ತೂ ಇಲ್ಲಿನ ಗಾಳಿ ಕುಡಿದಿಲ್ಲದ ಹಾಗೆ ಆಡುತ್ತಿದ್ದೀಯ. ಎಲ್ಲಿ ನೀನು ಕೆಲಸ ಮಾಡೋದು? ಸುತ್ತಲೂ ನೋಡು. ಹೆಜ್ಜೆಗೊಂದು ಇರುವ ಫ್ಯಾಕ್ಟರಿಗಳು ಉಗಿಯುತ್ತಿರುವ ವಿಷದ ಗಾಳಿಗೆ ನಾವು ಬದುಕಿರುವುದೇ ಹೆಚ್ಚು.' ವ್ಯಂಗ್ಯವಾಗಿ ನಕ್ಕು ಮುಂದೆ ಹೋದ ಆ ಮಾನವ. 'ಊರಿಗೆ ಹೊಸಬರಿದ್ದ ಹಾಗೆ ಇದ್ದೀರ. ಆ ಅಂಗಡಿಗೆ ಹೋಗಿ ಒಂದು ಏರ್ ಮಾಸ್ಕ್ ತಗೊಳ್ಳಿ. ಎಲ್ಲಾ ಸರಿಹೋಗತ್ತೆ.' ಕೆಮ್ಮಿಕೊಂಡೇ ಹತ್ತಿರದ ಅಂಗಡಿಗೆ ಹೋಗಿ ಬಾಯಿ-ಮೂಗು ಮುಚ್ಚಿಕೊಳ್ಳುವ, ಗಾಳಿ ಶೋಧಿಸುವ ಮುಸುಕು-ಪರದೆಯೊಂದು ಖರೀದಿಸಿದ. 'ಕಾರ್ಖಾನೆಗಳಲ್ಲಿ ಇಷ್ಟೆಲ್ಲಾ ಸಾಮಗ್ರಿ ತಯಾರಿಸಿ ಏನು ಮಾಡುತ್ತಾರೆ? ಊರು, ಮನೆ ಭರ್ತಿ ಈ ಪದಾರ್ಥಗಳೇ ತುಂಬಿರುತ್ತದಲ್ಲವೆ?' ದುಡ್ಡು ಕೊಡುತ್ತಾ ಅಂಗಡಿಯವನನ್ನು ಗೋಲು ವಿಚಾರಿಸಿದ. 'ಇಲ್ಲಿ ಕೆಲಸ ಮಾಡುವರಿಂದ ಜೀತದಾಳುಗಳಂತೆ ದುಡಿಸಿಕೊಂಡು, ಅವರಿಗೆ ಸಂಸಾರ ತೂಗಿಸಲೂ ಆಗದಷ್ಟು ಪುಡಿಗಾಸು ಕೊಟ್ಟು, ವಸ್ತುಗಳ ಉತ್ಪಾದನೆ ಮಾಡಿಸುತ್ತಾರೆ. ನಂತರ ಎಲ್ಲವನ್ನು ಹಡಗಿಗೆ ತುಂಬಿ, ಅವರ ಶ್ರೀಮಂತ ದೇಶಗಳಲ್ಲಿ ಒಂದಕ್ಕೆ ನೂರಕ್ಕಿಂತ ಹೆಚ್ಚುಪಟ್ಟು ದುಡ್ಡಿಗೆ ಮಾರುತ್ತಾರೆ. ನಮ್ಮ ಮನೆ ಕಸ ಮಾಡಿ, ಅವರ ಮನೆ ಅಲಂಕರಿಸಿಕೊಳ್ಳುತ್ತಾರೆ,' ಚಿಲ್ಲರೆ ವಾಪಸ್ಸು ಕೊಡುತ್ತಾ ಹತಾಶನಾಗಿ ಹೇಳಿದ ಅಂಗಡಿಯವ. 'ಆದರೆ ಅದು ಕ್ರೂರವಾದ ವಂಚನೆ ಅಲ್ಲವೆ? ಅದನ್ನು ಜನ ಹೇಗೆ ಒಪ್ಪುತ್ತಾರೆ? ದೇಶದ ರಾಜ ಹೇಗೆ ಅನುಮತಿಸಿದ್ದಾನೆ?' ಗೋಲು ಪ್ರಶ್ನಿಸಿದ.

'ದುಡ್ಡಿದ್ದವನೇ ದೊಡ್ಡಪ್ಪ. ಇದಕ್ಕೆ ಬಂಡವಾಳಶಾಹಿ ಎಂದು ಓದಿದವರು ಕರೆಯುತ್ತಾರೆ,' ಅಂಗಡಿಯವನು ಉತ್ತರಿಸಿದ.

"ಸಂಪತ್ತು, ಸಮೃದ್ಧಿಯ ವಿತರಣೆ ನ್ಯಾಯವಾಗಿ ನಡೆಯದೆ, ಶ್ರೀಮಂತಿಕೆ ಕೇಂದ್ರೀಕೃತವಾಗಿದೆ." ಗೋಲು ವರದಿಯಲ್ಲಿ ಬರೆದುಕೊಂಡು ಮುನ್ನಡೆದ.

ದೂರದಲ್ಲಿ ಸಮುದ್ರದ ದಂಡೆಯಲ್ಲಿ ಪೇರಿಸಿಟ್ಟಿರುವ ಬೃಹದಾಕಾರದ ಡಬ್ಬಗಳು ಅವನ ಗಮನ ಸೆಳೆಯಿತು. ಸಮೀಪ ಹೋಗಿ ಅವುಗಳ ಪ್ರಮಾಣ, ಅದನ್ನೆಲ್ಲಾ ತುಂಬಿಕೊಂಡಿದ್ದ ದೈತ್ಯಾಕಾರದ ಹಡಗುಗಳನ್ನು ಕಂಡು, ಮಾನವನ ಬುದ್ಧಿಶಕ್ತಿಯನ್ನು ಮೆಚ್ಚಿ ಆನಂದಿಸಿದ. "ಅಬ್ಬಾ! ಇಷ್ಟು ಸಣ್ಣ ಗಾತ್ರದ ಮಾನವ ಬೃಹದಾಕಾರದ ಈ ಹಡಗುಗಳನ್ನು ಮಾಡಿ, ಈ ಡಬ್ಬಗಳನ್ನು ತುಂಬಿಸಿ, ಅದನ್ನು ನೀರಿನಲ್ಲಿ ಸರಾಗವಾಗಿ ತೇಲಿಸಿ ಚಲಿಸಿಬಿಡುತ್ತಾನೆ. ಅದ್ಭುತ! ಪ್ರಾಯಶಃ, ಇವೆಲ್ಲಾ ಆ ಶ್ರೀಮಂತ ದೇಶಕ್ಕೆ ರವಾನೆಯಾಗುತ್ತಿರಬೇಕು. ನಾನು ಆ ದೇಶವನ್ನು ಹೋಗಿ ನೋಡಲೇಬೇಕು," ಒಳಗೆ ಮಾತಾಡಿಕೊಂಡು ಹಡಗಿನ ಬಳಿ ನಡೆದ ಗೋಲು.

'ಏನಯ್ಯಾ? ನಿಂತ್ಕೋ. ನಿಮ್ಮಪ್ಪನ ದೋಣಿ ಅನ್ಕೊಂಡು ಸೀದಾ ಗೂಳಿ ತರಹ ನುಗ್ತಾ ಇದೀಯ?' ಮುಂದೆ ನಿಂತಿದ್ದ ಕಾವಲುಗಾರ ಗದರಿದ.

'ಆ...ಆಮ್... ಅದು... ಈ ಹಡಗು ಹೋಗುವ ದೇಶಕ್ಕೆ ನಾನೂ ಹೋಗಬೇಕಿತ್ತು, ಆಗಬಹುದೆ?' ಭಯ ಪಟ್ಟುಕೊಂಡೇ ಗೋಲು ಕೇಳಿದ.

'ತಮಾಷೆ ಮಾಡ್ತಾ ಇದೀಯೋ? ಇಲ್ಲಾ ತಿಕ್ಕಲು ಹಿಡಿದಿದೆಯೋ ನಿನಗೆ? ಸಾಮಗ್ರಿ ಮತ್ತು ಚಾಲಕರನ್ನು ಬಿಟ್ಟು, ಒಂದು ಹುಳುಪ್ರಾಣಿಯನ್ನೂ ಆ ದೇಶದ ಒಳಗೆ ಬಿಡುವುದಿಲ್ಲ. ಒಳಗೆ ಹೋಗಕ್ಕೆ ವೀಸಾ ಬೇಕು; ಅದು ಸಿಗೋಕ್ಕೆ ತಿಂಗಳುಗಟ್ಟಲೆ ಕಾಯಬೇಕು. ಬಂದ್ಬಿಟ್ಟ ದೊಡ್ಡ ಮಹಾರಾಜ!' ಹಂಗಿಸಿ ಪಕ್ಕಕ್ಕೆ ತಳ್ಳಿದ ಕಾವಲುಗಾರ.

'ಅಲ್ಲಪ್ಪಾ, ಭೂಮಿ ಒಂದಲ್ಲವೇನು? ಅದು ಇಲ್ಲಿರುವ ಎಲ್ಲಾ ಜೀವಿಗಳ ಸ್ವತ್ತಲ್ಲವೇನು? "ವಿಶ್ವವೇ ಒಂದು ಕುಟುಂಬ" ಎಂದು ಎಲ್ಲರೂ ಕೂಡಿ ಬದುಕುತ್ತಾರೆಂದು ತಿಳಿದಿದ್ದೆ. ಅದು ಸುಳ್ಳೇ?' ಸ್ವಲ್ಪ ಎದೆಗುದಿಯಿಂದಲೇ ಗೋಲು ಕೇಳಿದ.

'ನಿನಗೆ ಬುದ್ಧಿ ಭ್ರಮಣೆಯೇ ಆಗಿರುವುದು ಎಂದು ಈಗ ಖಚಿತ ಆಯ್ತು. ಇರಲಿ. ನನಗೂ ಯಾರ ಜೊತೆನೂ ಮಾತಾಡದೆ ಬೇಜಾರಾಗಿದೆ. ಹೇಳ್ತೀನಿ ಕೇಳು. ನಿನಗೆ ಹೋಗಿರುವ ಬುದ್ಧಿ ಸ್ವಲ್ಪ ವಾಪಸ್ ಬರಬಹುದೇನೋ... ಈ ಪ್ರಪಂಚದಲ್ಲಿ ನೂರಾರು ದೇಶಗಳು. ಆ ದೇಶಗಳನ್ನು ಬೇರೆ ಮಾಡಲು ಸುತ್ತಲೂ ಗೋಡೆಗಳು, ಬೇಲಿಗಳು. ದೇಶಗಳನ್ನು, ಆಡುವ ಭಾಷೆ, ದೇಹದ ಆಕಾರ ಮತ್ತು ಬಣ್ಣ, ಪೂಜಿಸುವ ದೇವರು, ಹೀಗೆ ಬೇಕಾಷ್ಟು ತರಹ ಛಿದ್ರ-ಛಿದ್ರ ಮಾಡಿ ಇಟ್ಟಿದ್ದಾರೆ. ಈ ದೇಶಗಳು ಒಬ್ಬರಿಗೊಬ್ಬರು "ನಾವೇ ಉತ್ತಮರು. ನೀವು ನೀಚರು" ಎಂದು ಕಚ್ಚಾಡಿ ಲಕ್ಷಾಂತರ ಜನರನ್ನು ಕೊಲ್ಲುತ್ತಲೇ ಬಂದಿದ್ದಾರೆ. ಅದು ಮನುಷ್ಯ ಸರ್ವನಾಶವಾಗುವ ವರೆಗೂ ನಡೆಯುತ್ತಲೇ ಇರುತ್ತದೆ. ಅದಿರಲಿ ಬಿಡು. ಅವರ ದೇಶದಲ್ಲೇ, ಧರ್ಮದ ಹೆಸರಿನಲ್ಲಿ ಒಬ್ಬರನ್ನೊಬ್ಬರು ಕೊಚ್ಚಿ ಹಾಕಿ ಸಾಯಿಸುತ್ತಾರೆ. ಅಕಸ್ಮಾತ್, ಈ ಹಿಂಸೆಯಿಂದ ಬಚಾವ್ ಆಗಿ, ನೆರೆಹೊರೆಯ ದೇಶದವರನ್ನು ಆಶ್ರಯ ಕೇಳಿ, ವಲಸೆ ಹೋಗಲು ಪ್ರಯತ್ನಿಸಿದರೆ, ಅದೃಷ್ಟ ಇರಬೇಕು. ನಿನ್ನ ಧರ್ಮ ಅವರದ್ದೇ ಆಗಿರಬೇಕು. ಇಲ್ಲಾ ನೀನು ನೋಡಲು ಅವರಂತೆ ಇರಬೇಕು. ಅದಾವುದೂ ಕೂಡಲಿಲ್ಲವೋ, ಎಳೆ ಮಗುವಾಗಿದ್ದರೂ ಸರಿಯೇ, ಸಾಯಲು ಬಿಡುತ್ತಾರೆ; ಆದರೆ ದೇಶದ ಒಳಗೆ ಬಿಡುವುದಿಲ್ಲ,' ನೊಂದು ನುಡಿದ ಕಾವಲುಗಾರ.

'ಆದರೆ ಅದು ಮನುಷ್ಯ ಧರ್ಮವಿರಲಿ, ಪ್ರಾಣಿ ಧರ್ಮದ ಉಲ್ಲಂಘನೆ ಅಲ್ಲವೇ? ಪ್ರಾಣಿಗಳು ಕಾಡಿನ ಕಾನೂನು ಬಹಳ ನಿಷ್ಠೆಯಿಂದ ಕಾಪಾಡುತ್ತವೆ ಎಂದು ಕೇಳಿದ್ದೆ. ತಮಗೆ ಆಹಾರ ಬೇಕಾದಾಗಷ್ಟೇ ಇನ್ನೊಂದು ಪ್ರಾಣಿಯನ್ನು ಬೇಟೆಯಾಡಿ ಕೊಂದು ತಿನ್ನುವುದು; ಸ್ವವರ್ಗದ ಇನ್ನೊಂದು ಜೀವಿಯನ್ನು ಕ್ಷುಲ್ಲಕ ಕಾರಣಗಳಿಗೆ ಕೊಲ್ಲುವ ಅಪರೂಪದ ಕ್ರೂರ ಪ್ರಾಣಿಯೆ ಈ ಮನುಷ್ಯನು?

(ಮುಂದಿನ ಪುಟಕ್ಕೆ...)


Copyright © KCO – Brindavana

ಸಂಚಿಕೆ
೧೮
ಸೆಪ್ಟೆಂಬರ್, ೨೦೧೮



(.. ಹಿಂದಿನ ಪುಟದಿಂದ)

*ಅಪ್ಪನ ತಪ್ಪಾ?*

"ಮಾನವ ಬುದ್ಧಿಜೀವಿಗಳಲ್ಲಿ ವರಿಷ್ಠ" ಎಂದು ಹೇಳಿದ್ದನಲ್ಲ ನನ್ನ ತಂದೆ, ಅದು ತಪ್ಪೇ?' ಗೋಲು ಗಾಬರಿಯಿಂದಲೇ ಕೇಳಿ, ವರದಿಯಲ್ಲಿ ಏನೋ ತಿದ್ದಿಕೊಂಡ.

'ಯಾರದು ನಿನ್ನ ಅಪ್ಪ? ದೊಡ್ಡ ಪ್ರಾಣಿ ಶಾಸ್ತ್ರಜ್ಞನೋ? ನಾವು ಮನುಷ್ಯರು ತುಂಬಾ ಕ್ರೂರಿಗಳೇ. ಬೇರೆ ಪ್ರಾಣಿಗಳಿಗಿಂತ ಸ್ವಲ್ಪ ಬುದ್ಧಿ ಜಾಸ್ತಿ ಇದೆ ಅಂತ, ಅದನ್ನ ಹಾನಿಕಾರಕವಾಗಿ ಉಪಯೋಗಿಸುತ್ತಿದ್ದೇವೆ. ನಿನ್ನಪ್ಪನಿಗೆ ಅಲ್ಲಿರುವ ನಮ್ಮ ಪ್ರಾಣಿ ಸಾಕಾಣಿ ಕೇಂದ್ರಗಳನ್ನು ತೋರಿಸು. ಕೋಟ್ಯಾಂತರ ಪ್ರಾಣಿಗಳನ್ನು ಕೀಳುಮಟ್ಟದ ಸೌಲಭ್ಯದಲ್ಲಿ ಅಸಹಜವಾಗಿ, ಕರುಣಾಹೀನವಾಗಿ ಬೆಳೆಸಿ, ಅಷ್ಟೇ ಕಳಪೆಯಾಗಿ ಅವುಗಳ ಜೀವ ತೆಗೆದು, ಡಬ್ಬಿಗಳಲ್ಲಿ ಮಾಂಸ ಮಾಡಿಡುತ್ತೇವೆ. ಅದರ ಮೇಲೆ ನಮ್ಮ ಮೂರ್ಖತನ ಕೇಳು... ತಿನ್ನುವ ಮಾಂಸದ ಮೇಲಿನ ಗಲಾಟೆಯಲ್ಲಿ ನಾವು ಪರಸ್ಪರ ಹೊಡೆದಾಡಿ ಸಾಯುತ್ತಿದ್ದೇವೆ. ಇದಕ್ಕೂ ದೊಡ್ಡ ವಿಪರ್ಯಾಸ ಇದೆಯಾ? ಕೆಲವು ದೇಶಗಳು ಎಂಥಹ ಮಾರಕಾಸ್ತ್ರಗಳನ್ನು ಶೇಖರಿಸಿಟ್ಟಿದ್ದಾರೆಂದರೆ, ನಿಮಿಷಾರ್ಧದಲ್ಲಿ ಇಡೀ ಪ್ರಪಂಚದ ಅವನತಿಗೊಳಿಸಬಹುದು,' ಕಾವಲುಗಾರ ನಿಟ್ಟುಸಿರು ಬಿಟ್ಟ.

'ನಂಬಲಸಾಧ್ಯ. ನಿಜವಾಗಲೂ 'ನಂಬಲಸಾಧ್ಯ ಈ ಮಾನವನ ಚರ್ಯೆಗಳು,' ಗೋಲು ವ್ಯಥೆಪಟ್ಟ.

ಗೋಲುವಿನ ಮುಂದಿನ ನಿಲುಗಡೆ ಆ ಶ್ರೀಮಂತ ದೇಶದ ದೊಡ್ಡ ನಗರವೊಂದು.

ಆ ನಗರದಲ್ಲಿದ್ದ ಗಗನಚುಂಬಿ ಕಟ್ಟಡಗಳು, ಅದರಲ್ಲಿರುವ ನೂರಾರು ಮಹಡಿಗಳು. ಒಂದಕ್ಕಿಂತ ಒಂದು ವಿಭಿನ್ನ. ಹಕ್ಕಿಗಳಂತೆ ಹಾರಾಡುತ್ತಿದ್ದ ವಿಮಾನಗಳು. ಕೆಲವು ವಿಮಾನಗಳು ಸಣ್ಣ ಪಟ್ಟಣದಂತೆಯೇ ಇದ್ದವು. ಒಳಗೆ ಮನುಷ್ಯನ ಎಲ್ಲ ವಿಲಾಸವಸ್ತುಗಳು; ಸೇತುವೆಯ ಮೇಲೆ, ಭೂಮಿಯ ಒಳಗೆ ಮತ್ತು ನೆಲದ ಮೇಲೆ ಪ್ರಾಣಿಗಳಂತೆ ಹರಿಯುವ ಕಾರು-ಬಸ್ಸುಗಳು, ರೈಲುಗಳು ಗೋಲುವನ್ನು ಮಂತ್ರಮುಗ್ಧನನ್ನಾಗಿ ಮಾಡಿದ್ದವು. ಮಾನವನ ಈ ಬುದ್ಧಿಯ ಬಳಕೆ ನಿಜಕ್ಕೂ ಪ್ರಶಂಸಾರ್ಹ ಎಂದು ಚಿಂತಿಸಿದ. ಆದರೆ ಮನುಷ್ಯ ಕೃತಕ ದೀಪವನ್ನು ಕಂಡುಹಿಡಿದು, ಸೂರ್ಯ-ಚಂದ್ರರನ್ನು ಅನುಸರಿಸದೆ, ಹಗಲು-ರಾತ್ರಿಗಳ ಪ್ರಜ್ಞೆಯನ್ನೇ ಮರೆಯುತಿರುವುದು, ಬೇರೆ ಪ್ರಾಣಿಗಳಿಗಿಂತ ಹೀನಾವಸ್ಥೆ ಎಂದು ಬರೆದುಕೊಂಡ. ಕೌತುಕದಿಂದ ಸೇತುವೆ ಮೇಲೆ ಸರಿಯುತ್ತಿದ್ದ ರೈಲೊಂದನ್ನು ಹೊಕ್ಕ. ತುಂಬಿದ ರೈಲು. ವಿವಿಧ ಉಡುಪು ಧರಿಸಿ, ಸ್ಫುಟವಾಗಿ ಕಾಣುತ್ತಿದ್ದರು ಆ ಸಂಚಾರಿಗಳು. ಆದರೆ ಗೋಲುವಿಗೆ ಏನೋ ವಿಚಿತ್ರವಿದೆಯಲ್ಲ ಅನಿಸಿತು. ಬೇರೆ ಪ್ರಾಣಿಗಳಂತೆ ಪರಸ್ಪರ ಸಂಭಾಷಣೆಗಳಿಲ್ಲ. ಎಲ್ಲರ ಕೈಯಲ್ಲೂ ಕಣ್ಣು ಕೋರೈಸುವ, ಆಯಾಕಾರದ ಒಂದು ವಸ್ತುವಿತ್ತು. ಕೆಲವರು ಅದರೊಂದಿಗೆ ಕಿವಿಯಲ್ಲಿ ಹಿಡಿದು ಮಾತನಾಡುತ್ತಿದ್ದರೆ, ಕೆಲವರು ಅದನ್ನು ಬೆರಳುಗಳಿಂದ ನಾನಾ ರೀತಿಯಲ್ಲಿ ಒತ್ತುತ್ತಿದ್ದರು, ಬೀಸುತ್ತಿದ್ದರು.

'ಏನಮ್ಮ, ನಿಮ್ಮಗಳ ಕೈಲಿರುವ ಆ ವಸ್ತುವೇನು? ಏಕೆ ಎಲ್ಲರೂ ಅದನ್ನು ಹಿಡಿದಿದ್ದಾರೆ?' ಗೋಲು ತುಸು ಹಿಂದೇಟು ಹಾಕುತ್ತಲೇ ಯುವತಿಯೊಬ್ಬಳನ್ನು ಕೇಳಿದ.

'ಒಹ್! ನಿಮ್ಮ ಹತ್ರ ಫ್ಲಿಪ್ ಫೋನ್ ಇದ್ಯಾ ಇನ್ನೂ? ನಮ್ಮೆಲ್ಲರ ಹತ್ತಿರ ಇರೋದು ಸ್ಮಾರ್ಟ್ ಫೋನ್. ತುಂಬಾ ಅಡ್ವಾನ್ಸ್. ಪ್ರಪಂಚದ ಯಾವುದೇ ಮೂಲೇಲಿ ಇರುವರ ಜೊತೆ ಮಾತಾಡ್ ಬಹುದು, ಮೆಸೇಜ್ ಕಳಿಸಬಹುದು, ವಿಡಿಯೋ ತೋರಿಸಬಹುದು. ಪ್ರಪಂಚನೇ ನಿಮ್ಮ ಜೇಬಿನಲ್ಲಿ ಇದೆ ಅಂದ್ಕೊಳ್ಳಿ,' ಧಿಮಾಕಿನಿಂದ ಯುವತಿ ನುಡಿದಳು.

'ಆದರೆ, ಸಂಘಜೀವಿಯಾಗಿರಬೇಕಾದ ಮನುಷ್ಯ ಪ್ರಾಣಿ, ಅಕ್ಕ-ಪಕ್ಕದಲ್ಲಿರುವರನ್ನು ಲೆಕ್ಕಿಸದೆ ಕುಳಿತಿದ್ದರೆ, ಇಲ್ಲಿ ಏನೋ ಎಡವಟ್ಟು ಆಗಿದೆ ಅನಿಸುವುದಿಲ್ಲವೇ ನಿಮಗೆ? ನಿಮ್ಮದೇ ಸಣ್ಣದೊಂದು ಪ್ರಪಂಚದಲ್ಲಿ ಮುಳುಗಿ, ಸುತ್ತಲಿನ ನಿಜವಾದ ಪ್ರಪಂಚ ಮರೆತಂತಿದೆ ನನಗೆ,'

ಗೋಲು ಹೇಳಿದ್ದೂ ಕೇಳಿಸಿಕೊಳ್ಳದೆ ತನ್ನ ಸ್ಮಾರ್ಟ್ ಫೋನ್ ತಿಕ್ಕುತ್ತಿದ್ದಳು ಆ ಯುವತಿ.

ವಾಪಸ್ಸು ತನ್ನ ಲೋಕಕ್ಕೆ ಹೋಗುವ ಸಮಯ ಬಂದಿತ್ತು ಗೋಲುವಿಗೆ. ಪ್ರಪಂಚವನ್ನು ತ್ವರಿತದಲ್ಲಿ ಒಂದೆರಡು ಬಾರಿ ಸುತ್ತು ಹಾಕಿ, ಪರೀಕ್ಷಿಸಿ ಬಂದ.

ಕಾವಲುಗಾರ ನುಡಿದ ಮಾತುಗಳೆಲ್ಲಾ ಅಕ್ಷರಶಃ ನಿಜ ಎಂದರಿತ. ಅವಸರಿಸಿಕೊಂಡೇ ಇನ್ನಷ್ಟು ತನ್ನ ವರದಿಯಲ್ಲಿ ಬರೆದುಕೊಂಡ:

"ಸೃಷ್ಟಿಕರ್ತ ಮನುಷ್ಯನೆಂಬ ಉನ್ನತ ಜೀವಿಯನ್ನು ಸೃಜಿಸಿರುವುದು ನಿರ್ವಿವಾದದ ಸಂಗತಿ. ಆದರೆ ಆ ಹುಟ್ಟುವಳಿಯಲ್ಲಿ ಕೆಲವು ಲೋಪ-ದೋಷಗಳು ಇವೆ ಎಂದು ನನ್ನ ಅನಿಸಿಕೆ. ಇರುವುದು ಒಂದೇ ಧರ್ಮ - ಮಾನವ ಧರ್ಮ - ಅದಕ್ಕೆ ಹಿರಿದಾದ್ದು ಪ್ರಾಣಿ ಧರ್ಮ; ದೇವರೊಬ್ಬನೇ - ಅದು ನನ್ನ ತಂದೆ, ಸೃಷ್ಟಿಕರ್ತ; ಪ್ರಪಂಚ ಮನುಷ್ಯನದೊಬ್ಬನದೇ ಆಸ್ತಿಯಲ್ಲ, ಅದು ಎಲ್ಲಾ ಜೀವಿಗಳಿಗೂ ಸೇರಿದ್ದು ಎಂಬ ನಿಸ್ವಾರ್ಥತೆ; ಈ ಗುಣಗಳನ್ನು ಸ್ವಾಭಾವಿಕವಾಗಿ ಆ ಮನುಷ್ಯನಲ್ಲಿ ಅಚ್ಚಳಿಯದಂತೆ ಹಾಕಿದ್ದರೆ, ಪ್ರಪಂಚದ ಬಹುತೇಕ ಸಂಘರ್ಷಣೆಗಳಿಗೆ ಅವಕಾಶವಿರುತ್ತಿರಲಿಲ್ಲ. ತನ್ನ ಸೌಖ್ಯಕ್ಕಾಗಿ, ಬುದ್ಧಿ ಉಪಯೋಗಿಸಿ, ಅನುಕೂಲಗಳನ್ನು ಮಾಡಿಕೊಂಡಿದ್ದಾಗ್ಯೂ, ತಾನು ಕುಳಿತಿರುವ ಕೊಂಬೆಯನ್ನು ತಾನೇ ಕಡಿಯುವ ಮೂರ್ಖನಂತೆ, ತನ್ನ ಪ್ರಪಂಚ, ಪರಿಸರ, ಸಹಚರ ಪ್ರಾಣಿಗಳಿಗೆ, ತಾನೇ ವೈರಿಯಾಗಿದ್ದಾನೆ. ಈ ಲೋಪಗಳು ಸೃಷ್ಟಿಸಿದ ನನ್ನಪ್ಪನ ತಪ್ಪೇ?" ಆಲೋಚಿಸಿಕೊಂಡೇ ಭೂಲೋಕದೆಡೆ ಸಿಂಹಾವಲೋಕನ ಮಾಡುತ್ತಾ, ಮತ್ತೊಮ್ಮೆ ಈ ಸ್ಥಳಕ್ಕೆ ಭೇಟಿ ಕೊಡುವ ಸಂಕಲ್ಪ ಮಾಡಿಕೊಂಡು, ತನ್ನ ಲೋಕದತ್ತ ಹಾರಿದ ಗೋಲು.



ಮಮತಾ ಸುದರ್ಶನ



ಕವನ

## *ಬದುಕು*

ಇನ್ನೆಷ್ಟು ಕಾಲ ಬೇಕು ನಿನಗೆ ಮನುಜ
ಬದುಕುವ ಕಲೆಯ ಕಲಿಯಲು

ಯುಗ ಯುಗಗಳು ಕಳೆದವು
ವೇದ ಉಪನಿಷತುಗಳು ಬರೆದರೂ
ತತ್ವ ವಚನಗಳನ್ನು ಹೇಳಿದರು
ಇನ್ನು ತಿಳಿಯಲಿಲ್ಲವೇ ನಿನಗೆ
ಬದುಕುವ ರೀತಿ ತಿಳಿಯಲು

ರಾಮ ಕೃಷ್ಣ ಹೇಳಿದ್ದಾಯಿತು
ಬುದ್ಧ ಬಸವ ಪರಿಸಿದ್ದಾಯಿತು
ದಾಸರು ಹಾಡಿದ್ದಾಯಿತು
ಇನ್ನು ತಿಳಿಯಲಿಲ್ಲವೇ ನಿನಗೆ
ಬದುಕುವ ನೀತಿ ತಿಳಿಯಲು

ಪ್ರೀತಿಯಿಂದ ಬದುಕ ನೋಡು.
ತಿಳಿವುದು ಎಲ್ಲ ನಿನಗೆ ಕ್ಷಣದಲಿ
ಪ್ರೀತಿಯೊಂದೇ ಭಾಷೆಯು
ಬದುಕ ಅರಿಯಲು ಈ ಬದುಕ ತಿಳಿಯಲು


Copyright © KCO – Brindavana

ಸಂಚಿಕೆ
೧೮
ಸೆಪ್ಟೆಂಬರ್, ೨೦೧೮



## ಮೆಚ್ಚಿನ ರೇಷ್ಮೆ ಸೀರೆ



ಲಕ್ಷ್ಮಿ ಕೊಲಾಲ್

*"ಸಕ್ಕರೆ ತುಪ್ಪದ ಕಾಲುವೆ ಹರಿಸಿ*

*ಶುಕ್ರವಾರದ ಪೂಜೆಯ ವೇಳೆಗೆ"*

**ಆ**ಹಾ ಈ ಮಧುರವಾದ ಗಾನ ಬಹಳ ಭಕ್ತಿಮಯ. ಈ ಪೂಜೆಗಳ ಸಂಭ್ರಮದ ವಾತಾವರಣವೇ ನಮ್ಮ ಶ್ರಾವಣಮಾಸದ ಒಂದು ಪ್ರಮುಖವಾದ ವಿಷಯ. ಹಬ್ಬಗಳ ಆಚರಣೆಯಲ್ಲಿ ಇನ್ನೊಂದು ಮನಸ್ಸಿಗೆ ಆನಂದ ಕೊಡುವ ಮಾತೆಂದರೆ ಉಡುಗೆ ತೊಡುಗೆಗಳು. ಅದರಲ್ಲೂ ಹೆಂಗೆಳೆಯರಿಗೆಲ್ಲ ಪ್ರಿಯವಾದ ಉಡುಗೆ ಸೀರೆಯೆಂದರೆ ತಪ್ಪಾಗಲಾರದು.

ಸೀರೆಯು ಅತ್ಯಂತ ಪುರಾತನ ಮತ್ತು ಆಧುನಿಕ ಯುಗದಲ್ಲಿ ಜನಮಾನಸದ ಅಚ್ಚು ಮೆಚ್ಚಿನ ಉಡುಗೆಯಾಗಿದೆ. ಯೌವನದ ನಂತರ ಎಲ್ಲ ವಯಸ್ಸಿನವರು ಉಡಬಹುದಾದ ಉಡುಗೆ ಎಂದರೆ ಸೀರೆ ಎನ್ನಬಹುದು.

ಕೆಲವೊಂದು ಸಮಾರಂಭಗಳಿಗೆ ಸೀರೆಯುಟ್ಟರೆ ಶ್ರೇಷ್ಠ ಎಂದು ಹೇಳುವುದನ್ನು ಕೇಳಿದ್ದೇವೆ. ಅದರಲ್ಲೂ ರೇಷ್ಮೆ ಸೀರೆಯು ಪೂಜೆ, ಮದುವೆ, ಹಬ್ಬ ಇತ್ಯಾದಿ ಸಮಾರಂಭಗಳಿಗೆ ಶ್ರೇಷ್ಠ ಎಂಬುದು ಹಿಂದಿನಿದ ಬಂದ ಒಂದು ಪ್ರತೀತಿ.

ರೇಷ್ಮೆಯ ನೂಲು ಒಂದು ಹುಳದ ಉಗುಳಾದರೂ ಅದು ಬಹಳ ಪವಿತ್ರ. ಇದೊಂದು ದೇವರೇ ಸೃಷ್ಟಿಸಿರುವ ಸಮಾನತೆಯ ಉದಾಹರಣೆಯಿರಬಹುದು. ರೇಷ್ಮೆಯಲ್ಲಿ ನಾನಾ ವಿಧಗಳಿವೆ.

ನಮ್ಮ ದೇಶದ ಒಂದೊಂದು ಪ್ರಾಂತ್ಯವೂ ಒಂದೊಂದು ರೇಷ್ಮೆಯ ಸೀರೆಗಳಿಗೆ ಹೆಸರುವಾಸಿಯಾಗಿದೆ. ಮೊದಲಿಗೆ ಸರ್ವ ಶ್ರೇಷ್ಠವೆಂದು ಹೆಸರಾದ ಕಂಚಿ ರೇಷ್ಮೆಯ ಬಗ್ಗೆ ಕೆಲವು ವಿಷಯಗಳು. ಕಾಂಜೀವರಂ ರೇಷ್ಮೆ ಸೀರೆಗಳು ಕಂಚಿ ಎಂಬ ಪುಟ್ಟ ಊರಿನ ನೇಕಾರರು ಉತ್ತಮ ಗುಣಮಟ್ಟದ ಹಿಪ್ಪುನೇರಳೆ ಸೊಪ್ಪನ್ನು



ಅರಗಿಸಿಕೊಂಡ ರೇಷ್ಮೆ ಹುಳುವನ್ನು ಬಳಸಿ ನೀಡಿರುವ ಬೃಹತ್ ಕೊಡುಗೆ. ಈ ಸೀರೆಗಳು ಕರ್ನಾಟಕ ಮತ್ತು ತಮಿಳುನಾಡಿನ ಜನತೆಗೆ ಬಹಳ ಪ್ರಿಯವಾದದ್ದು. ಕಾಂಜೀವರಂ ಸೀರೆಗಳನ್ನು ವಿವಿಧ ಬಣ್ಣಗಳ ರೇಷ್ಮೆ ನೂಲಿನಿಂದ ತಯಾರಿಸಿ, ಅದರೊಂದಿಗೆ ಹೊಂಬಣ್ಣದ ಝರಿಯ ಕೆಲಸವನ್ನು ಮಾಡಿ ಅದರ ಸೌಂದರ್ಯನ್ನು ಇಮ್ಮಡಿಸುವರು. ಈ ಸೀರೆಗಳ ಬಣ್ಣ ಮತ್ತು ವಿನ್ಯಾಸ ಯಾವಾಗಲೂ ಅತ್ಯದ್ಭುತ. ಒಂದು ಸೀರೆಯನ್ನು ತಯಾರಿಸಲು ಸುಮಾರು ಹತ್ತರಿಂದ ಹನ್ನೆರಡು ದಿನಗಳು ಬೇಕಾಗುವುದು. ಅಪರೂಪದ ಸೀರೆಗಳನ್ನು ತಯಾರಿಸಲು ಇಪ್ಪತ್ತರಿಂದ ಮೂವತ್ತು ದಿನಗಳು ಆಗಬಹುದು. ಬೆಲೆಗಳು ಮೂರು ಸಾವಿರ ರೂಪಾಯಿಗಳಿದ ಶುರುವಾಗುತ್ತದೆ ಮತ್ತು ಶಕ್ತ್ಯಾನುಸಾರವಾಗಿದೆ.

ಈ ಸೀರೆಗಳನ್ನು ತಯಾರಿಸಲು ರೇಷ್ಮೆ ನೂಲು ಮತ್ತು ಬಣ್ಣ ಅವಶ್ಯಕ. ಸೀರೆಯ ಅಂಚು ಮತ್ತು ಸೆರಗು ಬೇರೆಯಾಗಿಯೇ ನೇಯಲ್ಪಟ್ಟು ಅನಂತರ ನೇಕಾರರು ಅವೆರಡನ್ನು ಸೇರಿಸಿ ಸುಂದರವಾದ ಸೀರೆಗಳಿಂದ ನಮ್ಮ ಕಣ್ಣಿಗೆ ಹಬ್ಬವನ್ನು ಕೊಡುಗೆಯಾಗಿ ನೀಡುತ್ತಾರೆ.

ಪ್ರಿಯ ಓದುಗರೇ ನಿಮ್ಮೆಲ್ಲರಿಗೂ ಗಣೇಶ ಮತ್ತು ಗೌರಿ ಹಬ್ಬದ ಶುಭಾಶಯಗಳು.

ಇನ್ನೊಮ್ಮೆ ನಿಮ್ಮ ಪ್ರಿಯವಾದ ಸೀರೆಯ ಬಗ್ಗೆ ತಿಳಿಸಿರಿ. ನಮ್ಮ ರೇಷ್ಮೆಯ ಕಥೆಯು ಮುಂದುವರೆಯಲಿ...

## ಕವನ

ಲಕ್ಷ್ಮಿ ಕೊಲಾಲ್

### *ಓ ಹೆಣ್ಣೇ*

ಮರೆತುಬಿಡು ನೀನು
ಆ ಕೋಮಲಾಂಗಿ ಎಂದು
ಕಾಣದಿರು ನೀನು ನಿನ್ನ

ಕನಿಷ್ಠ ಬಿಲ್ಲೆಯೆಂದು
ಸವಿಯುತಿರು ನೀನು
ನಿನ್ನ ಭೂತಕಾಲವನ್ನು
ಭೂಗತ ಮಾಡದಿರು ನಿನ್ನ

ನಿತ್ಯ ಭವಿಷ್ಯವನ್ನು
ಕರೆಯದಿರು ನೀನು
ನಿನ್ನ ಕಂಡು ಓಡುವರನು
ಚೆರೆಯುತಿರು ಇನ್ನು ನಿನ್ನ

ಬೆರೆತು ಬದುಕ ಬಯಸಿದವರನು
ಯುದ್ಧದಂಥ ಬದುಕಿಗೆ
ತೀರದಾ ವ್ಯಾಮೋಹಕೆ
ತಿಲಾಂಜಲಿಯನು
ಕೊಟ್ಟುಬಿಡು ನೀನು..!!

(.. ಇನೇ ಪುಟದಿಂದ)

## *ಜೀವನದಲ್ಲಿ ದೈವೀ ಮತ್ತು ಆಸುರೀ ಗುಣಗಳ ಪ್ರಭಾವ*

ಆಸುರೀ ಗುಣಗಳು ಕೇವಲ ಆರೇ ಆದರೂ ಅವು ಪರಸ್ಪರ ಒಟ್ಟುಗೂಡಿ ಮನುಷ್ಯನ ವಿವೇಕವನ್ನು ಅಪಹರಿಸುತ್ತದೆ. ಆಸುರೀ ಗುಣಗಳಿಂದ ತುಂಬಿದ ಮನುಷ್ಯನು ಗುರುಹಿರಿಯರ ಬುದ್ಧಿವಾದಗಳನ್ನು ಕೇಳುವುದಿಲ್ಲ. ವಿವೇಕವಿಲ್ಲದ ಅತಿಯಾದ ದುರಾಸೆಗಳಿಂದಾಗಿ ಸ್ವಾರ್ಥದಿಂದ ಕೂಡಿ ಅಹಂಕಾರದಿಂದ ಅಳಿಯುತ್ತಾನೆ.

**ಜಗದ್ಗುರು ಶ್ರೀಕೃಷ್ಣನ ಉಪದೇಶ**

ಜಗತ್ತಿನ ಎಲ್ಲ ಕಾಲದ ಎಲ್ಲ ಸಾಧಕ ಸಾಧಕಿಯರ ಗುರುವಾದ ಶ್ರೀಕೃಷ್ಣನು ನೀಡಿರುವ ಎಚ್ಚರಿಕೆಯೇನೆಂದರೆ ಬಹಳ ವಿಶೇಷವಾಗಿ ಸಿಕ್ಕಿರುವ ಮನುಷ್ಯ ಜನ್ಮವನ್ನು ಆಸುರೀ ಗುಣಗಳಿಂದ ಹಾಳು ಮಾಡಿಕೊಳ್ಳಬಾರದು. ದೈವೀ ಗುಣಗಳನ್ನು ಪಡೆದುಕೊಂಡರೆ ಮಾತ್ರ ದೇವರ ದರ್ಶನವಾಗುವುದು. ಆಸುರೀ ಗುಣಗಳಿಂದ ಆಗುವುದಿಲ್ಲ. ಜೀವನದ ನಾಶಕ್ಕೆ ಕಾರಣಗಳಾದ ಕಾಮ ಎಂದರೆ ಅಧರ್ಮ, ಪೂರೈಸದ ಆಸೆಯಿಂದ ಬರುವ ಕ್ರೋಧ ಮತ್ತು ಇವೆರಡನ್ನೂ ಹುರಿದುಂಬಿಸುವ ಲೋಭ ನರಕಕ್ಕೆ ಬಾಗಿಲುಗಳಂತಿವೆ. ಆದ್ದರಿಂದ ಕಾಮ, ಕ್ರೋಧ ಹಾಗೂ ಲೋಭಗಳನ್ನು ತ್ಯಜಿಸಲೇ ಬೇಕು. ಮುಖ್ಯವಾಗಿ ಆಸುರೀ ಗುಣಗಳು ಪ್ರವೇಶ ಮಾಡುವುದು ಶಾಸ್ತ್ರಗಳು ಹೇಳಿರುವ ವಿಧಿ (ಮಾಡಬೇಕಾದ ಕಾರ್ಯಗಳು) ಮತ್ತು ನಿಷೇಧ (ಮಾಡಬಾರದ ಕಾರ್ಯಗಳು) ಎರಡನ್ನೂ ಧಿಕ್ಕರಿಸಿ ಜೀವನ ಮಾಡಿದಾಗ ಎಂದು ಶ್ರೀಕೃಷ್ಣನು ನಮ್ಮ ಒಳಿತಿಗಾಗಿ ಹೇಳಿದ್ದಾನೆ. ಆದ್ದರಿಂದ ಶಾಸ್ತ್ರಗಳ ವಿಧಿ ಹಾಗೂ ನಿಷೇಧಗಳಂತೆ ಜೀವನ ನಡೆಸಬೇಕು.

ಸಾರಾಂಶ:

ಒಟ್ಟಿನಲ್ಲಿ ನೋಡಿದಾಗ ನಾವು ನಮ್ಮ ಜೀವನದಿಂದ ಆಸುರೀ ಗುಣಗಳನ್ನು ತೆಗೆದು ಹಾಕಿ ದೈವೀ ಗುಣಗಳ ಮೂಲಕವಾಗಿ ಪರಮಾತ್ಮ ದರ್ಶನದ ಗುರಿಯಿಟ್ಟು ಶಾಂತಿ ಹಾಗೂ ಆನಂದದಿಂದ ಜೀವನವನ್ನು ನಡೆಸಬೇಕು.ಇದರಿಂದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥ ಪ್ರಾಪ್ತವಾಗುತ್ತದೆ. ನಮ್ಮೆಲ್ಲರಿಗೂ ಪುರುಷಾರ್ಥ ಸಾಧನಾ ಶಕ್ತಿಯನ್ನು ಶ್ರೀಕೃಷ್ಣ ಪರಮಾತ್ಮನು ಕರುಣಿಸಲಿ ಎಂದು ಪ್ರಾರ್ಥಿಸೋಣ.


Copyright © KCO – Brindavana

# ಹೆಸರಿನೊಳಗ ಏನದ?



ಸರಿತಾ ನವಲಿ

**ಹೆ**ಸರಿಡೋದು ಅಂದಕೂಡ್ಲೆ ನನಗ ನೆನಪಾಗೋದು ಸಣ್ಣ ಕೂಸಿನ್ನ ತೊಟ್ಟಿಲದಾಗ ಹಾಕಿ ತೂಗಿ, ಸ್ವಾದ್ರತ್ತಿ ಕೈಲೆ ಕೂಸಿನ ಕಿವ್ಯಾಗ ಐದು ಹೆಸರ ಹೇಳಿಸಿ, ಅಲ್ಲೆ ಸುತ್ತ-ಮುತ್ತ ಇದ್ದ ಹೆಂಗಸೂರು ಆಕಿ ಬೆನ್ನಿನ ಮ್ಯಾಲೆ ದಬ-ದಬ ಅಂತ ಬಡದು ಖುಷಿಪಡೋ ಸಂಭ್ರಮದ ಸಂಪ್ರದಾಯ. ಪ್ರತಿ ಮನಷ್ಯಾಗೂ ಒಂದು ಹೆಸರಂತ ಇರ್ಲೇಬೇಕು, ಇಲ್ಲಾಂದ್ರ ಆ ಮನಷ್ಯಾನ ಏನಂತ ಹೇಳಿ ಕರೀಬೇಕು? ಹೌದಲ್ಲೋ. ಸಣ್ಣ ಕೂಸಿದ್ದಾಗ ನಾಮಕರಣ ಶಾಸ್ತ್ರ ಮಾಡಿ ಒಂದ ಹೆಸರಂತ ಇಟ್ಟರೂ, ಭಾಳ ಸಲ ಆ ಕೂಸಿನ್ನ ಏನೇನೂ ಅಡ್ಡಹೆಸರು ಇಟ್ಟು ಕರೀತೀವಿ ಅನ್ನೋದು ಎಲ್ಲಾರೂ ಒಪ್ಪೋ ಮಾತು. ಅದು ನಮ್ಮ ಪ್ರೀತಿ-ವಾತ್ಸಲ್ಯದ ಮಹಿಮಾನೂ ಆಗಿರ್ತದ. ಪಾಪು, ಕೂಸು, ಪುಟ್ಟ, ಮಾಣಿ, ಗುಂಡ, ಪುಟ್ಟಿ, ಬೇಬಿ, ಹೀಂಗ ಹೆಸರುಗಳ ಪಟ್ಟಿ ಮುಂದುವರಿತದ. ಸ್ವಲ್ಪ ಮಂದಿಗೆ ಮುಂದ ಅದೇ ಹೆಸರು, ನಿಕ್ ನೇಮ್ ಆಗಿ ಉಳಕೊಂಡು ಬಿಟ್ಟಿರೋದನ್ನು ನೋಡ್ತೀವಿ. ನಮ್ಮ ಮೌಶಿಗೆ 'ಸರಸ್ವತಿ' ಅಂತ ಛಂದದ ಹೆಸರಿಟ್ಟಿದ್ದರೂ ಆಕಿ ಕೂಸಿದ್ದಾಗ 'ಬೇಬಿ' ಅಂತ ಕರೀತಿದ್ದದ್ದು ಹಂಗೇ ಮುಂದುವರೆದು, ಆಕಿಗೆ ಮದುವಿಯಾಗಿ-ಮಕ್ಕಳಾಗಿ, ಮೊಮ್ಮಕ್ಕಳು ಹುಟ್ಟಿದಾಗಲೂ ಆಕಿ 'ಬೇಬಿ'! ಸ್ವಲ್ಪ ಮಂದಿಗೆ ಮನ್ಯಾಗ ಕರೆಯೋ ಹೆಸರು ಒಂದು, ಗೆಳ್ಯಾರು-ಗೆಳತೇರು ಕರೆಯೋ ಹೆಸರು ಇನ್ನೊಂದು, ಹೀಂಗ ಇರ್ತದ. ಮನ್ಯಾಗ ಮನಿದೇವ್ರ ಹೆಸರನ್ನ, ಇಲ್ಲಾ ಕೂಸು ಹುಟ್ಟೋ ಮೊದಲು ಹರಕಿಹೊತ್ತಿದ್ದ ದೇವರ ಹೆಸರನ್ನು ಆ ಕೂಸಿಗೆ ಇಟ್ಟು ಕರೀತಿರ್ತಾರ. ಹೆಣ್ಣುಮಕ್ಕಳಿಗೆ ತವರುಮನಿ ಹೆಸರ ಜೋಡಿ, ಮದಿವಿ ದಿನ ಲಗ್ನದ ಶಾಸ್ತ್ರ ಎಲ್ಲ ಮುಗಿಸಿ, ಹೆಣ್ಣೊಪ್ಪಿಸೊ ಹೊತ್ತಿನ್ಯಾಗ ಅತ್ತಿ ಮನಿಯವರು ಇನ್ನೊಂದು ಹೆಸರಿಡೋದನ್ನು ನಮ್ಮ ಕಡೆ ನೋಡೀನಿ. ಪಾಪ, ಆ ಸೊಸಿಗೆ ಹೆಸರು ಬದಲಾಯಿಸೋದು ಪಸಂದ ಇರ್ತದೋ, ಇಲ್ಲೋ, ಯಾರೂ ಕೇಳಂಗಿಲ್ಲ. ಇನ್ನು ಸ್ವಲ್ಪ ಮಂದಿ ತಮಗ ಇಟ್ಟಿದ್ದ ಹೆಸರನ್ನು 'ನೋಟರಿ' ಹತ್ರ ಬದಲಾಯಿಸಿಕೊಳ್ಳೋದನ್ನೂ ನೋಡ್ತೀವಿ. ತಮಗಿಟ್ಟಿದ್ದ ಹೆಸರು ಪಸಂದ ಇಲ್ಲಂತ ಬದಲಾಯಿಸೋದನ್ನು ನೋಡಿದಾಗ ನಾವು ಸಾಲಿಯೊಳಗ ಓದಿದ್ದ 'ಜಾತಕ ಕತೆ'ಗಳ ಒಂದು ಕಥಿ ನೆನಪಾಗ್ತದ. 'ಪಾಪಕ' ಅನ್ನೋ ಹುಡುಗನಿಗೆ ತನ್ನ ಹೆಸರು ಒಂಥರಾ 'ಅಪಶಕುನ' ಅನ್ನಿಸಿ ಅದನ್ನು ಬದಲಾಯಿಸ್ಕೋತೀನಿ ಅಂತ ತನ್ನ ಗುರು 'ಬೋಧಿಸತ್ವ'ಗ ಕೇಳತಾನ. ಮೊದಲು ನಾಲ್ಕಾರು ಊರು ತಿರುಗಿ, ಹೆಚ್ಚಿನ ಅನುಭವ-ಜ್ಞಾನ ತೊಗೊಂಡು ಆಮ್ಯಾಲೆ ಹೆಸರು ಬದಲಾಯಿಸ್ಕೋವಂತಿ ಅಂತ ಗುರು ಹೇಳ್ತಾರ. 'ಪಾಪಕ' ಊರೂರು ತಿರುಗಿ, 'ಧನಪಾಲಿ' ಅನ್ನೋ ಹೆಸರಿನ ಅತಿ ಬಡ ಹೆಂಸಗನ್ನ ಮತ್ತ 'ಜೀವಕ' ಅಂತ ಹೆಸರಿಟ್ಟುಕೊಂಡ್ರೂ ಮರಣಿಸಿದ್ದ ವ್ಯಕ್ತಿಯನ್ನು ನೋಡಿ, "ಹೆಸರಿನೊಳಗ ಏನದ, ಅದು ಬದುಕಿನ ಯಾವ ಆಗುಹೋಗಿಗೂ ಕಾರಣ ಆಗಂಗಿಲ್ಲ" ಅಂತ ಅರ್ಥ ಮಾಡ್ಕೊಂಡು 'ತಕ್ಷಶಿಲಾ'ದ ಗುರುಕುಲಕ್ಕ ವಾಪಾಸು ಬರ್ತಾನ. ಮನುಷ್ಯಾನ ಹೆಸರಿನ ಹಿಂದಿನ ತತ್ವ ಏನ ಇರಲಿ, ಪ್ರತಿಯೊಬ್ಬರಿಗೂ ನಾಮಕರಣ ಮಾಡಿ ಇಟ್ಟ ಹೆಸರು, ಸಾಲ್ಯಾಗ ಹಚ್ಚಿದ ಹೆಸರು, ಅಫಿಶಿಯಲ್ ಹೆಸರು ಅಂತ ಇರೋದ್ರ ಜೊತಿಗೆ ಅಡ್ಡಹೆಸರುಗಳು ಇರ್ತಾವಲ್ಲೇನು? ನಾವೆಲ್ಲರೂ ಸಾಲಿ-ಕಾಲೇಜಿನ್ಯಾಗ, ಆಫೀಸಿನ್ಯಾಗ, ಆಜು-ಬಾಜು ಮನಿ, ಗುಡಿ, ಮಾರ್ಕೆಟ್-ಬಜಾರದಾಗ ಇನ್ನೊಬ್ಬರಿಗೆ ಏನಾರ ಹೆಸರು ಇಟ್ಟಿರ್ತೀವಿ, ಇಲ್ಲಾ ನಾವು ಇಡಿಸಿಕೊಂಡಿರ್ತೀವಲ್ಲ, ಅದೇ ನಾವು-ನೀವು ಮಾಡೋ 'ನಾಮಕರಣ'!




ಭಾಳ ಎತ್ತರಿದ್ದವರಿಗೆ 'ಲಂಬು', ಗಿಡ್ಡಯಿದ್ದವರಿಗೆ 'ಛೋಟು', 'ಕುಳ್ಳ-ಕುಳ್ಳಿ', ಅವರವರ ಮೈ ಬಣ್ಣದ ಮ್ಯಾಲೆ 'ಕರಿಯ', 'ಬಿಳಿಯ', 'ಬಿಳಿಭರಡಿ'(ಬಿಳಿಜೊಂಡಿಗ್ಯಾ=ಬಿಳಿಜಿರಲೆ), ಅವರವರ ಮೈಕಟ್ಟಿನ ಮ್ಯಾಲೆ 'ಟೆಡ್ಡಿಬೇರ್', 'ಗುಂಡಮ್ಮ', 'ಕಡ್ಡಿಪೈಲ್ವಾನ', 'ಗಳ'(ಬಿದಿರು), ಉದ್ದನೆ ಹೆರಳಿದ್ದ ಹುಡುಗಿಗೆ 'ನಾಗವೇಣಿ', ಕೂದಲಿಲ್ಲದವರಿಗೆ 'ಬೋಡ',ಹಲ್ಲಿಲ್ಲದವರಿಗೆ 'ಬೊಚ್ಚಬಾಯಿ'/'ಗುಬ್ಬಚ್ಚಿಬಾಯಿ', ಎಳೆಕೂಸು ಇದ್ದರ ಎಳೆಬತ್ತಿ, ಇಲ್ಲ ಕೂಸು ಗುಂಡು-ಗುಂಡುಗ ಇದ್ರ 'ಹೂಬತ್ತಿ' ಅಂತನೋ, ಇನ್ನೂ ಹೀಂಗ ಏನೇನೋ ಅಡ್ಡಹೆಸರಿಟ್ಟಿರ್ತದ. ಒಬ್ಬ ಮನಷ್ಯಾನ 'ಲುಕ್ಸ್' ನೋಡಿ ಹೆಸರಿಡೋದು ಭಾಳ ಸಹಜ ಅನಸ್ತದ. ಆದ್ರ ನಮ್ಮ ಸುತ್ತಮುತ್ತಲಿನ ಜನರ ಸ್ವಭಾವವನ್ನು ಸೂಕ್ಷ್ಮ ಆಗಿ ನೋಡಿಕೋತ ಇದ್ದು, ಅವರು ಇನ್ನೊಬ್ಬರ ಜೋಡಿ ವ್ಯವಹರಿಸೋದು ಆಗಲಿ ಇಲ್ಲ ಅವರ ನಡವಳಿಕಿಯಿಂದ ನಮಗ ಅಥವಾ ನಮ್ಮ ಹತ್ತಿರದವರಿಗೆ ಮನಸಿಗೆ ಬ್ಯಾಸರ ಆಗಿದ್ರ ಮಾತ್ರ ಆ ವ್ಯಕ್ತಿಗೆ ಭಾರೀ, ಭಾರೀ ಹೆಸರುಗಳ ನಾಮಕರಣನೇ ಆಗ್ತದ ಅನ್ನೋದು ಅಷ್ಟೇ ಖರೇ ಅದ.

ನಾನೊಂದು ನಾಕನೆತ್ತಿ-ಐದನೆತ್ತಿ ಕಲೀಬೇಕಾದ್ರ ಈ ನೈಲಾನ್, ಪಾಲಿಸ್ಟರ್ ಬಟ್ಟಿಯಿಂದ ಮಾಡಿದ ಬಣ್ಣ-ಬಣ್ಣದ ಗುಲಾಬಿ ಹೂವಾ ಮುಡುಕೊಳ್ಳೋ ಫ್ಯಾಷನ್ ಸುರುವಾಗಿತ್ತು. ನನ್ನ ಮತ್ತು ನಮ್ಮಕ್ಕಂದಿರ ಹತ್ರಾನೂ ಒಂದೆರಡು ಇಂಥಾ ಹೂ ಇದ್ವು. ರಾಜ್ಯೋತ್ಸವ, ಮಕ್ಕಳ ದಿನಾಚರಣೆ ಕಾರ್ಯಕ್ರಮದಾಗ ಡ್ಯಾನ್ಸ್ ಮಾಡಿದಾಗ ಹುಡುಗೀರೆಲ್ಲ ಇದ ಹೂವಾ ಮುಡ್ಕೋತಿದ್ವಿ. ನಮ್ಮ ಮಗ್ಗಲ ಮನಿ ಸುಮಾ (ನಮಗೆಲ್ಲ 'ಸೋಗಲಾಡಿ ಸುಮ್ಮಕ್ಕ') ಆಗ್ಲೇ ಕಾಲೇಜು ಕಟ್ಟಿ ಹತ್ತಿದ್ಲು. ಆಕಿ ಹತ್ರ ಈ ನೈಲಾನ್, ಪಾಲಿಸ್ಟರ್ ಬಟ್ಟಿಯಿಂದ ಮಾಡಿದ ಒಂದು ಐದಾರು ಹೂವಾ ಇದ್ವು. ನಾವೇನಾದ್ರೂ ಹೋಗಿ, "ಡ್ಯಾನ್ಸಿನ ಡ್ರೆಸ್ಸಿಗೆ ಮ್ಯಾಚಿಂಗ್ ಹೂವ ಬೇಕಾಗ್ಯದ, ಕೊಡು ಸುಮ್ಮಕ್ಕ" ಅಂತ ಕೇಳಿದ್ರ ಕೊಡ್ತಿರಲಿಲ್ಲ. ತಾನು ದಿನಾ ಕಾಲೇಜಿಗೆ ಹೋಗೋಮುಂದ, ಮಳ ಉದ್ದದ ತನ್ನ ಮಂಡ ಕೂದಲದಿಂದ ಒಂದು ಹೆರಳು ಹಾಕ್ಕೊಂಡು, ಬಲಗಿವಿ ಹಿಂದ ಒಂದು ಪಾಲಿಸ್ಟರ್ ಗುಲಾಬಿ ಹೂ ಚುಚ್ಚಗೊಂಡು, ಮ್ಯಾಕ್ಸಿ ಹಾಕ್ಕೊಂಡೋ, ಲಂಗ-ದಾವಣಿ ಹಾಕ್ಕೊಂಡೋ ಸೋಗು ಮಾಡಿಕೋತ ಹೋಗ್ತಿದ್ಲು. ಇದನ್ನ ನೋಡಿ ನಾವೆಲ್ಲರೂ ಸೇರಿ ಆಕಿಗೆ 'ಬಾಡದ ಹೂ' ಅಂತ ಹೊಸ ಹೆಸರಿಟ್ವಿ. ಭಾಳ ದಿವಸದ ಮ್ಯಾಲೆ ನಾವೆಲ್ಲ ತನಗ 'ಬಾಡದ ಹೂ' ಅಂತ ಹೆಸರಿಟ್ಟಿದ್ದು ಆಕಿಗೆ ಗೊತ್ತಾಗಿ ಆ ಗುಲಾಬಿ ಹೂಗಳನ್ನು ಮುಡ್ಕೊಳ್ಳೋದು ಬಿಟ್ಟಬಿಟ್ಟಳು. ಆಕಿ ಬಿಟ್ರ ಏನಾತು ನಾವು ಬಿಡಬೇಕಲ್ಲ! ಒಂದು ದಿನ ಹೀಂಗ ಮನೀ ಮುಂದು ಆಕಿ ಸೋಗ ಮಾಡಿಕೋತ ಕಾಲೇಜಿಗೆ ಹೊಂಟಿದ್ದು ನೋಡಿ, "ಯಾಕ ಸುಮ್ಮಕ್ಕ, 'ಬಾಡದ ಹೂ' ಏನಾರ ಒಣಗಿಹೋತೇನು? ಈಗೀಗ ಮುಡ್ಕೋವಲ್ಲೆ" ಅಂತಂದು ಕಿಸಕ್ಕನೆ ನಕ್ಕಿದ್ವಿ.

ನಮ್ಮನ್ಯಾಗ ಗುಡಿಗೊಳಿಗೆ ಹೋಗೋದು ಮೊದಲಿನಿಂದಲೂ ಬಂದ ರೂಢಿ. ನಾವೆಲ್ಲರೂ ಆಗಾಗ ಗುಡಿಗೆ ಹೋಗಿ ದೇವರ ದರ್ಶನ ಮಾಡ್ಕೊಂಡು, ತೀರ್ಥ, ಗಂಧ, ಪ್ರಸಾದ ಎಲ್ಲ ತೊಗೊಂಡು ಬರ್ತಿದ್ವಿ. ಹೀಂಗ ಹೋಗ್ತಿದ್ದ ಒಂದು ಗುಡಿಯೊಳಗ ಸೊರಗಿನ ಮೈಕಟ್ಟಿನ, ವಯಸ್ಸಾದ ಪೂಜಾರಿಯೊಬ್ಬರು ತೀರ್ಥ ಕೊಡಲಿಕ್ಕೆ ಕೂತಿರುತಿದ್ರು. ತೀರ್ಥ ತೊಗೊಂಡಾದ ಮ್ಯಾಲೆ ನಾವು ಗಂಧ ಕೊಡ್ರಿ ಅಂತ ಕೇಳಿದ್ರ, "ತೀರ್ಥದ ತಟ್ಟೆಗೆ ಕಾಸು ಹಾಕಿ, ನಂತರ ಗಂಧ ಕೊಡುವ" ಅಂತ ಅಂತಿದ್ರು. ಸಾಲಿ-ಕಾಲೇಜಿನ ಹುಡುಗೂರು ಅನ್ನೋ ಅಸಡ್ಡೆನೂ ಇತ್ತು. ದೇವರಿಗೆ ಹಚ್ಚಿದ ಗಂಧದ ಪರಿಮಳಾ ಎಂಥಾದಂದ್ರ, ಭಕ್ತಿಯಿಂದ ಒಂದು ಹನಿ ಹಚ್ಚಿಕೊಂಡರೆ ಮನಸ್ಸಿಗೆ ಅದೇನೋ ಖುಷಿ ಆಗ್ತಿತ್ತು. ತಮ್ಮ ಪರಿಚಯದವರು ಬಂದ ಕೂಡ್ಲೆ ತುಳು ಭಾಷಾದೊಳಗ ಮಾತಾಡ್ಕೋತ ತೀರ್ಥ ಕೊಡೋದೇನು, ಗಂಧ-ಹೂವು, ಪಂಚಕಜ್ಜಾಯ ಕೊಡೋದೇನು ಭಾರಿ ನಡೀತಿತ್ತು. ಇದನ್ನೆಲ್ಲ ನೋಡಿ ನನಗ, ನಮ್ಮಕ್ಕಗ ಬೇಜಾರಾಗ್ತಿತ್ತು. ಅದೇನೋ ಅಂತಾರಲ್ಲ, "ದೇವ್ರು ವರ ಕೊಟ್ಟರೂ ಪೂಜಾರಿ ಕೊಡಲಿಲ್ಲ" ಅನ್ನೋಹಂಗ ಇತ್ತು. ಪ್ರತಿಸಲ ತೀರ್ಥದ ತಟ್ಟೆಗೆ ರೊಕ್ಕಹಾಕಿ ಗಂಧ ತೊಗೊಂಡು ಬರ್ತಿದ್ದ ನಮಗ ಸಿಟ್ಟು ಬಂದು ಆ ಪೂಜಾರಿಗೆ ಒಂದು ಹೆಸರಿಟ್ವಿ, 'ಬಾಡಿ ಬಸವಳಿದ ಬಳ್ಳಿ'! ಆ ಗುಡಿಯೊಳಗ ಇನ್ನೊಂದಿಬ್ಬರು ಪೂಜಾರರಿದ್ದರು. ಅವ್ರದೂ ಹೆಚ್ಚು-ಕಮ್ಮಿಇದೇ ಕಥೀನ ಆಗಿತ್ತು. ತುಳು ಭಾಷಾದಾಗ ಮಾತಾಡಿದ್ರೇನೇ ಹೆಚ್ಚಿನ ಮರ್ಯಾದಿ. ಇವರಿಬ್ಬರಿಗೂ ಏನಾರ ಹೆಸರಿಡಬೇಂತ ಅಂದ್ಕೊಂಡಾಗ, ಅವರ ಹೇರ್ ಸ್ಟೈಲ್ ಸಹಾಯಕ್ಕ ಬಂದಿತ್ತು. ಆ ಪೂಜಾರಿಗೊಳಿಬ್ಬರೂ ತಮ್ಮ ಉದ್ದ ಕೂದಲನ್ನು ಮ್ಯಾಲಕತ್ತ ಬಾಚಿ, ತಲಿಮ್ಯಾಲೆ ಗಂಟು ಕಟ್ಟಿಕೋತಿದ್ರು.ಅವರ ಲುಕ್ಕು ಥೇಟ್ 'ಕ್ಲಿಯರ್ ಟೋನ್' ಕ್ರೀಮಿನ ಜಾಹೀರಾತಿನ್ಯಾಗಿನ ಮಾಡೆಲ್ ತನ್ನ ಕೂದಲನ್ನ ಕಟ್ಟಿಕೊಂಡ ಹಂಗ ಇರೋದು ನೋಡಿ ಅವರಿಬ್ಬರಿಗೂ ಹೆಸರಿಡೋ ಶಾಸ್ತ್ರ ಆಗಿತ್ತು. 'ಕ್ಲಿಯರ್ ಟೋನ್ 1', 'ಕ್ಲಿಯರ್ ಟೋನ್ 2'!

(ಮುಂದಿನ ಪುಟಕ್ಕೆ...)


Copyright © KCO – Brindavana

ಸಂಚಿಕೆ
೧೮
ಸೆಪ್ಟೆಂಬರ್, ೨೦೧೮



## ಲಲಿತ ಪ್ರಬಂಧ

*ಹೆಸರಿನೊಳಗ ಏನದ?*

(.. ಹಿಂದಿನ ಪುಟದಿಂದ)

ಇನ್ನು ಸಾಲಿ, ಕಾಲೇಜಿನ್ಯಾಗ ಕಲೀತಿರಬೇಕಾದ್ರ ನಾವು-ನೀವು ಮಾಡಿದ ನಾಮಕರಣಗಳ ಪಟ್ಟಿ ಸ್ವಲ್ಪ ದೊಡ್ಡದಾಗೇ ಇರ್ತದ. ಯಾಕಂದ್ರ ಟೀನೇಜಿನ ಹುಡುಗೂರು-ಹುಡುಗೇರಿಗೆ ಅವ್ರು ಮಾಡೋದೆಲ್ಲ ಹುಡುಗಾಟನ ಅನ್ನಸ್ತದ. ಹುಡುಗೂರು ಕಾಲೇಜಿನ್ಯಾಗಿನ ಹುಡುಗೇರನ್ನ ಸೊಟ್ಟ ಕಣ್ಣಿಂದ ನೋಡೋದು, ಕಮೆಂಟ್ ಪಾಸ್ ಮಾಡೋದು ಎಲ್ಲಾ ಕಾಮನ್. ಇದ್ರ ಜೋಡಿ ಹುಡಿಗೇರು, ಆ ಹುಡುಗೂರ ಮ್ಯಾಲೆ ಸಿಟ್ಟಿಗೇಳೋದು, ಅವ್ರನ್ನ ನೋಡಿ ತಮ್ಮ-ತಮ್ಮೊಳಗೆ ಏನೋನೋ ಗುಸು-ಗುಸು ಮಾತಾಡ್ಕೊಂಡು ಹಲ್ಲು ಕಿಸಿಯೋದು ನಡದೇ ಇರ್ತದ. ಇದೆಲ್ಲದರ ನಡುವೆ ಪಾಠ, ಲ್ಯಾಬೋರೇಟರಿ, ಪ್ರಾಕ್ಟಿಕಲ್ಸ್, ಲೈಬ್ರೆರಿ ಅಂತ ಓಡಾಡಿಕೊಂಡಿರ್ತಾರ. ಮತ್ತ ಸಮಯ-ಸಂದರ್ಭಕ್ಕ ತಕ್ಕಂಗ ತಮ್ಮ ಗೆಳ್ಯಾರು-ಗೆಳತೇರಿಗೆ, ಮಾಸ್ತರ-ಲೆಕ್ಚರರಿಗೆ ಮನಸ್ಸಿಗೆ ಬಂದಂಗ ಹೆಸರಿಡೋದು ಅವರೆಲ್ಲರ ಆದ್ಯ ಕರ್ತವ್ಯನೇನೂ ಅನ್ಕೊಂಡಂಗ ಕಂಡು ಬರ್ತದ. ನಾವು ಇದನ್ನೇ ಮಾಡಿದ್ವಿ. ಇದೇನು ಸಾಲಿ-ಕಾಲೇಜಿಗೆ ಓದ್ಲಿಕ್ಕೆ ಹೋಗ್ತರೋ, ಇಲ್ಲಾ ಅಲ್ಲಿ ಎಲ್ಲಾರಿಗೂ ಹೊಸ-ಹೊಸ ಹೆಸರಿಟ್ಟು ಹಲ್ಲು ಕಿಸಿಯೋದಕ್ಕೋ ಅಂತ ಅನ್ಸಬಹುದು. ಆದ್ರ ನಾವಿಟ್ಟ ಅದೆಷ್ಟೋ ಹೆಸರುಗಳು, ನಾವು ಕಲೀತಿದ್ದ ಪಾಠದಿಂದಲೇ ಹುಟ್ಟಿಕೊಂಡಿದ್ವಲ್ಲದೇ, ಹೊಸ ರೂಪಾನೂ ತೊಗೊಂಡಿದ್ವು.

'Sooty Flame', 'Concentrated Sulfuric Acid',' 'Diluted Hydrogen chloride' ಅನ್ನೋ ಹೆಸರುಗಳನ್ನು ಕೆಮಿಸ್ಟ್ರಿ ಲ್ಯಾಬಿನಿಂದ ತೊಗೊಂಡಿದ್ರ, Zoology ಲ್ಯಾಬಿನ 'ಸ್ಮಾಲ್ ಮೈಕ್ರೋಸ್ಕೋಪ್'(ಎಸ್.ಎಂ), 'ಬಿಗ್ ಮೈಕ್ರೋಸ್ಕೋಪ್', 'ಫಾರ್ಮ್ಯಾಲಿನ್' ದ್ರಾವಣ ನಾಮಕರಣದ ಲಿಸ್ಟಿಗೆ ಸೇರಿಕೊಂಡಿದ್ವು. ಇನ್ನು Origin of Life, Evolution ಪಾಠದಾಗ ಓದಿದ್ದ ವಿಜ್ಞಾನಿ Charles Darwin(Father of Evolution), ಆಗಿನ ಕಾಲಮಾನ ಆಗಿದ್ದ Paleozoic Era, Mesozoic Era, ಇವೂ ಸಹಿತ ಹೆಸರಾಗಿ ರಾರಾಜಿಸಿದ್ದವು. ಈ ಹೆಸರುಗಳನ್ನಿಡಲಿಕ್ಕೆ ಏನಾರ ಒಂದು ಹಿನ್ನೆಲಿ ಇರಬೇಕು ಅಂತ ಅನ್ನಿಸಿರಬಹುದು. ಕೆಮಿಸ್ಟ್ರಿ ಲ್ಯಾಬಿನ್ಯಾಗ ಬೈ-ಮಿಸ್ಟೇಕ್ ಆಸಿಡ್ ನುಂಗಿದ ಹುಡುಗಿಗೆ ಎಲ್ಲಾರು Con H2SO4 ಅಂದ್ರ, ನೀರು ಅಂತ ತಿಳಕೊಂಡು 'ಫಾರ್ಮ್ಯಾಲಿನ್' ಕುಡಿದ ನಮ್ಮ ಲೆಕ್ಚರರ್ ಒಬ್ಬರು 'ಫಾರ್ಮ್ಯಾಲಿಂಗಂ' ಆಗಿದ್ರು. ಸಣ್ಣ ವಯಸ್ಸಿಗೇ ಸ್ವಲ್ಪ ಜಾಸ್ತಿನೇ ಅನ್ನೋಹಂಗ ಕೂದಲ ಉದುರಿದ ಹುಡುಗ ವಿಜ್ಞಾನಿ 'ಡಾರ್ವಿನ್' ಆಗಿದ್ರ, 'ಮಂಗನಿಂದ ಮಾನವ' ಅನ್ನೋ ಥಿಯರಿಗೆ ಉದಾಹರಣೆ ಅನ್ನಬಹುದಾಗಿದ್ದ Zoology ಲ್ಯಾಬಿನ ಅಟೆಂಡರ್ ಮತ್ತು ಅವನ ಮಗ 'Paleozoic-Mesozoic' ಅಂತ ನಾಮಕರಣ ಮಾಡಿಸಿಕೊಂಡಿದ್ರು. ಅಪ್ಪ ಪಾಪದವ. ತನ್ನ ಪಾಡಿಗೆ ಕೆಲಸ ಮಾಡ್ಕೊಂಡಿದ್ರ, ಮಗ ಮಾಡೋ ಕೆಲಸೆಲ್ಲ ಮಂಗ್ಯಾನಾಟಗಳೇ ಆಗಿದ್ದವು. ಇವೆಲ್ಲದರ ಜೋಡಿ ನಮ್ಮ ಮೇಜರ್ ಸಬ್ಜೆಕ್ಟ್ ಆಗಿದ್ದ ಬಾಟನಿ, ಹೆಸರುಗಳ ಭಂಡಾರನ ನಮ್ಮ ಮುಂದ ತೆರದಿಟ್ಟಿತ್ತು. ಪ್ರತಿಯೊಂದು ಗಿಡ-ಮರ, ಬಳ್ಳಿಗಳ ಮಾಹಿತಿ ಸಂಗ್ರಹ ಮಾಡೋದು, Botanical Nomenclature ಬಗ್ಗೆ ಓದ್ತಾಯಿದ್ದ ನಮಗ  ಹೆಸರಿನ ಲಾಟರಿನೇ ಹೊಡದಂಗ ಆಗಿತ್ತು. ಗಿಡ-ಬಳ್ಳಿಗಳ ಗುಣಧರ್ಮಗಳನ್ನು ಓದಿ, ವಿಂಗಡಿಸಿ, ಅವುಗಳ ವೈಜ್ಞಾನಿಕ ಹೆಸರು ಕಂಡುಹಿಡಿಲಿಕ್ಕೆ ನೂರಾರು ಫ್ಯಾಮಿಲಿ ಹೆಸರು, ಸಾವಿರಾರು ಸಬ್-ಫ್ಯಾಮಿಲಿ, ಆರ್ಡರ್, ಸಬ್-ಆರ್ಡರ್ ಗಳು ಅಂತೆಲ್ಲ ಕಂಡುಕೊಂಡು, ಯಾವ Genus ಮತ್ತು Species ಅಂತ ವೈಜ್ಞಾನಿಕ ಹೆಸರು ಗೊತ್ತುಮಾಡಿಕೊಳ್ಳೋ ಕೆಲಸ ಅದಾಗಿತ್ತು. ಇಷ್ಟೆಲ್ಲ ಮಾಡೊವಾಗ, ಆ ಗಿಡ-ಮರಗಳ ಗುಣಧರ್ಮಗಳನ್ನ ನಮ್ಮ ಸುತ್ತ-ಮುತ್ತಲಿನ ಮನುಷ್ಯಾರ ನಡವಳಿಕೆಗೆ ಹೋಲಿಸಿ ಅದಕ್ಕ ತಕ್ಕಂಗ ಅವರಿಗೆ ನಾಮಕರಣ ಮಾಡೋದು ನಮಗೆಲ್ಲ ಭಾಳ ಸಸಾರ ಆಗಿಬಿಟ್ಟಿತ್ತು. ಇದನ್ನ ಆಧಾರಾಗಿಟ್ಟುಕೊಂಡು ನಮ್ಮ ಕಾಲೇಜಿನ್ಯಾಗಿನ ಒಂದು ಹುಡುಗನಿಗೆ ನಾವಿಟ್ಟಿದ್ದ ಹೆಸರು 'ಪಾರ್ಥೇನಿಯಂ'! ನಮ್ಮ ಜೊತಿ ಓದ್ತಾಯಿದ್ದ ಆ ಹುಡುಗ ಲೈಬ್ರೆರಿ, ಕ್ಯಾಂಟೀನ್, ಸ್ಟಡಿಸೆಂಟರ್ ಹೀಂಗ ಎಲ್ಲಾ ಕಡೆ ಕಾಣಿಸಿಕೊಳ್ಳೋದ್ರ ಜೊತಿಗೆ ಲೇಡೀಸ್ ಹಾಸ್ಟೆಲಿನ ಮುಂದ ಎಡತಾಕೋದು ಹುಡುಗೇರಿಗೆಲ್ಲ ಕಿರಿಕಿರಿಯಾಗತಿತ್ತು. 'ಪಾರ್ಥೇನಿಯಂ' ಗಿಡದ ಗುಣ ಏನು? "ಎಲ್ಲ ಕಡೆಯೂ ಕಂಡುಬರುವ, ಅಲರ್ಜಿ ಉಂಟು ಮಾಡಬಹುದಾದ ಸಸ್ಯ", ಹೌದಲ್ಲೋ. ಮನಷ್ಯರಿಗೆ ಅಲರ್ಜಿ, ರೋಗಗಳು ಬರೋಹಂಗ ಈ ಗಿಡ-ಮರಗಳಿಗೂ ರೋಗಗಳು ಬರ್ತಾವಲ್ಲೇನು? ಇವುಗಳ ಬಗ್ಗೆ  ತಿಳಿಸಿಕೊಡೊ Plant Pathology ಓದಿದಾಗ ನಮಗ ಗೊತ್ತಾಗಿದ್ದು ಎಲಿಗೊಳಿಗೆ ಬರೋ 'Powdery Mildew' ಅಂದ್ರ, 'ಬಿಳಿ ಬಣ್ಣದ ಬೂದು(Fungus)' ರೋಗ ಅಂತ.ದಿನಾಲೂ ಕಾಲೇಜಿಗೆ ಬರೋವಾಗ ಮಾರಿಗೆ ಬೂದು-ಬೂದಾಗಿ ಪೌಡರ್ ಹಚ್ಚಿಕೊಂಡು ಬರ್ತಿದ್ದ ನಮ್ಮ ಪ್ಯಾಥೊಲೊಜಿ ಲೆಕ್ಚರರ್, ಗಿಡದ ಎಲಿಗೊಳಿಗೆ ಬರೋ ಈ ರೋಗದ ಡಿಟೇಲ್ಸ್ ಹೇಳಿದಾಗ, ಕ್ಲಾಸಿನ್ಯಾಗ ಕೂತಿದ್ದ ನಮ್ಮೆಲ್ಲರ ಕಣ್ಣು ಮುಂದನ ಆ ಎಲ್ಲ ಗುಣ-ಲಕ್ಷಣಗಳು ಕಂಡು, ಮನಸ್ಸಿನ್ಯಾಗ ಮೂಡಿದ ಚಿತ್ರ ಏನಿರಬಹುದು ಅಂತ ಗೊತ್ತಾಗಿರಬೇಕಲ್ಲ. ಆಮ್ಯಾಲೆ ಅವರಿಗೆ 'Powdery Mildew' ಅನ್ನೋ ಹೆಸರು ಖಾಯಂ ಆತು! ಈ ಬಾಟನಿನ್ಯಾಗ ಇನ್ನೊಂದು ವಿಶೇಷೇನಪಾ ಅಂದ್ರ, ಗಿಡ-ಮರ ವಿಂಗಡನೆ ಮಾಡೋದ್ರಾಗೂ ಒಂದು ನಿಯಮ ಪಾಲಿಸ್ತಾರ. ಭಾಳಷ್ಟು ಫ್ಯಾಮಿಲಿ ಹೆಸರುಗಳ ಕೊನಿಗೆ 'acae' ಅಂತನೇ ಇರ್ತದ. ಉದಾಹರಣೆಗೆ Magnoliacae(ಸಂಪಿಗೆಹೂವಿನ ಫ್ಯಾಮಿಲಿ), Anacardiacae (ಮಾವಿನಹಣ್ಣಿನ ಫ್ಯಾಮಿಲಿ) ಇತ್ಯಾದಿ. ಇದನ್ನೆಲ್ಲ ಓದಿದ ನನ್ನ ಗೆಳತೇರು ನಮ್ಮ ಕಾಲೇಜಿನ್ಯಾಗಿನ ಹುಡುಗನೊಬ್ಬನಿಗೆ ಇಟ್ಟಿದ್ದ ಹೆಸರು 'ಹೆಣ್ಣೇಸಿ' (ಹೆಣ್+acae)! ಅವನ ಗುಣಧರ್ಮಗಳು ಏನೇನು ಆಗಿದ್ದವು ಅಂತ ಗೆಸ್ ಮಾಡಬಹುದು. ಯಾವಾಗಲೂ ಹುಡುಗೇರ ಗುಂಪಿನ್ಯಾಗೇ ಇದ್ದು, ಲೇಡೀಸ್ ರೂಮಿನ ಹತ್ತಿರನೋ ಇಲ್ಲ ಲೇಡಿಸ್ ಹಾಸ್ಟೆಲ್ ಹತ್ತಿರನೋ ಕಾಣಿಸಿಕೊಳ್ತಿದ್ದ ಆ ಹುಡುಗನಿಗೆ ತನಗ ಈ  ಹೆಸರಿಟ್ಟಿದ್ದು ಗೊತ್ತಾಗಿ ಹೆಣ್ಣುಮಕ್ಕಳಂಗ ಕಣ್ಣೀರು ಹಾಕಿದ್ದನಂತ! ಈ ನಾಮಕರಣದ ಕೆಲಸ ಎಷ್ಟು ಸುಲಭ ಅನ್ನಿಸಿದ್ರೂ, ಆ ಹೆಸರಿನ ಮೂಲ ಏನು ಅಂತು ತಿಳ್ಕೊಂಡಾಗ, ಅದನ್ನ 'ಕ್ರಿಯೇಟಿವಿಟಿ' ಅನ್ನಬೇಕೋ ಅಥವಾ 'ಹುಡುಗಾಟದ ಪರಮಾವಧಿ' ಅನ್ನಬೇಕೋ ಅದು ಹೆಸರಿಟ್ಟವರಿಗೆ, ಹೆಸರಿಡಿಸಿಕೊಂಡವರಿಗೆ ಬಿಟ್ಟಿದ್ದು.

ನಾವು ಸಣ್ಣವರಿದ್ದಾಗ ನಮ್ಮಜ್ಜಿ ಮಹಾಭಾರತ ಕಥಿ ಹೇಳಿಕೋತ ನಮ್ಮ ದೊಡ್ಡಪ್ಪಗ ಅವರ ಕಾಲೇಜಿನ ಗೆಳ್ಯಾರು 'ಭೀಷ್ಮಾಚಾರಿ' ಅಂತ ಕರೀತಿದ್ರು ಅಂತ ಹೇಳಿದ್ಲು. ಪಾಪ, ನಮ್ಮ ದೊಡ್ಡಪ್ಪ ಪ್ರತಿವರ್ಷ ಪರೀಕ್ಷದೊಳಗ ಫೇಲ್ ಆಗಿ-ಆಗಿ, ಮುಂದಿನ ಕ್ಲಾಸಿಗೆ ಹೋಗಲಿಕ್ಕೇ ಆಗಿರಲಿಲ್ಲಂತ. ಅವರಿದ್ದ ಕ್ಲಾಸಿನ್ಯಾಗ ಅವರೆ 'ಸೀನಿಯರ್ ಸಿಟಿಜೆನ್' (ಇದು ನಾವು ಕಾಲೇಜಿನ್ಯಾಗ ಇದ್ದಾಗ ಇಟ್ಟಿದ್ದ ಹೆಸರು)! ಹೀಂಗಾಗಿ ಅವರು ಇಡೀ ಕಾಲೇಜಿಗೆ 'ಭೀಷ್ಮ ಪಿತಾಮಹ' ಆಗಿದ್ರು. ಅಂದ್ರ ಈ ನಾಮಕರಣ ಪದ್ಧತಿ ಹಿಂದಿನಿಂದಲೂ ನಡಕೊಂಡು ಬಂದಿದ್ದಲ್ಲದೇ, ಹೀಂಗೇ ಮುಂದುವರಕೊಂಡು ಹೋಗ್ತದ ಅನ್ನೋದಂತೂ ಗ್ಯಾರೆಂಟಿ. ಈ ಹೆಸರಿಡೋ ಕೆಲಸ ಬರೀ ಸ್ವಾದ್ರತ್ತಿ (ಹುಡುಗಿಯರು) ಮಾಡೋದಾಗಿರದೆ, ಸ್ವಾದರ ಮಾವಂದಿರೂ (ಹುಡುಗರೂ) ಈ ಕೆಲಸ ಮಾಡ್ತಾರ ಅನ್ನೋದು ಎಲ್ಲಾರಿಗೂ ಗೋತ್ತೇ ಅದ. ಯೂನಿವರ್ಸಿಟಿನ್ಯಾಗ ಓದೋವಾಗ ನಮ್ಮ ಕ್ಲಾಸಿನ ಕೆಲವು ಹುಡುಗೂರು ನಮ್ಮ ಪ್ರೊಫೆಸರ್ ಒಬ್ಬರಿಗೆ 'ಡಾಬರ್' ಅಂತ ಕರೀತಿದ್ರು. ಅವ್ರು ದಿನಾಲೂ ತಲಿಗೆ ತೆಪ-ತೆಪ ಎಣ್ಣಿ ಹಚಗೊಂಡು ಚಪ್ಪಟಾಗಿ ಕೂದಲ ಬಾಚಿಕೊಳ್ಳುತ್ತಿದ್ದದ್ದನ್ನು ನೋಡಿ ಈ ಹೆಸರಿಟ್ಟಿರಬಹುದು ಅಂತ ತಿಳಕೊಂಡಿದ್ದ ನಮಗ ಅದು 'ಡಾಬರ್ ಮನ್' ಅನ್ನೋ ಹೆಸರನ್ನು ಸಣ್ಣದಾಗಿಸಿ 'ಡಾಬರ್' ಅಂತಾರ ಅನ್ನೋದು ಗೊತ್ತಾಯಿತು. ಮಾತು-ಮಾತಿಗೂ ಸಿಟ್ಟಿಗೆದ್ದು ಧನಿಯೇರಿಸಿ ಬಯ್ಯೂದು  ಆ ಪ್ರೊಫೆಸರ್ ಅವರ ಒಂದು ಪ್ರಮುಖ ಲಕ್ಷಣ ಆಗಿದ್ದು ನೆನಪಾಗಿತ್ತು. ನಾವೂ ಈ ಪರಂಪರಾನ ಮುಂದುವರೆಸಿಕೊಂಡು ಹೋದ್ವಿ. ನಮಗ 'ಎಕಾನಾಮಿಕ್ ಬಾಟನಿ' ಕಲಿಸಿಕೊಡಿದ್ದ ಪ್ರೊಫೆಸರ್ ಒಬ್ಬರು ಅಕ್ಕಿಯ ಬ್ಯಾರೆ-ಬ್ಯಾರೆ ತಳಿಗಳ ಬಗ್ಗೆ ಹೇಳಿಕೊಟ್ಟು, 'ಜವಾನಿಕಾ', 'ಜಪಾನಿಕಾ' ಅಂತ ಎರಡು ವೆರೈಟಿ  ಇರ್ತದ ಅಂತ ಹೇಳಿದ್ರು. ಆಗ್ಲೇ ರಿಟೈರಮೆಂಟಿಗೆ ಬಂದಿದ್ದ ಅವರು ಸ್ವಲ್ಪ ಕಿರಿಕಿರಿ ಮನುಷ್ಯ. ಕೈ ಬಿಚ್ಚಿ ಮಾರ್ಕ್ಸ ಕೊಡತಿರಲಿಲ್ಲ. ಪ್ರತಿಯೊಂದು ವಿಷಯಕ್ಕೂ "ನಮ್ಮ ಕಾಲದಾಗ ಹಂಗಿತ್ತು. ನಿಮ್ಮ ಕಾಲದಾಗ ಹಿಂಗಿದ್ರೂ, ನೀವು ಸರಿಯಾಗಿ ಕಲಿಯಂಗಿಲ್ಲ" ಅಂತ ಬೈಯ್ಕೋಂಡು ಇರ್ತಿದ್ರು. ಹುಡುಗೂರೆಲ್ಲ ಅವರಿಗೆ 'ಜವಾನಿಕಾ-ಜಪಾನಿಕಾ' ಅಂತ ಹೆಸರಿಟ್ಟಿದ್ದನ್ನು ನೋಡಿ, ನಾನು ಮತ್ತು ನನ್ನ ಗೆಳತಿ ಅದನ್ನು ಸ್ವಲ್ಪ ಟ್ರಿಮ್ ಮಾಡಿ 'ಜವಾನಿ' ಅಂತ ಮಾಡಿದ್ವಿ. ಮೊದಲೇ ಮುದುಕ ಮನುಷ್ಯಾ, ಸುಮ್ಮ-ಸುಮ್ಮನೆ ಸಿಟ್ಟಿಗೆದ್ದು ನಮಗೇನಾದ್ರೂ ಬೈದಿದ್ದ ದಿನ, "ಯಹಾಂ, ವಹಾಂ ಸಾರೇ ಜಹಾಮೆ ತೇರಾ ರಾಜ ಹೈ, 'ಜವಾನಿ' ವೋ 'ದಿವಾನಿ' ತು ಜಿಂದಾಬಾದ್" ಅಂತ ಸಿನೆಮಾ ಹಾಡನ್ನು ಹಾಡಿ, ನಮಗ ನಾವ ಸಮಾಧಾನ ಮಾಡ್ಕೋತಿದ್ವಿ.ಹೀಂಗ ಹೆಸರಿಟ್ಟು ಅದರ ಜೊತಿಗೆ ಒಂದು ಹಾಡು ಹಾಡೋದನ್ನು ಸ್ವಲ್ಪ ದಿನ ಮುಂದುವರೆಸಿಕೊಂಡು ಹೋದ್ವಿ.ಮುಂದೊಂದು ದಿನ ಅದು ನಮಗೂ

(ಮುಂದಿನ ಪುಟಕ್ಕೆ…)


Copyright © KCO – Brindavana

(.. ಹಿಂದಿನ ಪುಟದಿಂದ)

ತಿರುಗುಬಾಣ ಆತು! ಬಯೋಟೆಕ್ ಸ್ಪೆಷಲ್ಸ್ ಓದ್ತಿದ್ದ ನಾವು ಮೂವರು ಗೆಳತೇರು 'ಡಿಪಾರ್ಟಮೆಂಟ್ ಡೇ' ಅಂತ ಭಾರೀ ಖುಷಿಯಿಂದ 'ಇಳಕಲ್ ಸೀರಿ' ಉಟಗೊಂಡು ಹೋದಾಗ, ಜೆನಿಟಿಕ್ಸ್ ಸ್ಪೆಷಲ್ಸ್ ನ ಹುಡುಗೂರಿಂದ ನಮಗೂ ನಾಮಕರಣ ಆಗಿತ್ತು, “ಸುವ್ವಿ, ಸುವ್ವಕ್ಕ, ಸುವ್ವಲಾಲಿ”! ಅದ್ರ ಜೋಡಿ “ಸುವ್ವಿ, ಸುವ್ವಕ್ಕಲಾಲಿ, ಸುವ್ವಲಾಲಿ, ಜಾಣೆ ಜಾಗರದ ಹೆಣ್ಣೆ ಸುವ್ವಲಾಲಿ” ಅನ್ನೋ ಜಾನಪದ ಗೀತೆನೂ ಹಾಡಿದ್ದರು. ಇದಕ್ಕ ನಾವು ಹೆಂಗ ಉತ್ತರ ಕೊಡಬೇಕು ಅಂತ ಯೋಚನಿ ಮಾಡತಿರಬೇಕಾದ್ರ, ಆ ಹುಡುಗೂರೊಳಗೊಬ್ಬ ನಮ್ಮದ ಕ್ಲ್ಯಾಸಿನ್ಯಾಗ ಓದ್ತಿದ್ದ ಒಬ್ಬ ಹುಡುಗೀಗೆ ಹಿಂದೊಮ್ಮೆ ತನಗ ಸಿಕ್ಕಿದ್ದ ಸೀಟ್ ಬಿಟ್ಟುಕೊಟ್ಟಿದ್ದು ಗೊತ್ತಾಯಿತು. ಅವನಿಗೆ 'ಕರ್ಣ' ಅಂತ ನಾಮಕರಣ ಮಾಡಿದ್ದಲ್ಲದೇ “ಆ ಕರ್ಣನಂತೆ ನೀ ದಾನಿಯಾದೆ, ಇನ್ನೊಂದು ಜೀವಕೆ ಆಧಾರವಾದೆ” ಅನ್ನೋ ಹಾಡು ನಾವೂ ಹಾಡಿದ್ವಿ. ಆದ್ರ ಆ ಹುಡುಗೀಗೆ 'ಕುಂತಿ' ಅಂತ ನಾಮಕರಣ ಮಾಡಲಿಲ್ಲ! ಮುಂದೆಲ್ಲ ನಾವು ಮಾಡುತ್ತಿದ್ದ ನಾಮಕರಣ ಹಾಡಿಗೆ ಸೀಮಿತ ಆಗಿರದೆ, ನಾವು ಓದ್ತಾ ಇದ್ದ ಬಯೋಟೆಕ್, ಜೆನಿಟಿಕ್ಸ್ ಜೊತಿಯಾಗಿಸಿಕೊಂಡು 'ಜೀನಿಕ್' ಆಗಿತ್ತು.

ನಾವು ಲೇಡೀಸ್ ಹಾಸ್ಟೆಲಿನಲ್ಲಿದ್ದಾಗ ಜೊತೆಗಿದ್ದ ನೂರಾರು ಹುಡುಗೇರು, ಅವರು ಮಾಡಿದ ಸಾವಿರಾರು ನಾಮಕರಣಗಳು ಕೇಳಿಬರ್ತಿದ್ದವು. ಹೀಂಗ ಒಂದು ಹುಡುಗಿಗೆ 'ಉಶ್ ಕುಮಾರಿ' ಅಂತ ಯಾರೋ ಹೆಸರಿಟ್ಟಿದ್ರು. ಅದ್ರ ಹಿಂದಿನ ಕಾರಣ ಏನಂದ್ರ, ಆ ಹುಡುಗಿ ಆಗಲೆ ಎಂ.ಎ, ಎಂ.ಫಿಲ್ ಮುಗಿಸಿ, ಯು.ಪಿ.ಎಸ್.ಸಿ. ಪರೀಕ್ಷೆಗೆ ತಯಾರಿ ನಡೆಸಿದ್ದಳು. ಯಾವಗ್ಲೂ ತನ್ನ ರೂಮಿನ್ಯಾಗ ಓದಿಕೊಳ್ತಿದ್ದ ಆಕಿ, ಹೊರಗಡೆ ಏನಾರ ಸ್ವಲ್ಪ ಗದ್ದಲ, ಸಪ್ಪಳ ಕೇಳ್ಸಿದರ ಸಾಕು, ಒಳಗಿನಿಂದಲೇ “ಉಶ್”, “ಉಶ್” ಅನಕೋತ ಕೂಗುತಿದ್ದಳು. ಆಗ ಮಾತಾಡಿಕೋತ ಗದ್ದಲ ಮಾಡ್ತಿದ್ದವರು ಸುಮ್ಮನಾಗ್ತಿದ್ರೂ ಆಕಿಗೆ 'ಉಶ್ ಕುಮಾರಿ' ಅಂತ ನಾಮಕರಣ ಮಾಡಿ, ಹಿಂದಿನಿಂದ ಆಡಕೊಂಡು ನಗತಿದ್ರು. ಹಾಸ್ಟೆಲ್ಲಿನ್ಯಾಗ ಉಪಯೋಗಸಲಿಕ್ಕೆ ಬೇಕಾಗೋ ಸಣ್ಣ-ಸಣ್ಣ ಸಾಮಾನುಗಳಿಗೂ ಇನ್ನೊಬ್ಬರ ಮ್ಯಾಲೆ ಡಿಪೆಂಡ್ ಆಗ್ತಿದ್ದ ಹುಡುಗೇರಿಗೆ 'ಪ್ಯಾರಾಸೈಟ್' (ಪರಾವಲಂಬಿ) ಅಂತನೂ, ತಲಿ ತುಂಬ ಹೇನು ಸಾಕಿಕೊಂಡು, ಪರ-ಪರ ಅಂತ ತಲಿ ತುರಿಸಿಕೊಳ್ತಾ ಅವುಗಳ ಜೊತಿಗೆ ಹೊಂದಾಣಿಕೆ ಮಾಡ್ಕೊಂಡು ಇದ್ದಂಥ ಹುಡುಗೇರಿಗೆ 'ಸಿಂಬಯಾಸಿಸ್' (ಜೋಡಿಜೀವ) ಅಂತ ಹೆಸರಿಟ್ಟಿತ್ತು. ಸ್ವಲ್ಪ ಡೇರಿಂಗ್ ಇದ್ದವರು 'ಕರ್ತವ್ಯಂ' ಅಂತ ಕರೆಸಿಕೊಂಡ್ರ, ನೋಡಲಿಕ್ಕೆ ಸಾಫ್ಟ ಅನ್ನೋ ಹಂಗ ಇದ್ದು, ಯಾರಾರ ಏನಾದ್ರೂ ತಪ್ಪು-ಅನ್ಯಾಯ ಮಾಡಿದಾಗ, ಅವರ ಎದುರು ಧನಿ ಎತ್ತಿ ನಿಂತು, ಹೋರಾಟಕ್ಕಿಳಿದವರು 'ದಾಮಿನಿ' ಅಂತ ಕರೆಸಿಕೊಂಡಿದ್ರು. ಗೆಳ್ಯಾರು-ಗೆಳತೇರ ಸಪೋರ್ಟ ಇರಲಾರದೆ ಹೋರಾಟಕ್ಕ ನಿಂತವರು 'ಒಂಟಿಜೀವ' ಅಂತನೂ ನಾಮಕರಣ ಮಾಡಿಸಿಕೊಂಡಿದ್ರು. ನಮ್ಮಗಳ ಮ್ಯಾಲೆ ಸಿನಿಮಾಗಳು ಪ್ರಭಾವ ಬೀರಿದ್ದವು ಅನ್ನೋದಂತೂ ಒಪ್ಪಿಕೊಳ್ಳಲೇಬೇಕು. ಯಾಕಂದ್ರ, ಭಾರಿ ಸ್ಟ್ರಿಕ್ಟ್ ಆಗಿದ್ದ ನಮ್ಮ ವಾರ್ಡನ್ನಿನ ಧ್ವನಿ ಕೇಳಿಸಿದಕೂಡ್ಲೇ, “ಬುಲ್ ಡಾಗ್...ಬುಲ್ ಡಾಗ್” ಅನ್ನೋ ಸಿನಿಮಾ ಡೈಲಾಗ್ ನಮ್ಮ ಕಿವಿಯೊಳಗ ಗುಂಯ್ ಗುಡುತಿತ್ತು. ಆ ಸಿನೆಮಾದಾಗ 'ಬುಲ್ ಡಾಗ್' ಅಂತ ಕರೆಸಿಕೊಳ್ಳೋ ಬಾಸ್ ನೆನಪಾಗುತಿದ್ರು.

ಇನ್ನು 'ಗಣೇಶನ ಮದುವೆ' ಸಿನೆಮಾದಾಗ ನಾಯಿಗೆ 'ರಮಣ ಮೂರ್ತಿ'ಯಂತ ಹೆಸರಿಟ್ಟು ಗಣೇಶ ತನ್ನ ಮನೆ ಮಾಲೀಕನನ್ನ ಗೋಳಿಟ್ಟುಕೊಂಡಿದನ್ನು ನೆನಪು ಮಾಡಿಕೊಂಡ್ರ, ನಾವು ನಮ್ಮ ಮನ್ಯಾಗಿನ ನಾಯಿಗಳಿಗೆ ಮಾಡಿದ ನಾಮಕರಣನೂ ನೆನಪಾಗ್ತದ. ನಾನು ಹೈಸ್ಕೂಲ್ ಮುಗಿಸೋತನಕ ನಮ್ಮ ಮನ್ಯಾಗ ನಾಯಿ ಸಾಕಿದ್ವಿ. ಜಡ್ಜ ಆಗಿ ಕೆಲಸ ಮಾಡ್ತಿದ್ದ ನಮ್ಮಪ್ಪಗ ಟ್ರಾನ್ಸಫರ್ ಆಗ್ತಿದ್ದ ಕೆಲವು ಊರಿನ್ಯಾಗ, ಊರ ಹೊರಗೊಂದು ಕೋರ್ಟು, ಮಗ್ಗಲದಾಗ ನಮಗ ಒಂದು ಕ್ವಾರ್ಟರ್ಸು, ಅಲ್ಲೇ ಒಂದು ಸಣ್ಣ ಜೇಲು, ದೂರದಾಗ ಬಸ್ ಸ್ಟಾಂಡ್, ಹೀಂಗ ಇದ್ದು ನಮಗ ಮಂದಿ ಸಂಪರ್ಕ ಭಾಳ ಕಡಿಮೆ ಇತ್ತು.ಇಂಥಾ ಊರಾಗ ಇದ್ದಾಗೆಲ್ಲಾ ನಾಯಿ ಸಾಕ್ಕೊಂಡಿದ್ವಿ. ಮುದಿ, ಕಾಳಿ, ಚಂದ್ರು, ಫಂಡಿ, ಕೆಂದ, ನಿಕ್ಕು, ಬಗೀರಾ... ಲಿಸ್ಟ್ ಭಾಳ ದೊಡ್ಡದದ.'ಫಂಡಿ'ಯ ಪೂರ್ತಿ ಹೆಸರು 'ಪಂಡರಿಬಾಯಿ'! ನಮ್ಮಣ್ಣ ಅದಕ್ಕ ಯಾಕ ಆ ಹೆಸರಿಟ್ಟಿದ್ನೋ ಗೊತ್ತಿಲ್ಲ, ಆದ್ರ ಮುಂದೊಂದು ದಿನ ಅದು ಸಿನೆಮಾದಾಗ ಪಂಡರಿಬಾಯಿ ಹೆಂಗ ಮಮತಾಮಯಿ ತಾಯಿ ಪಾತ್ರ ಮಾಡ್ತಿದ್ದರೋ ಅದನ್ನ ಮೀರಿಸೋವಂಥ ತಾಯಿ ಹೃದಯ ತನ್ನದು ಅನ್ನೋದನ್ನು ಸಾಬೀತು ಮಾಡಿತ್ತು. ಒಂದಿನ ಅದು ರೋಡಿನ ಮ್ಯಾಲೆ ಮುಂದು-ಮುಂದು ಹೋಗೋ ಮುಂದ, ನಾಲ್ಕೈದು ತಿಂಗಳಿನ ಅದರ ಮರಿನೂ ಹಿಂದ ಓಡಿತ್ತು. ಸ್ಪೀಡಾಗಿ ಬಂದ ಮೋಟಾರು ಬೈಕಿನ ಗಾಲಿ ಮರಿ ಮ್ಯಾಲೆ ಹರದು ಅದು ಸತ್ತು ಹೋಗಿಬಿಡ್ತು. ಮುಂದ ಓಡಿ ಹೋಗಿದ್ದ ಫಂಡಿಗೆ ತನ್ನ ಮರಿ ಸತ್ತುಹೋಗಿದ್ದು ಗೊತ್ತಿರಲಿಲ್ಲ. ಆಮ್ಯಾಲೆ ಎರಡು-ಮೂರು ದಿನ ಕುಂಯ್, ಕುಂಯ್ ಅನಕೋತ ಆ ಮರೀನ್ನ ಹುಡುಕಾಡ್ದೇ ಇರೋ ಜಾಗನೇ ಇರಲಿಲ್ಲ. ಹೆಸರಿಗೆ ತಕ್ಕಂಗ 'ಪಂಡರಿಬಾಯಿ' ಆಗಿತ್ತು. ಅದಾಗಿ ಸ್ವಲ್ಪ ದಿವ್ಸಕ್ಕ ಒಂದು ದಿನ 'ಮುದಿ'ಗೂ ಪೆಟ್ಟಾಗಿ, ಮನಿ ತನಕನೂ ಬರಲಿಕ್ಕಾದೆ ರೋಡಿನ ಬಾಜೂನೆ ಮಲಗಿತ್ತು. ನಾನು, ನಮ್ಮಣ್ಣ ನೋಡ್ಲಿಕ್ಕೆ ಹೋದ್ವಿ. ನಮ್ಮನ್ನು ನೋಡಿ ಕುಂಯ್, ಕುಂಯ್ ಅಂದು ಬಾಲ ಅಲ್ಲಾಡಿಸಿತು. ಅದರ ತೊಡಿ ಮುರುದು ಹೋಗಿದ್ದನ್ನು ನೋಡಿ ಮನಿಗೆ ಬಂದ ನಾನು, “ಅವ್ವ, 'ಮುದಿ' ನಾಯಿ 'ದುರ್ಯೋಧನ' ಆಗ್ಯದ” ಎಂದು ಅತಗೋತ ಹೇಳಿದಾಗ, ತಾನು ಹೇಳಿದ 'ಮಹಾಭಾರತ' ಕಥಿಯಿಂದ 'ಮುದಿ' ನಾಯಿಗೆ ಹೊಸ ಹೆಸರಿಟ್ಟದನ್ನು ನೋಡಿ ನಮ್ಮಜ್ಜಿ ನಕ್ಕರೂ, ಅತಗೋತ ನಿಂತಿದ್ದ ನನ್ನನ್ನು ಸಮಾಧಾನ ಮಾಡಿದ್ರು.

ನಮಗ ಸೋಶಿಯಲ್ ಲೈಫ್ ಭಾಳ ಕಡಿಮೆಯಿದ್ದದ್ದರಿಂದ, ಸಣ್ಣ ವಯಸ್ಸಿಗೇ ಪುಸ್ತಕ, ಪೇಪರ್ ಓದೋ ಹವ್ಯಾಸ ಬೆಳದು, ಕನ್ನಡ ಭಾಷಾದ ಮ್ಯಾಲೆ ಹಿಡಿತ ಸಿಕ್ಕಿತ್ತು. ಆಗ ನಾನು ಮಾಡ್ತಿದ್ದ ಒಂದ ಕೆಲಸ ಅಂದ್ರ, ಪ್ರತಿಯೊಂದು ಹೆಸರು, ನಂಬರ್, ಮಗ್ಗಿನೆಲ್ಲ ಉಲ್ಟಾ ಮಾಡಿ ಹೇಳೋದು. 'ದುಂಬ', 'ಡುರಎ', 'ರುಮೂ', 'ಲ್ಕುನಾ'. . . . ಇದರ ಜೋಡಿ ನಾವು ಇಡತಿದ್ದ ಹೆಸರು, ಅಡ್ಡ ಹೆಸರುಗಳೂ ಉಲ್ಟಾ ಆದವು. ಆವಾಗ್ಲೇ ನಮ್ಮನಿಗೆ ಇಪ್ಪತ್ತು ದಿನದ ನಾಯಿಮರಿಯನ್ನು ತೊಗೊಂಡು ಬಂತು. 'ನಾಯಿ ಕುನ್ನಿ (ಮರಿ)ಗೆ' ಏನು ಹೆಸರಿಡಬೇಕು ಅಂತ ಒಂದೆರಡು ದಿನ ಯೋಚನಿ ಮಾಡಿ, ಕುನ್ನಿ ಅನ್ನೋದನ್ನ ಉಲ್ಟಾ ಮಾಡಿ 'ನಿಕ್ಕು' ಅಂತ ಹೆಸರಿಟ್ವಿ. ಇಪ್ಪತ್ತು ದಿನದ ಕುನ್ನಿಯಾಗಿ ಮನಿಗೆ ಬಂದಿದ್ದ 'ನಿಕ್ಕು' ಹನ್ನೆರಡು-ಹದಿಮೂರು ವರ್ಷ ನಮ್ಮ ಮನಿಯ ಸದಸ್ಯನಾಗಿದ್ದು, ಈಗ ನಮ್ಮ-ನಮ್ಮ ಮಕ್ಕಳಿಗೆ ಹೇಳೋ ಕಥಾಪ್ರಸಂಗದೊಳಗ ಬಂದು ಹೋಗ್ತದ. ನಮ್ಮ ಮನಿ ಮುಂದ ಓಡಾಡಿಕೊಂಡಿದ್ದ ಮೊಳ ಉದ್ದ ಮಾರಿಯ ನಾಯಿಗೆ 'ಕುದುರೆಮೋತಿ' ಅಂತ ಹೆಸರಿಟ್ಟಿದ್ರ, ನಮ್ಮಕ್ಕನ ಮಗಳು ಕಪ್ಪು ಬಣ್ಣದ ನಾಯಿಗೆ 'ಬಗೀರಾ' ಅಂತ ಕರದಾಗ 'ಜಂಗಲ್ ಬುಕ್'ನ ಕಪ್ಪುಚಿರತಿ ನೆನಪಾಗಿತ್ತು. ಇಲ್ಲಿ ಅಮೆರಿಕಾದಾಗ ಒಮ್ಮೆ ನನ್ನನ್ನು ನೋಡಿ ತನ್ನ ಸಣ್ಣ ಧನಿಯೊಳಗ ಎರಡು-ಮೂರು ನಿಮಿಷ ಬಿಡದೇ ಬೊಳಗಿದ ಸಣ್ಣ ಸೈಜಿನ 'ಚಿವೌವಾ' ನಾಯಿನ್ನ ನೋಡಿ, “ಭಲೆ, 'ಬಹದ್ದೂರ ಗಂಡು'” ಅಂದಿದ್ದೆ.

ನಮ್ಮ ಈ ನಾಮಕರಣ ಪ್ರಕ್ರಿಯಾ ಬರೀ ಮನುಷ್ಯಾರಿಗೆ, ಪ್ರಾಣಿಗೊಳಿಗೆ ಸೀಮಿತ ಆಗಿಲ್ಲ. ನಮ್ಮನ್ಯಾಗಿನ ಸ್ಟೀಲ್ ಭಾಂಡಿ(ಪಾತ್ರೆ)ಗೊಳೂ ನಮ್ಮಿಂದ ಹೆಸರು ಇಡಸಿಕೊಂಡಾವ. ನಾವು ಸಣ್ಣೋರಿದ್ದಾಗ, ನಮ್ಮ ಮನಿ ಮುಂದ ತಿಪ್ಪಣ್ಣ ಅಂತ ಒಬ್ಬ ವಯಸ್ಸಾದ ಮನುಷ್ಯಾ ಭಾಂಡಿ ಮಾರಲಿಕ್ಕೆ ಬರ್ತಿದ್ದ. ನಮುವೆಲ್ಲ ಹಳೇ ಬಟ್ಟಿ ಕೊಟ್ಟು ಭಾಂಡಿ ಖರೀದಿ ಮಾಡೋದ್ರೊಳಗ ನಮ್ಮಜ್ಜಿ ಅಗದಿ( ಭಾರಿ) ಎಕ್ಸ್ಪರ್ಟ. ಹಂಗ ತೊಗೊಂಡ ಪಾತ್ರಿಗೊಳೆಲ್ಲ 'ತಿಪ್ಪಣ್ಣನ ಗುಂಡಿ'(ಗುಂಡು ತಳದ ಪಾತ್ರೆ),'ತಿಪ್ಪಣ್ಣನ ಭೋಗೋಣಿ'(ಡಬರಿ), 'ತಿಪ್ಪಣ್ಣನ ಕೊಳಗ'(ಕೊಳದಪ್ಪಲೆ) ಅಂತ ಹೆಸರಿಡಿಸಿಕೊಂಡು ಈಗಲೂ ನಮ್ಮಮ್ಮನ ಮನಿಯ ಅಡಗಿಮನ್ಯಾಗ ಅವ. ನಮ್ಮಮ್ಮ ಇವತ್ತಿಗೂ 'ತಿಪ್ಪಣ್ಣನ ಗುಂಡಿ'ಯೊಳಗ ಹಾಲು ಹೆಪ್ಪು ಹಾಕ್ತಾಳ. ಜೊತಿಗೆ ಹಾಲು ಕಾಸಲಿಕ್ಕೆ 'ಶಾರದಾ ಮಾಮಿ' ಗುಂಡಿನೇ ಆಗಬೇಕು. ನಮ್ಮ ಮಾಮಾನ ಹೆಣ್ತಿ (ನಮ್ಮಮ್ಮನ ವೈನಿ) ತಂದುಕೊಟ್ಟಿದ್ದ ಪಾತ್ರಿ ಅದು.ಅಮ್ಮನ ಮನಿಗೆ ಕೆಲಸಕ್ಕೆ ಬರೋ ರಾಧಾಗೂ ಈ ಹೆಸರುಗಳು ಚಿರಪರಿಚಿತ. ಹಿತ್ತಲದಾಗ ಮುಸುರಿ ತೊಳಕೋತ ಕೂತಾಕಿಗೆ, “ಏ ರಾಧಾ, 'ಶಾರದಾ ಮಾಮಿ' ಗುಂಡಿ ತೊಳ್ಕೊಡು” ಅಂದ್ರ ಯಾವ ಪಾತ್ರಿ ಕೇಳಲಿಕ್ಕೆ ಹತ್ಯಾರ ಅಂತ ಗೊತ್ತಾಗ್ತದ.ಇನ್ನು ನಮ್ಮಪ್ಪ, ಇವತ್ತಿಗೂ ಅಡಕಿ ಪುಡಿ ಮಾಡಿ ಇಡೋ ದಬ್ಬಿ ಅಂದ್ರ ಅದು 'ವರದಾಚಾರ ಬಾಟಲಿ'. ಹಳೇ ಕಾಲದ ಗಾಜಿನ ಹಾರ್ಲಿಕ್ಸ್ ಬಾಟಲಿ ಮಾಟದ(ಶೇಪಿನ) ಆ ಸ್ಟೀಲ್ ಬಾಟಲಿನ ಆಗಲೇ ಬೆಂಗಳೂರಿನ್ಯಾಗ ಸೆಟಲ್ ಆಗಿದ್ದ ನಮ್ಮ ಬಳಗದ ವರದಾಚಾರಿ, ಮೂವತ್ತೈದು ವರ್ಷಗಳ ಹಿಂದ ನಮ್ಮಣ್ಣನ ಮುಂಜವಿಗೆ ಬಂದಾಗ ತಂದು ಕೊಟ್ಟಿದ್ರು.ಇವೆಲ್ಲ ಪಾತ್ರಿಗೊಳ ಜೋಡಿ, 'ಬೇಬಿ ಮಲ್ಲಿತೂಕ'(ಮುಚ್ಚಳ ಇರೊ ಹಿಡಿ ಪಾತ್ರೆ), 'ಬಿಳಿಯವ್ವನ ಮನಿ ಬುಟ್ಟಿ' (ಬಿಳಿಯವ್ವ ಅಂದ್ರ ನಮ್ಮಮ್ಮನ ಅಮ್ಮ,

(ಮುಂದಿನ ಪುಟಕ್ಕೆ...)


Copyright © KCO – Brindavana

## *ಹೆಸರಿನೊಳಗ ಏನದ?*

(.. ಹಿಂದಿನ ಪುಟದಿಂದ)

ಬೆಳ್ಳಗಿನ ಮೈಬಣ್ಣದ ಆಕಿಗೆ 'ಬಿಳಿಯವ್ವ' ಅಂತ ಕರೆದರೆ, ನಮ್ಮಜ್ಜಗ 'ಬಿಳಿತಾತ' ಅಂತ ಕರೀತಿದ್ರಿ) ಹೀಂಗ ಹೆಸರಿಡಿಸಿಕೊಂಡ ಬ್ಯಾರೆ-ಬ್ಯಾರೆ ಭಾಂಡಿ ಸಾಮಾನ ಅವ. ಈ ಹೆಸರಿಡೋ ಗುಣ, ನಮ್ಮಮ್ಮಗ ಆಕಿ ತವರು ಮನಿಯಿಂದ ಬಂತೋ ಏನೋ? ಯಾಕಂದ್ರ, ನಮ್ಮಜ್ಜಿ ಮನಿ ಹೈದ್ರಾಬಾದಿನ್ಯಾಗ 'ಶ್ರೀರಾಮುಲು', 'ಜಯರಾಮುಲು' ಅಂತ ಎರಡು ದೊಡ್ಡ ಹಿತ್ತಾಳಿ ಹಂಡೆಗೋಳಿದ್ದವು. ಅವುಗಳ ಮ್ಯಾಲೆ ತೆಲುಗು ಭಾಷಾದಾಗ ಈ ಹೆಸರುಗಳನ್ನೂ ಹಾಕಿಸಿದ್ದರು! ಬಿಳಿಯವ್ವ, ತಿಪ್ಪಣ್ಣ, ವರದಾಚಾರಿ, ಶಾರದಾ ಮಾಮಿ, ಬೇಬಿ.... ಇವರಾರೂ ಈಗ ಇಲ್ಲದಿದ್ದರೂ, ಅವರ ಹೆಸರಿಟಕೊಂಡು ಕರೆಸಿಕೊಳ್ಳೋ ಭಾಂಡಿಗೋಳು ಅವರೆಲ್ಲರನ್ನ ನಮ್ಮ ಮನಸಿನ್ಯಾಗ ಉಳಸ್ಯಾವ.ನಮ್ಮಿಂದ ನಾಮಕರಣ ಮಾಡಿಸಿಕೊಂಡ ಭಾಂಡಿ ಸಾಮಾನಿನ್ಯಾಗ ಒಂದು ಕ್ಲಾಸಿಕ್ ಹೆಸರು ಅಂದ್ರ 'ಭಿಕ್ಷದವರ ಭೋಗೋಣಿ' (ಭಿಕ್ಷುಕರ ಡಬರಿ)! ಒಂದು ಲೀಟರ್ ಅಳತೆಯ ಅಲ್ಯುಮಿನಿಯಂ ಪಾತ್ರಿ ಅದು. ನಮ್ಮೂರ ಜಾತ್ರಿಯೊಳಗ ಖರೀದಿ ಮಾಡಿತ್ತೋ ಏನೋ, ಗೊತ್ತಿಲ್ಲ. ಎರಡು-ಮೂರು ವರ್ಷಕ್ಕೊಮ್ಮೆ ಊರಿಂದೂರಿಗೆ ಟ್ರಾನ್ಸಫರ್ ಆಗ್ತಿದ್ದ ನಮ್ಮ ಜೊತಿ ಭಾಳ ಊರು, ಊರು ತಿರುಗಿ, ಪ್ಯಾಕಿಂಗ್ ನ್ಯಾಗ ಅಲ್ಲಲ್ಲಿ ನೆಗ್ಗಿ ಹೋಗಿತ್ತು. ಅದನ್ನ ನಮ್ಮ ನಾಯಿಗೊಳಿಗಂತ ಜ್ವಾಳದ ಹಿಟ್ಟಿನ ಗಂಜಿ ಮಾಡ್ಲಿಕ್ಕೆ ಕಟ್ಟಿಗಿ ಒಲಿಮ್ಯಾಲೆ ಹೆಚ್ಚಾಗಿ ಬಳಸ್ತಿದ್ದಿದ್ದರಿಂದ ಅದು ಕರಕ(ಕಪ್ಪು) ಆಗಿ 'ಭಿಕ್ಷದವರ ಭೋಗೋಣಿ' ಅಂತ ನಾಮಕರಣ ಮಾಡಿಸಿಕೊಂಡಿತ್ತು. ಅಕಸ್ಮಾತ್ ನಾಯಿಗೋಳ ಕಿವಿಗೆ ಆ ಹೆಸರೇನಾದ್ರೂ ಬಿದ್ರ, ಅವು ನಿಂತಲ್ಲೆ ಬಾಲ ಅಲ್ಲಾಡಿಸತಿದ್ವು. ಆ ಪಾತ್ರಿ ಅಷ್ಟು ಪಾಪ್ಯುಲರ್ ಆಗಿತ್ತು.

ಈ ಅಮೆರಿಕಾಗ ಬಂದು ನೋಡಿದಾಗ ನಮ್ಮ ಸುತ್ತ-ಮುತ್ತ ಹೊಸ ಮಂದಿ, ಹೊಸ ವಿಷಯಗಳು ಕಂಡು ಹೊಸ-ಹೊಸ ಹೆಸರುಗಳು ಹುಟ್ಟಿಕೊಂಡವು. 'ದೇಸಿ,' 'ಗುಜ್ಜು', 'ಮಲ್ಲು', 'ಚಿಂಕು', 'ಕಾಳು', 'ಕರಿ', 'ಬಿಳಿ', 'ಮೆಕ್ಕು' ಅನ್ನೋ ಹೆಸರುಗಳು ಇಲ್ಲಿ ಮೊದಲಿನಿಂದಲೂ ಬಳಕಿಯೊಳಗ ಇದ್ದಿದ್ದು ನಮ್ಮ ಲಿಸ್ಟಿಗೂ ಸೇರಿಕೊಂಡವು. ಕೆಲಸ, ಮದುವಿ, ಮನಿ-ಮಕ್ಕಳು ಅನ್ನೋ ಜವಾಬ್ದಾರಿ ಜೊತಿಗೆ ಸಾತ್ವಿಕ-ದೈವಿಕ, ಆಧ್ಯಾತ್ಮಿಕ-ಧಾರ್ಮಿಕ ಚಿಂತನೆಗಳು ಜಾಸ್ತಿಯಾಗಿ, ನಾವು ಇಡುವ ಹೆಸರಿಗಳೂ ದಿಕ್ಕು ಬದಲಾಯಿಸಿದವು. ಈ ದೇಶದ ಮೂಲನಿವಾಸಿಗಳಿಗೆ 'ಮೂಲ ಮೃತ್ತಿಕೆ' ಅನ್ನೋ ನಾಮಕರಣ ಮಾಡೋದರ ಜೊತಿಗೆ, ಹಲವಾರು ಹೆಸರುಗಳಿಗೆ 'ಈಶ್ವರ'-'ಈಶ್ವರಿ' ಸೇರಿಕೊಂಡವು. ಪೊಲೀಸ್ ಕಾರು ಕಂಡ ತಕ್ಷಣ "ಮಾಮ/ ಮಾಮಿ" ಅನ್ನುತ್ತಿದ್ದ ನಾವು ಈಗ ಅವರಿಗೆ 'ಕಾಪೇಶ್ವರ'-'ಕಾಪೇಶ್ವರಿ' ಅಂತ ಕರೀತೀವಿ. ಹೈವೇಯೊಳಗ ಹೈ ಸ್ಪೀಡಿನಲ್ಲಿ ಓಡಾಡೋ ಟ್ರಕ್, 'ಟ್ರಕ್ಕೇಶ್ವರ' ಅಂತ ಕರೆಸಿಕೊಂಡ್ರ, ಒಂದಿಷ್ಟೂ ಅಂಜಿಕಿಯಿಲ್ಲದೆ ರೋಡಿನ ಅಕ್ಕ-ಪಕ್ಕ ಹುಲ್ಲು ಮೇಯ್ಕೊಂಡು ಓಡಾಡೋ ಜಿಂಕಿ, ಯಾವಾಗ ಹಾರ್ಕೊಂಡು ಕಾರಿನ ಮುಂದ ಬರ್ತದೋ ಅನ್ನೋ ಯೋಚನಿ ಹುಟ್ಟಿಸೋದ್ರ ಜೊತಿಗೆ 'ಜಿಂಕೇಶ್ವರ' ಅಂತ ಹೆಸರಿಡಿಸಿಕೊಂಡದ. ಹೀಂಗ ಒಂದು ದಿನ ಕಾರಿನಾಗಿ ಹೊಂಟಾಗ, ಹಿಂದಿನ ಸೀಟಿನಲ್ಲಿ ಕೂತಿದ್ದ ಮಗ, "ಅಮ್ಮ, ನೋಡಲ್ಲಿ 'ಗುದ್ದೇಶ್ವರ'" ಅಂದಕೂಡ್ಲೆ ತಿರುಗಿ ನೋಡಿದ್ದೆ. ನಮ್ಮ ಕಾರಿನ ಬಾಜೂನ್ಯಾಗ ಭಾರಿ ಸ್ಪೀಡಿನಿಂದ ಲೈನ್ ಬದಲಿಸಿ ಹೊಂಟಿದ್ದ ಕಾರು ಎಲ್ಲೋ ಗುದ್ದಿಸಿಕೊಂಡಿತ್ತು. ದೊಡ್ಡದಾಗಿ ಡೆಂಟ್ ಆಗಿದ್ದು ಕಾಣಿಸಿ ಮಗನ ಮಾತಿನ ಅರ್ಥ ಆಗಿತ್ತು! ಹಿಂದಿನಿಂದಲೂ ನಡಕೊಂಡು ಬಂದಿದ್ದ ಈ ನಾಮಕರಣ ಪದ್ಧತಿ ಹೀಂಗೇ ಮುಂದುವರಕೊಂಡು ಹೋಗ್ತದ ಅನ್ನೋದು ಖಾತ್ರಿ ಅನಿಸಿತ್ತು.

ನಾವು-ನೀವು ಮಾಡೋ ಈ ನಾಮಕರಣದ ಬಗ್ಗೆ ಯೋಚನಿ ಮಾಡಿದಾಗ, ಈ ರೀತಿ ಅಡ್ಡಹೆಸರುಗಳನ್ನು ನಾವ್ಯಾಕ ಇಡತೀವಿ? ಅದರಿಂದ ನಮಗ ಆಗೋ ಲಾಭ ಏನು? ಹೆಸರಿಡಿಸಿಕೊಂಡವರಿಗೆ ಆಗೋ ಲುಕ್ಸಾನು ಏನು? ಅನ್ನೋ ಪ್ರಶ್ನೆಗಳು ಹುಟ್ಟಿಕೊಂಡರೂ, ಅವುಕ್ಕೆಲ್ಲ ಸಮಂಜಸವಾದ ಉತ್ತರ ಹೇಳಲಿಕ್ಕೆ ಆಗಂಗಿಲ್ಲ. ಆದ್ರೂ ಈ ಹೆಸರಿಡೋ ಕೆಲಸ ಮಾತ್ರ ನಿರಂತರ ನಡಕೊಂಡು ಹೋಗೇ ಹೋಗ್ತದ. ಆಗೊಮ್ಮೆ-ಈಗೊಮ್ಮೆ ಈ ಯೋಚನಿಗಳ ಜೊತಿಗೆ ನಮ್ಮ ಪರಿಚಯದ ಪೊಲೀಸ್ ಇನ್ಸ್ಪೆಕ್ಟರ್ ಒಬ್ಬರು ಹಾಡಿದ್ದ ಹಾಡೂ ನೆನಪಾಗ್ತದ. "ಜಿಂದಗೀ, ಹಸನೆ ಗಾನೆ ಕೆ ಲಿಯೆ ಎಕ ಪಲ್, ದೋ ಪಲ್ । ಇಸೆ ಖೋನಾ ನಹೀಂ, ಖೋಕೆ ರೋನಾ ನಹೀಂ । ಜಿಂದಗೀ....". ಅದಂಗ, ಅವರು ಹಾಡಿದ ಈ ಹಾಡು ಕೇಳಿ ನಾವು ಅವರಿಗಿಟ್ಟ ಹೆಸರು 'ಜಿಂದಗಿ'!

## *"ಶ್ರೀ ತುಳುವೇಶ್ವರ ಸಾನಿಧ್ಯ"*



ಪ್ರವೀಣ್ ಕಟೀಲ್

ಪರಶುರಾಮರ ಕೊಡಲಿ ಬಿದ್ದಷ್ಟು ದೂರಕ್ಕೆ ಪಾತಾಳಲೋಕವೇ ಪುಣ್ಯಭೂಮಿಯಾಗಿ ಸೃಷ್ಟಿಯಾದ ಕರಾವಳಿಯ ಸತ್ಯ ಧರ್ಮದ ಮೇಲೆ ನಿಂತಿರುವ ತುಳುನಾಡಿನಲ್ಲಿ ಪ್ರಸಿದ್ಧ ಅನೇಕ ರಾಜರು ಆಳ್ವಿಕೆ ನಡೆಸಿದ್ದು, ಹಿಂದಿನ ರಾಜಾಶ್ರಯದ ಕಾಲದಲ್ಲಿ ತುಳುನಾಡಿನಲ್ಲಿ ಅನೇಕ ಪ್ರಸಿದ್ಧ ವ್ಯಾಪಾರ ವಹಿವಾಟಿನ ಸ್ಥಳಗಳಿದ್ದು, ಅದರಲ್ಲಿ ಐತಿಹಾಸಿಕವಾಗಿ ಪ್ರಸಿದ್ಧಿಯಾಗಿರುವ ಇಂದಿನ ಕುಂದಾಪುರ ಸಮೀಪದ "ಬಸ್ರೂರು" ಕೂಡಾ ಒಂದು.

ಬಸ್ರೂರು ಹಿಂದೆ ಅನೇಕ ರಾಜರ ಆಳ್ವಿಕೆ ಕಂಡ ಊರಾಗಿದ್ದು, ತನ್ನ ಗತಕಾಲದ ರಾಜವೈಭವದ ಅವಶೇಷಗಳನ್ನು ಇಂದಿಗೂ ಅಲ್ಲಲ್ಲಿ ಉಳಿಸಿಕೊಂಡಿದೆ. ರಾಜಾಶ್ರಯದಲ್ಲಿ ಅನೇಕ ರಾಜರು ತಮ್ಮ ಆಳ್ವಿಕೆಯ ಕಾಲದ ದ್ಯೋತಕವಾಗಿ ನಿರ್ಮಿಸಿದ ಅನೇಕ ಹಿಂದಿನಕಾಲದ ಶಿಲ್ಪಲಕಲಾ ನೈಪುಣ್ಯತೆಯನ್ನು ಸಾರುವ ಅನೇಕ ದೇವಾಲಯಗಳೇ ಇಲ್ಲಿನ ಪ್ರತಿಯೊಂದು ರಸ್ತೆಯಲ್ಲೂ ಕಾಣಸಿಗುತ್ತವೆ, ಇಂತಹ ಪುರಾತನ ದೇವಸ್ಥಾನಗಳ ಗೊಂಚಲು ನಂತಿರುವ ಬಸ್ರೂರಿನಲ್ಲಿ ಪ್ರಾಕೃತಿಕ ವಿಸ್ಮಯದ ಅತೀ ಪುರಾತನ ತುಳುನಾಡಿನಲ್ಲೇ ಏಕೈಕ ಕಾಣಸಿಗುವುದು, "ಪ್ರಾಕೃತಿಕ ವಿಸ್ಮಯದ ಪ್ರಕೃತಿ-ಪುರುಷರ ಅಪರೂಪದ ಶ್ರೀ ತುಳುವೇಶ್ವರ ಸಾನಿಧ್ಯ"

ಹೌದು ಇಡೀ ತುಳುನಾಡಿನಾದ್ಯಾಂತ ಎಲ್ಲಿಯೂ ಇಲ್ಲದ ತೌಳವೇಶ್ವರನ ಏಕೈಕ ಸನ್ನಿಧಿ ಇದಾಗಿದ್ದು, ಸುಮಾರು 1500 ವರ್ಷಕ್ಕೂ ಹಿಂದಿನ ಪ್ರಾಚೀನ ದೇವಾಲಯ ಇದಾಗಿರಬಹುದೆಂದು ಊಹಿಸಬಹುದು. ಅಚ್ಚರಿಯ ವಿಷಯವೆಂದರೆ ಹಿಂದೆ ಕಾರಣಾಂತರದಿಂದ ದೇವಾಲಯವೆಲ್ಲಾ ಬಿದ್ದು ಹೋಗಿ ಕೇವಲ ಗರ್ಭಗುಡಿಯ ಭಾಗ, ಗರ್ಭಗುಡಿಯ ದ್ವಾರದ ಅವಶೇಶಗಳ ನಡುವೆ ಇರುವ ಈ ತೌಳವೇಶ್ವರನ ಪಾಣೀಪೀಠದ ಸುತ್ತಲೂ ಅರ್ಧ ಉಳಿದ ಕೆಂಪು ಮುರಕಲ್ಲಿನ ಗೋಡೆಯ ಮೇಲೇಯೇ ಬೃಹತ್ ಆಲದ ಮರವು ಬೆಳೆದು ನಾಲ್ಕೂ ಸುತ್ತಲೂ ಅಗಾಧವಾಗಿ ಪ್ರಕೃತಿಯೇ ಪರಮೇಶ್ವರನಿಗೆ ಆಲಯವಾಗಿ ರಕ್ಷಣೆಮಾಡಿರುವುದು ಪ್ರಕೃತಿ-ಪುರುಷರ ಸಮಾಗಮನದಂತಿರುವ ಈ ಸ್ಥಳವು ಮಾನವರ ಊಹೆಗೂ ಮೀರಿದ ಆಶ್ಚರ್ಯಗಳ ಆಗರವಾಗಿದೆ. ಯುದ್ಧದ ಕಾರಣದಿಂದಲೋ, ಪ್ರಾಕೃತಿಕ ವಿಕೃಕ್ಕೆ ಸಿಕ್ಕಿಯೋ, ವೈರಿಗಳದಾಳಿಗೆ ತುತ್ತಗಿಯೋ ಅಥವಾ ಇನ್ನಿತರ ಯಾವುದೋ ಕಾರಣಕ್ಕೆ ದೇವಾಲಯವೆಲ್ಲಾ ಪಾಳುಬಿದ್ದು, ಕೇವಲ ಗರ್ಭಗುಡಿಯ ಭಾಗದಲ್ಲಿ ಮಾತ್ರ ಅಳಿದುಳಿದ ಮುರಕಲ್ಲಿನ ಗೋಡೆಯ ಸುತ್ತಲೂ ಆಲದ ಮರವು ಬೃಹದಾಕಾರವಾಗಿ ಬೆಳೆದು ಶಿವಲಿಂಗ ಪಾಣಿಪೀಠ ಬಿಟ್ಟು ಸುತ್ತಲೂ 4 ಕಡೆಯಿಂದಲೂ ತನ್ನ ಬೃಹದಾಕಾರದ ಬಿಳಲುಗಳಿಂದ ಆವರಸಿಕೊಂಡು ನಿಂತಿರುವುದು ಪ್ರಕೃತಿಯೇ ಪರಮೇಶ್ವರನ ರಕ್ಷಣೆಗೆ ನಿಂತತಿರುವುದು ಇಲ್ಲಿನ ವಿಸ್ಮಯವಾಗಿದೆ. ಪ್ರಸ್ತುತ ಈಗ ಇಲ್ಲಿ ಹೊರಗಡೆ ಒಂದು ನಂದಿಯ ವಿಗ್ರಹವಿದ್ದು ಅದರ ಎದುರು ಚಿಕ್ಕ ಶಿಲೆಕಲ್ಲಿನ ದ್ವಾರವಿದ್ದು ಒಳಗೆ ಸುತ್ತಲೂ ಬೃಹದಾಕಾರವಾಗಿ ಬೆಳೆದ ಆಲದಮರದ ಬಿಳಲುಗಳ ನಡುವೆ ನಂದಿ ವಿಗ್ರಹಕ್ಕೆ ನೇರವಾಗಿ ಮರದ ಬೇರುಗಳು ಸ್ವಲ್ಪ ಭಾಗ ಒಬ್ಬ ವ್ಯಕ್ತಿ ಒಳಗೆ ತೆರೆದುಕೊಂಡಿರುವುದು ದೈವಿಕ ಆಶ್ಚರ್ಯವಾಗಿದೆ. ತಲೆತಗ್ಗಿಸಿ ಒಳಗೆ ಪ್ರವೇಶಿಸಿದರೆ ಸುಮಾರು ಆರೇಳು ಜನ ನಿಂತುಕೊಳ್ಳುವಷ್ಟು ಜಾಗವಿದ್ದು ಪಾಣಿಪೀಠದಲ್ಲಿ ಶ್ರೀ ತುಳುವೇಶ್ವರ ವಿರಾಜಮಾನವಾಗಿದ್ದಾನೆ.



ಇಡೀ ತುಳುನಾಡಿನಲ್ಲೇ ಏಕೈಕವಾಗಿರುವ , ಮೊಗೆದಷ್ಟೂ ಕುತೂಹಲ, ವಿಸ್ಮಯವನ್ನು ತನ್ನೊಡಲೊಳಗೆ ಹುದುಗಿಸಿಟ್ಟಿರುವಂತ ಈ ಪ್ರಾಕೃತಿಕ ಆಲಯದಿ ನೆಲೆಯಾಗಿರುವ ಶ್ರೀ. *ತುಳುವೇಶ್ವರ* ನ ಅವರ್ಣನೀಯ, ಅನಿರ್ವಚನೀಯ ಸಾನಿಧ್ಯವ ಕಂಡು ನೀವೂ ಪುನೀತರಾಗಿ


Copyright © KCO – Brindavana

## ಲೋಕೋ ಭಿನ್ನರುಚಿಃ



ಅಹೀಶ್ ಭಾರಧ್ವಾಜ

ನನ್ನ ಸ್ನೇಹಿತನಿಗೆ ದ್ವಾರಕ ಹೋಟೆಲಿನ ಖಾಲಿದೋಸೆನೇ ಆಗಬೇಕು, ಮತ್ತೊಬ್ಬನಿಗೆ ರವೆ ಇಡ್ಲಿಗೆ ಎಂಟಿಆರ್ ಹೋಟೆಲಿಗೇ ಹೋಗಬೇಕು, ನನಗೆ ಕಾಫಿಗೆ ಬ್ರಾಹ್ಮಿನ್ಸ್ ಕಾಫಿ ಬಾರು. ನಮ್ಮ ಮಾವ ಬಟ್ಟೆ ಹೊಲಿಸಿಕೊಳ್ಳಲು ಅವರ ಊರಿಗೇ ಹೋಗ್ಬೇಕು, ಇನ್ನು ಕೆಲವರಿಗೆ ಈಗಲೂ ಯಮಾಹ ಆರ್ ಎಕ್ಸ್ ೧೦೦ ಗಾಡಿನೇ ಓಡಿಸಬೇಕು, ಮತ್ತೊಬ್ಬರಿಗೆ ಈಗಲೂ ಪ್ರೀಮಿಯರ್ ಪದ್ಮಿನಿ ಕಾರೇ ಬೇಕು. ಹೀಗೆ ಹೇಳ್ತಾ ಹೋದರೆ ನಮ್ಮ ನಿಮ್ಮ ಪಟ್ಟಿ ಹನುಮಂತನ ಬಾಲದಷ್ಟು ಬೆಳೆಯುತ್ತಾ ಹೋಗುತ್ತೆ. ಪ್ರತಿಯೊಬ್ಬ ಮನುಷ್ಯನಿಗೂ ಅವನದೇ ಆದ ಒಪ್ಪು ನೆಪ್ಪುಗಳು, ಇಷ್ಟ ಕಷ್ಟಗಳು ತನ್ನ ಪ್ರತಿಯೊಂದು ವಸ್ತುಗಳ ಮೇಲೋ, ತನ್ನ ಆಚರಣೆಯಲ್ಲೋ, ವಿಧಾನಗಳಲ್ಲೋ ತೋರುತ್ತವೆ. ಅದು ಕೆಲವರಿಗೆ ನಿಷ್ಠೆಯಾಗಿರುತ್ತೆ, ಇನ್ನು ಕೆಲವರಿಗೆ ಅಭಿಮಾನವಿರಬಹುದು ಅಥವ ಅಭ್ಯಾಸವೋ, ದುರಭ್ಯಾಸವೋ ಅಂತು ಅದರಲ್ಲೇ ತೃಪ್ತಿಯನ್ನು ಕಂಡುಕೊಳ್ಳುತ್ತಾರೆ. ಅದಕ್ಕೆ ಹೇಳೋದು "ಲೋಕೋ ಭಿನ್ನ ರುಚಿಃ".

ನಾವು ಹಾಕಿಕೊಳ್ಳುವ ಪ್ಯಾಂಟ್, ಶರ್ಟ್, ಸೀರೆ, ಚೂಡಿದಾರ್ ಎಲ್ಲವೂ ಒಳ್ಳೆಯ ಫಿಟ್ಟಿಂಗ್ ಇರಬೇಕು, ಫ್ಯಾಷನಬಲ್ ಆಗಿರಬೇಕು, ಇಂತಹ ಮೆಟಿರಿಯಲ್ಲೇ ಆಗಿರಬೇಕು ಅಷ್ಟೇ ಅಲ್ಲದೆ ಇಂತಹ ಅಂಗಡಿಯಲ್ಲೇ ಹೊಲಿಸಬೇಕು ಅಥವ ಖರೀದಿಸಬೇಕು ಎನ್ನುವುದು ಬಹುತೇಕ ಎಲ್ಲರೂ ರೂಢಿಸಿಕೊಂಡಿರುತ್ತಾರೆ. ಹಾಗೆಯೇ ತಮ್ಮ ಅಭಿರುಚಿಗೆ ತಕ್ಕಂತೆ ಯಾವುದೋ ಒಂದು ಬಟ್ಟೆಯ ವಿನ್ಯಾಸಕ್ಕೋ, ಬಣ್ಣಕ್ಕೋ, ಕಂಪನಿಯ ಬ್ರ್ಯಾಂಡ್ಗೋ ಅಥವ ಟೈಲರಿಗೋ ಹೊಂದಿಕೊಂಡು ಬಿಟ್ಟಿರುತ್ತಾರೆ. ಅಂತಹವರು ತಮ್ಮ ಆ ಚೌಕಟ್ಟಿನಲ್ಲೇ ತಮಗೆ ಬೇಕಾದ ಬಟ್ಟೆಯನ್ನು ಧರಿಸುತ್ತಾರೆ, ಏನೇ ಆದರೂ ಬೇರೆಯದನ್ನು ಪ್ರಯತ್ನಿಸುವುದು ಬಹಳ ವಿರಳ.



ಚಾಮರಾಜಪೇಟೆಯ ಅಲಂಕಾರ್ ಟೈಲರ್ಸ್, ಪುರುಷರ ಬಟ್ಟೆ ಹೊಲಿಯುವ ಬಹಳ ಪ್ರತಿಷ್ಠಿತವಾದ ಅಂಗಡಿ. ಆದರ ಮಾಲಿಕ ಭೂಷಣ್, ನನ್ನ ಆಪ್ತ ಸ್ನೇಹಿತ. ಕಾಲಕ್ಕೆ ತಕ್ಕಂತೆ ಫ್ಯಾಷನ್ ಆಗಿರುವ ಸ್ಟೈಲಿಶ್ ಬಟ್ಟೆಗಳನ್ನು ಹೊಲಿಯುತ್ತಿದ್ದ, ಜೊತೆಗೆ ಬಹಳ ದುಬಾರಿ ಕೂಡ. ಚಾಮರಾಜಪೇಟೆಯಷ್ಟೇ ಅಲ್ಲದೆ ಗಾಂಧಿಬಜಾರು, ಹನುಮಂತನಗರ, ಶ್ರೀನಗರ, ಬನಶಂಕರಿಯಿಂದೆಲ್ಲಾ ಅಷ್ಟೇಕೆ ಪಕ್ಕದ ಚಿಕ್ಕಪೇಟೆ, ಬಳೇಪೇಟೆಯ ಮಾರವಾಡಿ ಜನರೂ ಇವನ ಬಳಿ ಬಟ್ಟೆ ಹೊಲಿಸಿಕೊಳ್ಳಲು ಬರುತ್ತಿದ್ದರು. ಅವನ ಅಂಗಡಿಯಲ್ಲಿ ಹಬ್ಬ ಹರಿದಿನದ ಸೀಜನ್ ಅಂತ ಏನೂ ಇರಲಿಲ್ಲ, ಯಾವಾಗ ನೋಡಿದರೂ ಜನರಿಂದ ತುಂಬಿರುತ್ತಿತ್ತು, ಅಷ್ಟು ಬ್ಯುಸಿಯಾದ ಟೈಲರ್. ಮದುವೆ ಸೂಟ್ ಗಳಿಗಂತೂ ಅವನು ಹೊಲಿಯುವ ಸ್ಟೈಲಿಗೆ ಹೊಂದುವ ಬಟ್ಟೆ ಇರಲೆಂದು ಅವನನ್ನೇ ಕರೆದುಕೊಂಡು ಹೋಗಿ ಬಟ್ಟೆಯನ್ನು ಆರಿಸುತ್ತಿದ್ದುದುಂಟು. ಈ ರೆಡಿಮೇಡ್ ಪ್ಯಾಂಟ್, ಶರ್ಟ್ ಮಾರುವ ಅಂಗಡಿಗಳು, ಕಂಪನಿಗಳು ಬಂದ ಮೇಲೆ ಪ್ಯಾಂಟ್, ಶರ್ಟ್ ಅಳತೆ ಕೊಟ್ಟು ಹೊಲಿಸಿಕೊಳ್ಳುವವರು ಕಡಿಮೆಯಾಗಿದ್ದರು. ನಾವುಗಳು ಎಷ್ಟೋ ಸಲ ಮಾತಿನ ಮಧ್ಯದಲ್ಲಿ ಈ ರೆಡಿಮೇಡ್ ಕಂಪನಿಗಳು ಬಂದ ಮೇಲೆ ನಿನ್ನ ವ್ಯಾಪಾರ ಏನಾದರು ಕಡಿಮೆಯಗಿದೆಯಾ ಅಂತ ಕೇಳಿದ್ದೆವು. ಅದಕ್ಕೆ ಅವನು " ಸ್ವಲ್ಪ ತಲೆಯೆತ್ತಿ ಸುತ್ತಲೂ ನೋಡು" ಅಂತ ಹೇಳ್ತಿದ್ದ, ಯಾಕೆಂದ್ರೆ ಟೈಲರ್ ಅಂಗಡಿಗಳಲ್ಲಿ ತಾವು ಹೊಲಿದ ಪ್ಯಾಂಟ್, ಶರ್ಟ್ ಗಳನ್ನು ಅಂಗಡಿಯ ಗೋಡೆಯ ಸುತ್ತ ನೇತು ಹಾಕಿರುತ್ತಾರೆ, ಅದರಲ್ಲೇ ಗೊತ್ತಾಗಿ ಹೋಗತ್ತೆ ಟೈಲರ್ ಎಷ್ಟು ಬಿಜಿ ಇದಾನೆ ಅಂತ. ರೆಡಿಮೇಡ್ ಕಂಪನಿಗಳು ಬಂದ ಮೇಲೂ ಅವನ ಅಂಗಡಿಯ ಗೋಡೆಗಳು ಯಾವಾಗಲೂ ತುಂಬಿರುತ್ತಿದ್ದವು. "ರೆಡಿಮೇಡ್ ಕಂಪನಿಗಳು ಎಷ್ಟೇ ಬರಲಿ ನನ್ನ ಹತ್ತಿರ ಬರುವ ಬಹುತೇಕ ಜನರು ಈಗಲೂ ಬಂದು ಇಲ್ಲೇ ಹೊಲಿಸಿಕೊಳ್ಳುತ್ತಾರೆ. ಒಂದೋ ಎರಡೋ ಕಡಿಮೆ ಹೊಲಿಸಿಕೊಳ್ಳಬಹುದು, ಆದರೆ ಬರುವುದನ್ನು ಬಿಟ್ಟಿಲ್ಲ, ಅದು ಹಾಗಿರಲಿ ನನ್ನ ಎಷ್ಟೋ ಸ್ನೇಹಿತರು, ಪರಿಚಯಸ್ಥರು ಅಮೆರಿಕ, ಆಸ್ಟ್ರೇಲಿಯ, ಲಂಡನ್ ಇನ್ನು ಎಲ್ಲೆಲ್ಲೋ ಇದ್ದಾರೆ, ನನ್ನ ಹಳೆಯ ಕಸ್ಟಮರ್ ಗಳು. ಆ ಊರುಗಳಲ್ಲಿ ಸಿಗುವ ಬಟ್ಟೆಗಳ ಮುಂದೆ ನಾನು ಹೊಲಿದು ಕೊಡುವ ಬಟ್ಟೆ ಏನು ಮಹಾ,ಆದರೂ ಬೆಂಗಳೂರಿಗೆ ಬಂದಾಗ ನನ್ನ ಅಂಗಡಿಗೆ ಬಂದು ಕಾಫಿ ಗೀಫಿ ಕುಡಿದು ಮೂರೋ ನಾಲ್ಕು ಜೊತೆ ಬಟ್ಟೆ ಹೊಲಿಸಿಕೊಂಡು ಹೋಗ್ತಾರೆ. ಅವರಿಗೆ ಬೇರೆ ಕಡೆ ಚೆನ್ನಾಗಿಲ್ಲ, ಇಲ್ಲಿ ಚೆನ್ನಾಗಿದೆ ಅಂತಲ್ಲ, ಅವರಿಗೆ ನಾನೇ ಹೊಲಿದುಕೊಡಬೇಕು. ಇಲ್ಲಿ ಬರುವುದು ಬಟ್ಟೆ ಹೊಲಿಸಿಕೊಳ್ಳುವದಕ್ಕಿಂತ ಹೆಚ್ಚಾಗಿ ಅಭಿಮಾನ, ಪ್ರೀತಿಗಾಗಿ" ಅಂತ ಹೇಳಿದ್ದ.

ಈ ಬಟ್ಟೆ ಹೊಲಿಸುವ ವಿಚಾರದಲ್ಲಿ ಅಭಿಮಾನ, ಪ್ರೀತಿ ತೋರಿಸೋ ವಿಚಾರ ಬಂದಾಗ ನನ್ನ ಹೆಂಡತಿ ಒಮ್ಮೆ ಹೇಳಿದ್ದ ನಮ್ಮ ಮಾವನವರ ಮದುವೆಯ ತಯಾರಿ ಸಮಯದ ಒಂದು ಪ್ರಸಂಗ ಜ್ಞಾಪಕಕ್ಕೆ ಬರುತ್ತೆ. ನಮ್ಮ ಮಾವ ಹುಟ್ಟಿ ಬೆಳೆದದ್ದು ಬಳ್ಳಾರಿ ಜಿಲ್ಲೆಯ ಗಂಗಾವತಿ ತಾಲ್ಲೂಕು. ನಮ್ಮ ಅತ್ತೆ ಮನೆಯವರು ಹೈದರಾಬಾದಿನವರು. ನಮ್ಮ ಮಾವನವರ ಮದುವೆ ವರೋಪಚಾರದ ವಿಷಯ ಮಾತಾಡಲು ನಮ್ಮ ಅತ್ತೆಯ ಮನೆ ಕಡೆಯವರು ಗಂಗಾವತಿಗೆ ಬಂದಿದ್ದರಂತೆ. ಸೂಟುಬೂಟಿನ ವಿಚಾರ ಬಂದಾಗ ಅವರ ಮನೆಯವರು ನಿಮಗೆ ಹೈದರಾಬಾದಿನಿಂದ ಸೂಟು ಹೊಲಿಸಿ ಕೊಡ್ತೇವೆ, ಈ ಗಂಗಾವತಿಯಲ್ಲಿ ನಿಮಗ್ಯಾರು ಸೂಟು ಹೊಲಿದು ಕೊಟ್ತಾರೆ ಅಂದಿದ್ರಂತೆ. ಅದಕ್ಕೆ ನಮ್ಮ ಮಾವನವರು ಇಲ್ಲಿ ನನ್ನ ಪರಿಚಯದವ ಬಾಂಬೆ ರಿಟರ್ನ್ಡ್ ಟೈಲರ್ ಇದ್ದಾನೆ, ಅವನ ಹತ್ತಿರನೇ ಹೊಲಿಸಿ ಕೊಳ್ತೇನೆ ಅಂತ ಹೇಳಿದ್ರು. ಅವನು ಎಸ್ಸೆಸ್ಸೆಲ್ಸಿ ಫೇಲಾಗಿ ಮನೆ ಬಿಟ್ಟು ಬಾಂಬೆಗೆ ಓಡಿಹೋಗಿ ಕೆಲವು ವರ್ಷಗಳಿದ್ದು ಚೆನ್ನಾಗಿ ಟೈಲರಿಂಗ್ ಕಲಿತು ಮತ್ತೆ ಗಂಗಾವತಿಗೆ ಬಂದು ಟೈಲರ್ ಅಂಗಡಿ ತೆರೆದಿದ್ದ. ಅವನಲ್ಲೇ ತಮ್ಮ ಮದುವೆ ಸೂಟ್ ಹೊಲಿಸಿದ್ದು, ಅವರಿಗೆ ಹೈದ್ರಾಬಾದ್ ಸೂಟು ಬೇಕಾಗಿರಲಿಲ್ಲ. ಈಗ ಅವರ ಮಗ ಬಸ್ಯ ಅಂಗಡಿ ನಡೆಸುತ್ತಾನೆ. ಈಗಲೂ ಬಸ್ಯನೆ ಇವರ ಟೈಲರ್. ತಮ್ಮ ಎಲ್ಲಾ ಬಟ್ಟೆಗಳನ್ನು ಹೊಲಿಯಲು ಬಸ್ಯನೇ ಆಗ್ಬೇಕು. ಬೆಂಗಳೂರಿಂದ ಗಂಗಾವತಿಗೆ ಬಟ್ಟೆ ಹೊಲಿಸಿಕೊಳ್ಳುವ ಸಲುವಾಗೇ ಹೋಗ್ತಾರೆ. ಬೆಂಗಳೂರಿನಲ್ಲಿ ಯಾರೂ ಹೊಲಿಯುವುದಿಲ್ಲ ಅಂತಲ್ಲ, ಆ ಊರು, ಅಂಗಡಿಯೊಂದಿಗಿದ್ದ ನಂಟಷ್ಟೆ.

ತಾವು ಧರಿಸುವ ಬಟ್ಟೆಗಳಲ್ಲಿ ತೋರುವ ಭಿನ್ನತೆ, ಕಾಳಜಿಯನ್ನು ತಮ್ಮ ಕೇಶ ವಿನ್ಯಾಸ, ಕೇಶ ಶೃಂಗಾರದಲ್ಲೂ ತೋರಿಸುತ್ತಾರೆ. ಈ ವಿಷಯದಲ್ಲಿ ಹೆಂಗಸರನ್ನು ಕೇಳುವುದೇ ಬೇಡ. ಒಬ್ಬೊಬ್ಬರ ಕೇಶ ವಿನ್ಯಾಸದ ರೀತಿಯೂ ಬೇರೆ ಬೇರೆ, ಅದರ ಜೊತೆಗೆ ಅವರದೇ ಕೇಶ ವಿನ್ಯಾಸ ಸಂದರ್ಭಕ್ಕೆ ತಕ್ಕಂತೆ ಬೇರೆ ಬೇರೆ ರೂಪ ತಾಳುತ್ತದೆ. ಇದಕ್ಕೆ ತದ್ವಿರುದ್ಧ ಎನ್ನುವಂತೆ ಕೆಲವು ಮಧ್ಯ ವಯಸ್ಸಿನ ಹೆಂಗಸರು ತಾವು ಎಪ್ಪತ್ತರ ಎಂಬತ್ತರ ದಶಕದಲ್ಲಿ ಇಟ್ಟುಕೊಂಡಿದ್ದ ತಮ್ಮ ಇಷ್ಟವಾದ ಸಿನೆಮಾ ತಾರೆಯ ಕೇಶ ವಿನ್ಯಾಸವನ್ನು ಈಗಲೂ ಅದನ್ನೇ ಉಳಿಸಿಕೊಂಡಿರುತ್ತಾರೆ. ಹೊಸತರಹದ ಯಾವುದೇ ಕೇಶ ವಿನ್ಯಾಸ ಅವರಿಗೆ ಸರಿ ಬರುವುದಿಲ್ಲ. ಅವರನ್ನು ನೋಡಿದ ತಕ್ಷಣ ಇದು ಕಲ್ಪನ, ಮಂಜುಳ, ಆರತಿ, ಹೇಮಾ ಚೌಧರಿ ಅಥವ ಆಗಿನ ಕಾಲದ ಇನ್ಯಾವುದೋ ಸಿನೆಮಾ ತಾರೆಯ ಕೇಶ ವಿನ್ಯಾಸದ ಮಾದರಿಯೆಂದು ಊಹಿಸಬಹುದು. ಈ ವಿಷಯದಲ್ಲಿ ಗಂಡಸರ ಕೇಶ ವಿನ್ಯಾಸ ಸ್ವಲ್ಪ ಸರಳವೇ, ಒಂದು ಸಲ ಹೇರ್ ಕಟಿಂಗ್ ಮಾಡಿಸಿಕೊಂಡು ಬಂದರೆ ಆಗೋಯ್ತು, ಮುಂದೆ ಒಂದೋ ಎರಡು ತಿಂಗಳು ಕಳೆದು ಕಟಿಂಗ್ ಮಾಡಿಸಿಕೊಳ್ಳುವ ತನಕ ಅದೇ ಸ್ಟೈಲೆ, ಅಬ್ಬಬ್ಬ ಅಂದ್ರೆ ಸ್ಟೈಲಿಂಗ್ ಜೆಲ್ ಹಾಕಿ ಸ್ವಲ್ಪ ವಿನ್ಯಾಸ ಮಾಡಿಕೊಳ್ಳಬಹುದೇನೋ ಅಷ್ಟೆ. ಇನ್ನು ಹೇರ್ ಕಟಿಂಗ್ ಮಾಡಿಸಿಕೊಳ್ಳುವುದು ಇದೆಯಲ್ಲ ಅದರಲ್ಲಂತೂ ಒಬ್ಬೊಬ್ಬರ ರೀತಿ ಒಂದು ತರಹ. ಕೆಲವರಿಗೆ ತಮ್ಮ ಮೆಚ್ಚಿನ ಹೇರ್ ಸಲೂನೇ ಆಗ್ಬೇಕು, ಇನ್ನು ಕೆಲವರಿಗೆ ಆ ಸಲೂನಿನಲ್ಲಿ ತಮ್ಮ ಇಷ್ಟದ ಸ್ಟೈಲಿಸ್ಟೇ ಕಟಿಂಗ್ ಮಾಡಬೇಕು ಅದಕ್ಕಾಗಿ ಎಷ್ಟು ಹೊತ್ತಾದರೂ ಕಾಯುತ್ತಾರೆ. ಯಾವುದೋ ಸಲೂನಿನಲ್ಲಿ ವಿಧವಿಧವಾದ ಪತ್ರಿಕೆಗಳಿರುತ್ತವೆ ಅಂತ ಅಲ್ಲಿಗೇ ಹೋಗುವವರಿದ್ದಾರೆ. ಟಿವಿ ಹಾಕೋ ಸಲೂನಿಗೇ ಹೋಗುವವರು, ಫ್ರೀ ವೈಫೈ ಸಿಗುವ ಸಲೂನಿಗೇ ಹೋಗುವವರು, ಸಲೂನ್ ಒಳಗೆ ಸಿಗರೇಟ್ ಸೇದಲು ಬಿಟ್ಟರೆ ಅಲ್ಲೇ ಹೋಗುವ ಕೆಲವರು, ಹೀಗೆ ನಾನಾ ತರಹದ ಒಲವುಗಳನ್ನು ತೋರುತ್ತಾರೆ. ಇಂತಹ ವಿಚಾರಗಳಲ್ಲಿ ನಮ್ಮಜ್ಜಿಯೇನು ಕಡಿಮೆ ಇರಲಿಲ್ಲ. ನಮ್ಮಜ್ಜಿ ಮಡಿಹೆಂಗಸು.ಒಂದೋ ಎರಡು ತಿಂಗಳಿಗೊಮ್ಮೆ ಮನೆಯೆದುರುಗಿದ್ದ ಕ್ಷೌರದ ಅಂಗಡಿಯಿಂದ ಯಾರಾದರು

(ಮುಂದಿನ ಪುಟಕ್ಕೆ....)


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## ಲೋಕೋ ಭಿನ್ನರುಚಿಃ

(.. ಹಿಂದಿನ ಪುಟದಿಂದ)

ಮನೆಗೇ ಬಂದು ತಲೆಕೂದಲನ್ನು ಪೂರ್ತಿ ತೆಗೆದು ಹೋಗುತ್ತಿದ್ದರು. ತಲೆಕೂದಲು ಪೂರ್ತಿ ತೆಗೆಯಲು ಎಂತಹ ಕ್ಷೌರಿಕನಾದರೇನು, ಚಾಕು ಹಾಕಿ ತಲೆಯ ಮೇಲಿನಿಂದ ಹಿಂದಿನವರೆಗೆ ಎರಡು ಸಲ ಚಾಕು ಆಡಿಸಿದರೆ ಸಾಕು, ಕೆಲಸ ಆಯ್ತು ಅಂತ. ಆದರೆ ನಮ್ಮಜ್ಜಿಗೆ ಹಾಗಲ್ಲ, ಅವರ ನೆಚ್ಚಿನ ಕ್ಷೌರಿಕನೇ ಬರಬೇಕು. ಯಾವುದೋ ಕಾರಣಕ್ಕೆ ಅವನು ಒಂದು ವಾರನೋ, ಎರಡು ವಾರನೋ ರಜೆಗೆ ಹೋದ್ರೆ, ಅವನು ಬರೋ ತನಕ ಕ್ಷೌರವೇ ಇಲ್ಲ. ಇಬ್ಬರಿಗೂ ಮಾತು ಜಾಸ್ತಿ, ಕ್ಷೌರಕ್ಕಿಂತ ಮಾತೇ ಜಾಸ್ತಿಯಾಗುತ್ತಿತ್ತು. ಒಬ್ಬೊಬ್ಬರದೂ ಅವರದೇ ಆದ ರೀತಿ, ಅಭಿರುಚಿ, ಒಲವು.

ಉಡಿಗೆ ತೊಡಿಗೆಗಳಲ್ಲಿ ಜನರು ತೋರುವ ಭಿನ್ನತೆ, ಒಲವು ಅವರುಗಳ ಅಹಾರ ಪದ್ಧತಿ, ತಿನ್ನುವ, ಕುಡಿಯುವ ಪದಾರ್ಥಗಳಲ್ಲೂ, ಅವುಗಳನ್ನು ತರುವ, ಸೇವಿಸುವ ಜಾಗ ಹೀಗೆ ಎಲ್ಲದರಲ್ಲೂ ತಮ್ಮದೇ ಆದ ವಿಶಿಷ್ಠತೆಯನ್ನು ಹೊಂದಿರುತ್ತಾರೆ. ನಾನು ಚಿಕ್ಕವಯಸ್ಸಿನವನಾಗಿದ್ದಾಗ ಹಾಲನ್ನು ಮನೆ ಹತ್ತಿರದ ಡೈರಿಯಲ್ಲಿ ಹಾಕಿಸಿಕೊಳ್ಳುವುದೇ ವಾಡಿಕೆ. ಬೀದಿಗೆ ಒಂದೊ ಎರಡೊ ಡೈರಿಗಳು ಇರುತ್ತಿದ್ದವು. ಬೆಂಗಳೂರು ಡೈರಿಯ ಬಾಟಲಿ ಹಾಲನ್ನು ನಮ್ಮ ಏರಿಯಾದಲ್ಲಿ ಬಳಸುತ್ತಿದ್ದುದು ಬಹಳ ಕಡಿಮೆ. ಡೈರಿಯ ಮಾಲಿಕ ಎಂಟೋ ಹತ್ತೋ ಹಸು ಇಟ್ಟಿರುತ್ತಿದ್ದ, ಜೊತೆಗೆ ಒಂದೆರೆಡು ಹಸು ಸಾಕಿದ್ದ ಸುತ್ತಮುತ್ತಲಿನ ಜನ ತಮ್ಮ ಹಸುಗಳನ್ನು ಡೈರಿಗೆ ಬಿಡುತ್ತಿದ್ದರು. ಬೆಳಿಗ್ಗೆ ಆರಕ್ಕೆ ಡೈರಿ ತೆಗೆದರೆ ಬೆಳಿಗ್ಗೆಗೆ ಮಾತ್ರ ಹಾಲು ಕರೆಯಲು ಬರುವ ಹಸುಗಳಿರುತ್ತಿದ್ದವು. ಅಲ್ಲಿ ಬರುವ ಜನರಿಗೆ ಒಬ್ಬೊಬ್ಬರಿಗೊಂದು ಹಸುವಿನ ಹಾಲು ಪ್ರಿಯ. ತಮ್ಮ ಪ್ರಿಯವಾದ ಹಸುವಿನ ಹಾಲನ್ನು ಕರೆಯುವುದನ್ನೇ ನೋಡುತ್ತಾ ನಿಲ್ಲುತ್ತಾರೆ. ಬಕೆಟ್ ಭರ್ತಿಯಾಗಿ ಹಾಲನ್ನು ಡೈರಿಯೊಳಗೆ ತಂದದ್ದೇ ತಡ ಒಬ್ಬರ ಮೇಲೊಬ್ಬರು ನಾ ಮುಂದು ತಾ ಮುಂದು ಅಂತ ಹಾಲನ್ನು ಹಾಕಿಸಿಕೊಂಡು ಅಮೃತ ಸಿಕ್ಕಷ್ಟು ಖುಷಿ ಪಡುತ್ತಿದ್ದರು. ಒಂದೊಂದು ಸಲ ಅವರ ಪ್ರಿಯವಾದ ಹಸು ಡೈರಿಯ ಪಕ್ಕದಲ್ಲಿ ಕಟ್ಟಿಲ್ಲದಿದ್ದರೆ ಅವರ ಆತಂಕ ನೋಡಬೇಕು, ತಮ್ಮ ಪ್ರಿಯವಾದ ಹಸುವಿನ ಹೆಸರನ್ನಿಡಿದು ಮಾಲೀಕನ ಹತ್ತಿರ ಆ ಹಸು ಬರತ್ತೊ ಇಲ್ವೊ ಅಂತ ಕೇಳ್ತಾರೆ, ಬರಲ್ಲ ಅಂತ ಗೊತ್ತಾದರೆ ಅವರ ಮುಖ ನೋಡಬೇಕು ಬೇರೆ ಹಸುವಿನ ಹಾಲು ಹಾಲೇ ಅಲ್ವೇನೊ ಈಗ ಏನು ಕುಡಿಯುವುದು ಅನ್ನುವಷ್ಟು ಯೋಚನೆ. ನಾವು ಡೈರಿಗೆ ಹಾಲು ತರಲು ಹೋದಾಗಲೂ ಕೂಡ ಇಂತಹ ಹಸುವಿನ ಹಾಲನ್ನೇ ತರಬೇಕೆಂಬುವ ಸೂಚನೆ ನಮ್ಮಮ್ಮನಿಂದ ಬರ್ತಿತ್ತು. ನಾವೂ ಕೂಡ ಕಾದು ಅದೇ ಹಸುವಿನ ಹಾಲನ್ನೇ ಹಾಕಿಸಿಕೊಡು ಬರ್ತಾ ಇದ್ವಿ. ಎಲ್ಲಾ ಹಸುವಿನ ಹಾಲು ಸುಮಾರು ಒಂದೇ ತರಹ ಇರುತ್ತೆ. ಒಂದೊಂದು ಸ್ವಲ್ಪ ನೀರೋ ಅಥವ ಸ್ವಲ್ಪ ವಾಸನೆನೋ ಇರತ್ತೆ. ಕುಡಿಯಕ್ಕೇ ಆಗಲ್ಲಪ್ಪ ಅನ್ನೋ ಹಂಗೇನು ಇರುತ್ತಿರಲಿಲ್ಲ, ಆದರೂ ಎಲ್ಲರಿಗೂ ಅವರವರ ಇಷ್ಟದ ಹಸುವಿನ ಹಾಲೇ ಬೇಕು, ಅದರಲ್ಲೇ ತೃಪ್ತಿ.

ಬೆಂಗಳೂರಿನಿಂದ ಹಿಡಿದು ಎಲ್ಲಾ ದೊಡ್ಡ ನಗರಗಳಲ್ಲಿ ಜನರು ಈಗ ತಮ್ಮ ದಿನ ನಿತ್ಯದ ದಿನಸಿ ಪದಾರ್ಥಗಳನ್ನು, ತರಕಾರಿ, ಹಣ್ಣುಗಳನ್ನು ಹೆಚ್ಚಾಗಿ ಖರೀದಿಸುವುದು ದೊಡ್ಡ ದೊಡ್ಡ ದಿನಸಿ ಮಳಿಗೆಗಳಲ್ಲಿ. ದಿನಸಿ ಪದಾರ್ಥಗಳು, ತರಕಾರಿ, ಹಣ್ಣುಗಳಿಂದ ಹಿಡಿದು ಸ್ಟೀಲ್ ಪಾತ್ರೆ, ಪ್ಲಾಸ್ಟಿಕ್ ಸಾಮಾನುಗಳು, ಆಟದ ಸಾಮಾನುಗಳು, ಗೃಹೋಪಯೋಗಿ ವಸ್ತುಗಳು ಜೊತೆಗೆ ಕೆಲವು ಅಂಗಡಿಗಳಲ್ಲಿ ಬಟ್ಟೆಯೂ ಸಿಗುತ್ತದೆ. ಇಂತಹ ಮಳಿಗೆಗಳಲ್ಲಿ ಸಿಗದಿರುವ ಪದಾರ್ಥವೇ ಇಲ್ಲ, ಹೇಳ್ಬೇಕು ಅಂದ್ರೆ ಒಳಕ್ಕೆ ಹೋದ್ರೆ ಒಂದು ರೀತಿಯಲ್ಲಿ ಒನ್ ಸ್ಟಾಪ್ ಶಾಪ್. ಇಂತಹ ಮಳಿಗೆಗಳಲ್ಲಿ ಖರೀದಿಸುವುದೇ ಒಂದು ಖುಷಿ ಜನಕ್ಕೆ. ಕಾರ್ಟ್ ಗಳನ್ನು ತಳ್ಳಿಕೊಂಡು ತಮಗೆ ಬೇಕಾದ ಪದಾರ್ಥಗಳ ಲೇನಿಗೆ ಹೋಗಿ ಸಾಮಾನುಗಳನ್ನು ಹಾಕಿಕೊಳ್ಳುವುದನ್ನು ನೋಡಬೇಕು, ನಾಳೆಯಿಂದ ಸಾಮಾನುಗಳು ಸಿಗಲ್ವೇನೋ ತರಹ ವರ್ತಿಸುತ್ತಿರುತ್ತಾರೆ. ಇಂತಹ ಮಳಿಗೆಗಳಲ್ಲಿ ಖರೀದಿಸಿ ಸಮಯ ಕಳೆಯುವುದು ಒಂದು ರೀತಿಯ ಪ್ರತಿಷ್ಟೆಯಾಗಿದೆ. ಗೆಳೆಯರೋ, ಪರಿಚಯದವರ ಜೊತೆಗೆ ಮಾತಿಗೆ ಬಂದಾಗ ನಾವು ದಿನಸಿ, ತರಕಾರಿ ಇಂತಹ ಮಳಿಗೆಯಲ್ಲೇ ಖರೀದಿಸುವುದು,ಮನೆ ಹತ್ತಿರದ ಶೆಟ್ಟಿ ಅಂಗಡಿ ಬಿಟ್ಟು ಎಷ್ಟೋ ವರ್ಷ ಆಯ್ತು ಅಂತ ಏನೋ ದೊಡ್ಡ ಸಾಧನೆ ಮಾಡಿದವರಂತೆ ಬೀಗುತ್ತಾರೆ. ಹಿಂದೆಲ್ಲಾ ಮನೆ ಹತ್ತಿರದಲ್ಲಿ ಸುಮಾರು ದಿನಸಿ ಅಂಗಡಿಗಳಿರುತ್ತಿತ್ತು. ಪರಿಚಯದ ಒಂದು ಅಂಗಡಿಯಲ್ಲಿ ವರ್ತನೆ, ಜೊತೆಗೆ ಪುಟ್ ಪಾತಿನ ತರಕಾರಿ, ಹಣ್ಣಿನಂಗಡಿಯಲ್ಲೋ ಅಥವ ಮನೆಯ ಮುಂದೆ ಬರುವ ತಳ್ಳೋ ಗಾಡಿಯವನ ಹತ್ತಿರ ತರಕಾರಿ, ಹಣ್ಣು ಖರೀದಿಯಾಗಿ ಹೋಗ್ತಿತ್ತು. ನಮ್ಮ ತಾತನ ಕಾಲದಿಂದಲೂ ನಮ್ಮ ಮನೆಯಲ್ಲಿ ದಿನಸಿಯನ್ನು ಅವರ ಸ್ನೇಹಿತರಾದ ಗೋಪಾಲಯ್ಯ ಹಾಗು ನಂಜುಂಡಯ್ಯನವರ ಅಂಗಡಿಗಳಿಂದಲೇ ತರುತ್ತಿತ್ತು. ನಮ್ಮ ತಾತನವರಿಗೆ ಇಬ್ಬರೂ ಬಹಳ ಆಪ್ತರು, ಹಾಗಾಗಿ ಇಬ್ಬರ ಅಂಗಡಿಯಿಂದಲೂ ಸಮವಾಗಿ ಪದಾರ್ಥಗಳನ್ನು ತರುತ್ತಿದ್ದೆವು. ಗೋಪಾಲಯ್ಯನವರು ತೀರಿಕೊಂಡು ಅವರ ಅಂಗಡಿ ಮುಚ್ಚಿದ ಮೇಲೆ ನಮ್ಮ ಮನೆಯ ಎಲ್ಲಾ ದಿನಸಿಗಳು ನಂಜುಂಡಯ್ಯನವರ ಅಂಗಡಿಯಿಂದಲೇ. ಅವರದು ಬಹಳ ಸಾಧಾರಣ ಅಂಗಡಿ. ಸುತ್ತಮುತ್ತಲಿನ ಅಂಗಡಿಗಳಲ್ಲಿ ಕಳಪೆಯೆಂದರೆ ಅದೆ, ಪಧಾರ್ಥಗಳು ಕಳಪೆಯಿರುತ್ತಿರಲಿಲ್ಲ. ಕಣ್ಣಿಗೆ ಕಾಣಿಸದ, ಬಣ್ಣವೇ ಕಾಣದ ನಾಮಫಲಕ. ಅವರ ಅಂದಾಜಿನ ಪ್ರಕಾರ ತಿಂಗಳಿಗೆ ಎಷ್ಟು ವ್ಯಾಪಾರ ಆಗುತ್ತದೋ ಅಷ್ಟೇ ಪದಾರ್ಥಗಳು ಇಟ್ಟಿರುತ್ತಿದ್ದರು. ಅವರು ಸ್ಟಾಕಿನಲ್ಲಿಟ್ಟ ಸೋಪು, ಪೇಸ್ಟು, ಟೂತ್ ಬ್ರಷ್ಷುಗಳನ್ನೇ ಖರೀದಿಸಬೇಕು. ಮಾರ್ಕೆಟ್ಟಿನಲ್ಲಿ ಹೊಸದಾಗಿ ಬಂದ ಸೋಪೋ, ಪೇಸ್ಟು, ಟೂತ್ ಬ್ರಷ್ಷುಗಳನ್ನು ಕೇಳಿದರೆ ಇರುತ್ತಿರಲಿಲ್ಲ. ಮುಂದಿನ ಸಲ ಮಂಡಿಗೆ ಹೋದಾಗ ನಮಗೋಸ್ಕರ ತರುತ್ತಿದ್ದರು. ನಮ್ಮಪ್ಪನಿಗೆ ಸುಮಾರು ಸಲ ಹೇಳ್ತಿದ್ವಿ, ಈ ನಂಜುಂಡಯ್ಯನ ಅಂಗಡಿ ಬಿಟ್ಟು ನಮ್ಮ ಮನೆಯ ಹತ್ತಿರ ಬೇರೆ ಎಷ್ಟೋ ಒಳ್ಳೆಯ ಅಂಗಡಿಗಳಿವೆ, ಅಲ್ಲೇ ಯಾವುದಾದರೂ ಒಳ್ಳೆ ಅಂಗಡಿಯಲ್ಲಿ ಸಾಮಾನು ತರೋಣ ಅಂತ, ಅದಕ್ಕೆ ಅವರು ಅದು ಹೇಗಾಗುತ್ತೆ “ನಿಮ್ಮ ತಾತನ ಕಾಲದಿಂದಲೂ ಪರಿಚಯ, ಇಷ್ಟು ವರ್ಷ ಅಲ್ಲಿಂದನೇ ಖರೀದಿ ಮಾಡ್ತಾ ಇರೋದು ಬದಲಾಯಿಸುವುದು ಬೇಕಾಗಿಲ್ಲ “ ಅಂದಿದ್ರು. ಅವರ ಹತ್ತಿರ ಬರುತ್ತಿದ್ದ ಗಿರಾಕಿಗಳೆಲ್ಲ ನಮ್ಮಂತಹವರೇ, ತಾತನ ಕಾಲದಿಂದ ಬಂದವರು. ಕಾಲಕ್ರಮೇಣ ಅವರ ಅಂಗಡಿಯ ಕಪ್ಪಿಟ್ಟು ಹೋಗಿದ್ದ ಎಣ್ಣೆಯ ಡಬ್ಬಿಗಳು, ಹರಕಲು-ಮುರುಕಲು ಶೆಲ್ಫಿನಲ್ಲಿ ಜೋಡಿಸಿಟ್ಟ ಕೆಲವೇ ಕೆಲವು ಸಾಮಾನುಗಳು, ತುಕ್ಕು ಹಿಡಿದ ಕಬ್ಬಿಣದ ಕಂಬಿಯ ಮೇಲೆ ತೂಗಿ ಹಾಕಿರುತ್ತಿದ್ದ ಶ್ಯಾಂಪು ಸ್ಯಾಚೆಗಳು, ಟೀಪುಡಿ ಸ್ಯಾಚೆಗಳು ಹಾಗು ಸ್ಪೆಷಲ್ ಆರ್ಡರ್ ಕೊಟ್ಟು ಸಾಮಾನು ತರಿಸಿಕೊಳ್ಳಬೇಕಾದ ಪರಿಸ್ಥಿತಿಗೆ ಒಗ್ಗಿ ಹೋಗಿದ್ದೆವು. ಮೊದಮೊದಲು ಬೇಜಾರುಪಟ್ಟಿಕೊಂಡೇ ಹೋಗುತ್ತಿದ್ದು ನಂತರದ ದಿನಗಳಲ್ಲಿ ಬೇರೆಲ್ಲೂ ಖರೀದಿಸದೆ ಅಲ್ಲೇ ಖರೀದಿಸುವಷ್ಟು ಅಭಿಮಾನ ಬೆಳೆದಿತ್ತು. ನಮ್ಮ ಮನೆಯ ಹತ್ತಿರದಲ್ಲಿ ಎಷ್ಟೇ ದೊಡ್ಡ ದಿನಸಿ ಮಳಿಗೆಗಳು ಬಂದಿದ್ದರೂ ಸಹಿತ ನಂಜುಂಡಯ್ಯನವರ ಅಂಗಡಿ ಇರುವವರೆಗೂ ದಿನಸಿ ಸಾಮಾನುಗಳು ಅಲ್ಲಿಂದಲೇ ಬರುತ್ತಿತ್ತು. ನಮ್ಮ ತಾತನ ಕಾಲದಿಂದ ಹಿಡಿದರೆ ಸುಮಾರು ಅರವತ್ತು ವರ್ಷದ ನಂಟು, ಅಭಿಮಾನ.

ಈ ನಂಟು, ಒಲವು, ಅಭಿಮಾನಗಳು ದಿನಸಿ ಪದಾರ್ಥ, ತರಕಾರಿ, ಹಣ್ಣು ಖರೀದಿಸುವ ಅಂಗಡಿಗಳಿಗಷ್ಟೇ ಅಲ್ಲ, ತಾವು ಹೋಗುವ ಹೋಟೆಲ್ಲುಗಳ ಮೇಲೂ ಏನೋ ಒಂದು ತರಹದ ನಂಟು ಬೆಳೆಸಿಕೊಂಡಿರುತ್ತಾರೆ. ಹೋಟೆಲ್ಲಿಗೆ ಹೋಗಿ ತಿಂಡಿ ಕಾಫಿ ತಿನ್ನೋದರಲ್ಲಿ ಒಬ್ಬೊಬ್ಬರದು ಒಂದೊಂದು ರೀತಿ. ನಾನು ಹುಟ್ಟಿ ಬೆಳೆದದ್ದು ಚಾಮರಾಜಪೇಟೆ, ಗಾಂಧಿಬಜಾರು. ಅಲ್ಲಿ ರುಚಿಕರವಾದ ತಿಂಡಿ ಕಾಫಿ ಮಾಡುವ ಹೋಟೆಲ್ಲುಗಳಿಗೇನು ಬರವಿಲ್ಲ.ಒಂದೊಂದು ಹೋಟೆಲ್ಲೂ ಒಂದು ತರಹದ ತಿಂಡಿಗೆ ಹೆಸರುವಾಸಿ. ಜನರೂ ಕೂಡ ಇಂತಹುದೇ ಹೋಟೆಲಿನಲ್ಲಿ ಇದೇ ತಿಂಡಿ ತಿನ್ನಬೇಕು ಅನ್ನೋ ಅಭ್ಯಾಸ ಬೆಳೆಸಿಕೊಂಡಿರುತ್ತಾರೆ. ಅವರಿಗೆ ಬೇರೆ ಕಡೆ ತಿಂದರೆ ರುಚಿಸುವುದಿಲ್ಲ, ಹಾಗಂತ ಬೇರೆ ಹೋಟೆಲ್ಲುಗಳಲ್ಲಿ ರುಚಿಯಿರುವುದಿಲ್ಲ ಅಂತಲ್ಲ, ಎಷ್ಟೋ ವರ್ಷಗಳಿಂದ ರೂಢಿಸಿಕೊಂಡು ಬಂದು ಬೇರೆ ಕಡೆ ಅದಕ್ಕಿಂತ ರುಚಿಯಿದ್ದರೂ ಅವರ ಮೆಚ್ಚಿನ ಹೋಟೆಲ್ಲಿಗೆ ಹೋದರೇನೆ ತೃಪ್ತಿ.ನನ್ನ ಸ್ನೇಹಿತನೊಬ್ಬ ಪ್ರತಿದಿನ ಲಾಲ್ ಬಾಗಿಗೆ ವಾಕಿಂಗ್ ಹೋಗ್ತಾನೆ. ವಾಕಿಂಗ್ ಮುಗಿಸಿ ಅವನಿಗೆ ದ್ವಾರಕ ಹೋಟೆಲ್ ಖಾಲಿದೋಸೆನೆ ಆಗ್ಬೇಕು. ಎದುರುಗಡೆ ಇರೋ ಕಾಮತ್ ಹೋಟೆಲಲ್ಲಿ ಒಳ್ಳೆ ಖಾಲಿದೋಸೆ ಕೊಟ್ಟರೂ ಅವನು ಹೋಗ್ತಾ ಇರಲಿಲ್ಲ. ದ್ವಾರಕಾಲಿ ಸಿಗೋ ಖಾಲಿದೋಸೆ ರುಚಿ ಸುತ್ತಮುತ್ತಲಿನ ಯಾವ ಹೋಟಲ್ನಲ್ಲೂ ಸಿಕ್ತಾಯಿರಲಿಲ್ಲ ಬಿಡಿ, ಅದು ಬೇರೆ ಮಾತು. ಆದರೂ ಒಮ್ಮೆಯಾದರೂ ಬೇರೆ ಕಡೆ ಹೋದವನಲ್ಲ.ನನಗೂ ಅಷ್ಟೆ ಯಾವುದೇ ಹೋಟೆಲಿನಲ್ಲಿ ತಿಂಡಿ ತಿಂದರೂ ಕಾಫಿ ಕುಡಿಯಲು ಸನ್ಮಾನ್ ಹೋಟೆಲ್ಗೇ ಹೋಗ್ತಾ ಇದ್ದದ್ದು.ನನಗೆ ಹಿಡಿಸುತ್ತಿದ್ದ ರುಚಿ, ಜೊತೆಗೆ ಅರಾಮವಾಗಿ ಕೂತು ಕಾಫಿ ಕುಡಿಯಬಹುದಿತ್ತು.

(ಮುಂದಿನ ಪುಟಕ್ಕೆ...)


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## *ಲೋಕೋ ಭಿನ್ನರುಚಿಃ*

(.. ಹಿಂದಿನ ಪುಟದಿಂದ)

ಜನರು ತಿನ್ನುವ, ಕುಡಿಯುವ ರೀತಿಯಲ್ಲಿ ಹೊಂದಿರುವ ಭಿನ್ನತೆ, ವೈವಿಧ್ಯತೆ ಬಹುಶಃ ಬೇರೆಲ್ಲೂ ಕಂಡುಬರುವುದಿಲ್ಲ ಅನಿಸುತ್ತದೆ. ಯಾವುದೇ ಊರಲ್ಲಿ ನೋಡಿ ಫುಟ್ ಪಾತಿನಲ್ಲಿ ಬೊಂಡ ಬಜ್ಜಿ ಅಂಗಡಿ ಇಟ್ಟಿಕೊಂಡಿರುವವರು ಬಹಳ ರುಚಿಯಾಗಿ ಮಾಡ್ತಾರೆ. ಮನೆಯಲ್ಲಿ ಮಾಡಿದರೆ ಅಷ್ಟು ರುಚಿ ಬರತ್ತೋ ಇಲ್ವೋ, ಫುಟ್ ಪಾತಲ್ಲಂತೂ ಒಳ್ಳೆ ರುಚಿಯಿರತ್ತೆ. ಕೆಲವರಿಗಂತೂ ಯಾವ ಯಾವ ಏರಿಯಾದ ಅಂಗಡಿಯಲ್ಲಿ ಯಾವ ತರಹದ ಬೊಂಡ, ವಡೆ ತಿನ್ನಬೇಕೆನ್ನುವುದು ತಲೆಯಲ್ಲಿ ಅಚ್ಚಾಗಿರುತ್ತೆ, ಅ ಏರಿಯಾಗೆ ಹೋದರೆ ಮರೆಯದೆ ತಮ್ಮ ಇಷ್ಟದ ಬೊಂಡ ವಡೆ ತಿಂದು ಒಂದಷ್ಟು ಮನೆಗೂ ಕಟ್ಟಿಸಿಕೊಂಡು ಹೋಗ್ತಾರೆ. ಅದರಲ್ಲೇ ತೃಪ್ತಿ.

ಕೆಲವೊಮ್ಮೆ ಈ ಅಭಿಮಾನ, ಒಲವು ಮನೆಯೊಡತಿ ಹಾಗೂ ಅವರ ಮನೆಕೆಲಸದವಳ ನಂಟಿನಲ್ಲಿ ವಿಚಿತ್ರ ರೀತಿಯಲ್ಲಿರುತ್ತೆ. ಯಾವುದೇ ಮನೆಯಲ್ಲಿ ನೋಡಿ ಮನೆಕೆಲಸದವಳು, ಮನೆಯೊಡತಿ ಅನ್ಯೋನ್ಯವಾಗಿರುವುದು ಬಹಳ ವಿರಳ. ಹಾವು ಮುಂಗಸಿ ತರಹ ಜಗಳವಾಡುತ್ತಿರುತ್ತಾರೆ. ಅವರಿಬ್ಬರ ಮಾತುಕತೆ ಶುರುವಾಗುವುದೇ ಬೈಗುಳದಿಂದ. " ಯಾಕೇ ಇಷ್ಟು ಲೇಟು, ಕೆಲಸಕ್ಕೆ ಬರೊ ಹೊತ್ತ ಇದು, ಹೊತ್ತು ಗಿತ್ತು ಇಲ್ವ ನಿನಗೆ". ಇದು ಸಾಮಾನ್ಯವಾಗಿ ಬೆಳಿಗ್ಗೆ ಕೆಲಸದವಳು ಬಂದಾಗ ಎಲ್ಲ ಮನೆಯೊಡತಿಯಿಂದ ಬರುವ ಮೊದಲ ಮಾತು ಅಥವ ಬೈಗುಳ. ಅವಳು ಲೇಟಾಗಿ ಬರುವುದನ್ನು ಬಿಡಲ್ಲ, ಇವರು ಬೈಯುವುದನ್ನು ಬಿಡಲ್ಲ. ಬೈಗುಳದಿಂದ ಶುರುವಾಗುವ ಮಾತುಕತೆ ಮುಗಿಯುವುದೂ ಬೈಗುಳದಿಂದಲೇ, "ನಾಳೆ ಸರಿಯಾದ ಟೈಂಗೆ ಬಾ, ಚಕ್ಕರ್ ಗಿಕ್ಕರ್ ಹೊಡಿಬೇಡ". ಹೀಗೆ ಕೆಲಸದವಳು ಮನೆಯಲ್ಲಿ ಕೆಲಸ ಮಾಡಿಕೊಂಡು ಇರುವಷ್ಟು ಹೊತ್ತು ಒಂದಲ್ಲಾ ಒಂದು ಚಕಮಕಿಯ ಮಾತುಗಳು ಬರ್ತಾನೆ ಇರುತ್ತೆ. ನಮ್ಮ ಮನೆಯಲ್ಲಿ ಬಹಳ ವರ್ಷಗಳಿಂದಲೂ ಈರಮ್ಮ ಎನ್ನುವ ಹೆಂಗಸು ಮನೆಗೆಲಸ ಮಾಡುತ್ತಿದ್ದಳು. ನಮ್ಮಮ್ಮ ಅವಳ ಜೊತೆ ಜಗಳವಾಡದ ದಿನವೇ ಇಲ್ಲ, ಜಗಳವಾಡದಿದ್ದರೆ ಇಬ್ಬರಿಗೂ ತಿಂದ ಅನ್ನ ಮೈಗೆ ಹತ್ತುತ್ತಿರಲಿಲ್ಲ ಅನ್ಸತ್ತೆ. ಕಸ ಗುಡಿಸಿ ಸಾರಿಸುವುದರಿಂದ ಹಿಡಿದು, ಪಾತ್ರೆ ತೊಳೆಯುವುದರಲ್ಲಿ, ಬಟ್ಟೆ ಒಗೆಯುವುದರಲ್ಲಿ ಇಬ್ಬರಿಗೂ ದಿನವೂ ಏನೋ ತಕರಾರು. ಎಷ್ಟು ಹೇಳಿದರೂ ಅವಳು ಕಿವಿ ಮೇಲೆ ಹಾಕ್ಕೊಳ್ತಿರಲಿಲ್ಲ, ನಮ್ಮಮ್ಮ ಹೇಳೋದು ಬಿಟ್ತಾ ಇರಲಿಲ್ಲ. ಈ ಜಗಳಗಳ ಮಧ್ಯೆ ಎಷ್ಟೋ ಸಲ ನಿಮ್ಮನೆ ಕೆಲಸ ಯಾರಿಗೆ ಬೇಕು, ನಾಳೆಯಿಂದ ಬರಲ್ಲ ಏನಾದರೂ ಮಾಡ್ಕೊಳಿ ಅಂತ ಜೋರು ಮಾಡಿ ಹೋಗ್ತಾ ಇದ್ದೋಳು, ಮಾರನೆ ದಿನ ಆರಕ್ಕೆ ಹಾಜರು! ನಮ್ಮಮ್ಮ ಏನಾದರೂ ಯಾಕೆ ವಾಪಸ್ಸು ಬಂದೆ, ನೆನ್ನೆ ಏನೇನೋ ಕೂಗಾಡಿ ಹೋದೆ ಇವತ್ತು ಏನಾಯ್ತು ಅಂದ್ರೆ, ಆ ವಿಷಯ ಯಾಕ್ರಮ್ಮ ಈಗ, ಬೇಗ ಪಾತ್ರೆ ಹಾಕಿ ತುಂಬಾ ಕೆಲಸ ಇದೆ ಅನ್ನೋಳು. ಅವಳು ಬಿಟ್ಟರೆ ಬೇರೆ ಕೆಲಸದವಳು ಸಿಗೋಲ್ಲ ಅಂತಲ್ಲ ಅಥವ ಅವಳಿಗೆ ಇನ್ನೂ ಹೆಚ್ಚು ದುಡ್ಡು ಕೊಡುವ ಮನೆ ಸಿಗುವುದಿಲ್ಲ ಅಂತಲ್ಲ. ಆದರೂ ಹೀಗೇ ಜಗಳವಾಡಿಕೊಂಡೇ ಒಬ್ಬರಿಗೊಬ್ಬರು ಹೊಂದಿಕೊಂಡಿರುತ್ತಿದ್ದರು. ಈರಮ್ಮನ್ನು ಬಿಡಿಸಿ ಬೇರೆ ಯಾರನ್ನೂ ಕೆಲಸಕ್ಕೆ ಸೇರಿಸಿಕೊಳ್ಳುವ ಯೋಚನೆ ನಮ್ಮಮ್ಮ ಮಾಡೇ ಇರ್ಲಿಲ್ಲ. ಈರಮ್ಮನೂ ಅಷ್ಟೆ, ಬೇರೆ ಯಾವುದಾದರೂ ಹೊಸ ಮನೆಗೆ ಕೆಲಸಕ್ಕೆ ಹೆಚ್ಚಿನ ದುಡ್ಡಿಗೆ ಬಂದರೂ ನಮ್ಮ ಮನೆ ಕೆಲಸ ಬಿಡುತ್ತಿರಲಿಲ್ಲ. ಸುಮಾರು ಮುವತ್ತೈದು ವರ್ಷ ಹೀಗೆ ಜಗಳವಾಡಿಕೊಂಡೇ ಕೆಲಸ ಮಾಡಿದ್ದಳು ಈರಮ್ಮ.

ಉಡಿಗೆ ತೊಡಿಗೆಗಳಲ್ಲಿ, ಕೇಶ ವಿನ್ಯಾಸದಲ್ಲಿ, ಅಹಾರ ಪದ್ಧತಿ, ತಿನ್ನುವ, ಕುಡಿಯವ ಪದಾರ್ಥಗಳಲ್ಲಿ, ದಿನಸಿ ಪದಾರ್ಥಗಳು, ತರಕಾರಿ, ಹಣ್ಣುಗಳ ಖರೀದಿಸುವಲ್ಲಿ, ತೋರುವ ಭಿನ್ನತೆ, ಒಲವು ತಾವು ಓಡಿಸುವ ವಾಹನದಲ್ಲೂ ತೋರುತ್ತಾರೆ. ಕಾಲೇಜು ದಿನಗಳಲ್ಲಿ ಟಿವಿಎಸ್ ಚ್ಯಾಂಪ್ ನನ್ನ ವಾಹನ. ಯಾವಾಗಲೂ ಏನೋ ಒಂದು ರಿಪೇರಿಗೆ ಬರುತ್ತಿತ್ತು. ಗಾಡಿ ಇಟ್ಟುಕೊಂಡ ಮೇಲೆ ರಿಪೇರಿಗಳು ಸಹಜ, ಆದರೆ ನನ್ನ ಗಾಡಿಗೆ ರಿಪೇರಿ ಸ್ವಲ್ಪ ಜಾಸ್ತಿನೆ.ಸುಮಾರು ಆಟೊ ಮೆಕಾನಿಕ್ ಅಂಗಡಿಗಳಲ್ಲಿ ರಿಪೇರಿ ಮಾಡಿಸಿ ಸಾಕಾಗಿ ಕೊನೆಗೆ ಚಾಮರಾಜಪೇಟೆಯಲ್ಲಿ ಬಷೀರ್ ಅಂತ ಒಬ್ಬನ ಆಟೊ ಮೆಕಾನಿಕ್ ಅಂಗಡಿಗೆ ಅಂಟಿಕೊಂಡಿದ್ದೆ.ಮುಂಚೆ ಹೋಗಿದ್ದ ಹತ್ತಾರು ಮೆಕಾನಿಕ್ ಗಳಿಗ ಹೋಲಿಸಿದರೆ ಎಷ್ಟೋ ವಾಸಿ, ರಿಪೇರಿ ಚೆನ್ನಾಗಿ ಮಾಡ್ತಾ ಇದ್ದ. ಗಾಡಿ ಒಳ್ಳೆ ಕಂಡೀಷನ್ನಲ್ಲಿದ್ದು ರಿಪೇರಿಗೆ ಅಷ್ಟು ಬೇಗ ಬರುತ್ತಿರಲಿಲ್ಲ. ಹಾಗಾಗಿ ಮನೆಯ ಸುತ್ತ ಮುತ್ತಲಲ್ಲೇ ಆಟೊ ಮೆಕಾನಿಕ್ ಅಂಗಡಿಗಳಿದ್ದರೂ ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿದ್ದ ಬಷೀರನ ಅಂಗಡಿಗೇ ರಿಪೇರಿಗೆ ಕೊಡುತ್ತಿತ್ತು, ಆಗಲೇ ಸಮಾಧಾನ. ಕೆಲವೊಮ್ಮೆ ಯಾವುದೋ ಬೇರೆ ಏರಿಯಾದಲ್ಲಿದ್ದು ಏನಾದರು ಆಕ್ಸಿಲರೇಟರ್ ಕೇಬಲ್ ಕಟ್ ಆಗೋದ್ರೂನು, ಕಟ್ ಆಗಿದ್ದ ಕೇಬಲನ್ನು ಹಾಗೆ ಕೈಬೆರಳುಗಳಿಂದ ಹಿಡಿದೆಳೆದು, ಹಾಗೂ ಹೀಗೂ ಚಾಮರಾಜಪೇಟೆಗೆ ಬಂದು ಬಷೀರನ ಹತ್ತಿರವೇ ರಿಪೇರಿ ಮಾಡಿಸುತ್ತಿದ್ದು. ಮುಂದೆ ಬೈಕ್ ತೆಗೆದುಕೊಂಡ ಮೇಲೂ ಹಲವಾರು ವರ್ಷಗಳ ಕಾಲ ನಾನು ಅಮೆರಿಕಗೆ ಬರುವ ತನಕವೂ ಬಷೀರನೆ ನನ್ನ ಆಟೊ ಮೆಕಾನಿಕ್, ಅವನ ಬಳಿ ರಿಪೇರಿ ಮಾಡಿಸಿದರೇನೆ ತೃಪ್ತಿ. ನನ್ನ ಸ್ನೇಹಿತರಲ್ಲಿ ಕೆಲವರು ತಾವು ಕಾಲೇಜುದಿನಗಳಲ್ಲಿ ಖರೀದಿಸಿದ ಯಮಾಹ ಆರ್ ಎಕ್ಸ್ ೧೦೦ ಬೈಕುಗಳನ್ನೇ ಇನ್ನೂ ಓಡಿಸುತ್ತಿದ್ದಾರೆ.೧೯೮೭ರ ಆಸುಪಾಸಿನಲ್ಲಿ ಮಾರ್ಕೆಟ್ಟಿಗೆ ಬಂದ ಈ ಬೈಕು, ಆಗಿನ ಕಾಲಕ್ಕೆ ಬಹಳ ಪ್ರತಿಷ್ಠಿತ ಬೈಕು. ಅದನ್ನು ಓಡಿಸುವ ಮಜಾನೇ ಬೇರೆ. ಇವರುಗಳಿಗೆ ಆ ಬೈಕುಗಳ ಮೇಲೆ ಅದೆಷ್ಟು ಒಲವೆಂದರೆ ತಾವು ಸರಿಯಾಗಿ ಹಲ್ಲುಜ್ಜಿ ಸ್ನಾನ ಮಾಡುತ್ತಿದ್ದರೋ ಇಲ್ವೊ ಬೈಕುಗಳನ್ನಂತೂ ಚೆನ್ನಾಗಿ ತೊಳೆದು, ಹಲ್ಲುಜ್ಜುವ ಬ್ರಷ್ಷಿಂದ ರಿಮ್ಮು, ಸ್ಪೋಕುಗಳನ್ನು ಉಜ್ಜಿ ಗಾಡಿ ಯಾವಾಗಲೂ ಮಿರಿಮಿರಿ ಮಿಂಚುವ ಹಾಗೆ ಇಟ್ಟುಕೊಳ್ಳುತ್ತಿದ್ದರು. ವರುಷಗಳು ಉರುಳಿ ಮಾರ್ಕೆಟ್ಟಿನಲ್ಲಿ ಹೊಸ ಹೊಸ ಮಾದರಿಯ ಎಷ್ಟೋ ಬೈಕುಗಳು ಬಂದಿದ್ದರೂ ಇವರುಗಳು ಆರ್ ಎಕ್ಸ್ ೧೦೦ ಓಡಿಸುವುದು ಬಿಟ್ಟಿಲ್ಲ, ಹೊಸ ಬೈಕು ಖರೀದಿಸಿಲ್ಲ. ಅಷ್ಟು ವರ್ಷಗಳಾಗಿದ್ದರೂ ಅಷ್ಟೇ ನಾಜೂಕಾಗಿ ಸುಸ್ಥಿತಿಯಲ್ಲಿ ಇಟ್ಟುಕೊಂಡಿದ್ದಾರೆ. ಅಂತಹವರು ಓಬಿರಾಯನ ಕಾಲದವರೋ ಅಥವ ಬೇರೆ ಗಾಡಿ ತೆಗೆದುಕೊಳ್ಳಲು ದುಡ್ಡಿಲ್ಲ ಅಂತಲ್ಲ, ತಮ್ಮ ನೆಚ್ಚಿನ ಗಾಡಿಯ ಮೇಲಿನ ಅಭಿಮಾನವಷ್ಟೆ. ನಾವು ರಸ್ತೆಯಲ್ಲಿ ಎಷ್ಟೋ ಹಳೆಯ ವೆಸ್ಪಾಗಳನ್ನೋ, ಬಜಾಜ್ ಚೇತಕ್ಗಳನ್ನೋ, ಪ್ರೀಮಿಯರ್ ಪದ್ಮಿನಿಗಳನ್ನೋ ನೋಡ್ತಿರ್ತೀವಿ, ಅವರಲ್ಲಿ ಬಹುತೇಕ ಮಂದಿ ಇಂತಹವರೇ. ಅವರಿಗೆ ನೀವು ಬಿಎಂಡಬ್ಲ್ಯೂ ಕಾರ್ ಕೊಟ್ಟರೂ ಅಷ್ಟೆ, ಹಾರ್ಲೆ ಡೇವಿಡ್ಸನ್ ಬೈಕು ಕೊಟ್ರೂ ಅಷ್ಟೆ. ಅವರಿಗೆ ತೃಪ್ತಿ ಕೊಡುವುದು ಅದೇ ಹಳೆಯ ಮಿರಿಮಿರಿ ಮಿಂಚುವ ಆರ್ ಎಕ್ಸೋ, ಪ್ರೀಮಿಯರ್ ಪದ್ಮಿನಿನೋ.


ಕೆಲವು ದಿನಗಳ ಹಿಂದೆ ವಾಟ್ಸಾಪಿನಲ್ಲಿ ಒಂದು ವಿಡಿಯೋ ಬಂದಿತ್ತು. ಅದರಲ್ಲಿ ಮಧ್ಯವಯಸ್ಕರೊಬ್ಬರು ತಮ್ಮ ತಂದೆಯವರು ತೀರಿಹೋದ ಮೇಲೆ, ಅವರ ಮೇಲಿನ ಅಭಿಮಾನ, ಗಾಡಿಯ ಮೇಲಿನ ಪ್ರೀತಿ, ಆ ಗಾಡಿಯಲ್ಲಿ ತಮ್ಮ ತಂದೆಯವರ ಜೊತೆ ಓಡಾಡಿದ ನೆನಪುಗಳನ್ನು ಉಳಿಸಿಕೊಳ್ಳಲು ಅವರು ಓಡಿಸುತ್ತಿದ್ದ ಬಜಾಜ್ ಚೇತಕ್ ಸ್ಕೂಟರನ್ನು ಹಾಗೆಯೇ ಇಟ್ಟುಕೊಂಡು ಸುಮಾರು ಇಪ್ಪತ್ತು, ಇಪ್ಪತ್ತೈದು ವರ್ಷದಿಂದ ಅವರೇ ಓಡಿಸುತ್ತಿದ್ದಾರೆ. ಅದೇ ಸ್ಕೂಟರಿನಲ್ಲಿ ತಮ್ಮ ತಾಯಿಯನ್ನು ಕೂರಿಸಿಕೊಂಡು ಎಲ್ಲಾ ತೀರ್ಥಕ್ಷೇತ್ರಗಳ ದರ್ಶನ ಮಾಡಿಸಬೇಕೆಂಬ ಬಯಕೆಯಿತ್ತಂತೆ. ಹಾಗಾಗಿ ಸತತವಾಗಿ ಆರು ತಿಂಗಳುಗಳ ಕಾಲ ಕರ್ನಾಟಕ, ತಮಿಳುನಾಡು, ಆಂಧ್ರ, ಮಹಾರಾಷ್ಟ್ರದ ಕೆಲವು ಭಾಗಗಳ ಪುಣ್ಯಕ್ಷೇತ್ರಗಳಿಗೆ ಬಜಾಜ್ ಚೇತಕ್ ಸ್ಕೂಟರ್ ಮೇಲೆ ತಮ್ಮ ತಾಯಿಯನ್ನು ಕೂರಿಸಿಕೊಂಡು ದರ್ಶನ ಮಾಡಿ ಸುಖವಾಗಿ ವಾಪಸ್ಸು ಬಂದಿದ್ದಾರೆ. ಎಂತಹ ಪ್ರೀತಿ, ಅಭಿಮಾನ ನೋಡಿ. ಬಜಾಜ್ ಚೇತಕ್ ಸ್ಕೂಟರ್ ಮೇಲೆ ವಯಸ್ಸಾದ ತಾಯಿಯ ಜೊತೆ ಆರು ತಿಂಗಳುಗಳ ಕಾಲ ಸಾವಿರಾರು ಮೈಲಿ ಪ್ರಯಾಣಿಸುವುದೆಂದರೆ ಬಹಳ ಕಷ್ಟ.ಆದರೆ ಪ್ರೀತಿ, ಅಭಿಮಾನ, ಕರ್ತವ್ಯನಿಷ್ಠೆಯಿದ್ದರೆ ಯಾವುದೂ ಅಸಾಧ್ಯವಲ್ಲವೆಂದು ಈ ಸಂಗತಿ ತೋರಿಸುತ್ತದೆ.

ಸಾಮಾನ್ಯವಾಗಿ ಚಿಕ್ಕಮಕ್ಕಳಿಂದ ಹಿಡಿದು ಎಲ್ಲರಿಗೂ ತಮ್ಮ ತಮ್ಮ ವಸ್ತುಗಳಿಗೆ, ಮಾಡುವ ಕೆಲಸಗಳಿಗೆ ಅವರದೇ ಆದಂತಹ ಒಂದು ಧೃಡವಾದ ನಂಬಿಕೆಯ ಸುತ್ತ ಬದುಕುತ್ತಿರುತ್ತಾರೆ. ಕಾಲಕ್ರಮೇಣ ಅದು ಅಭಿಮಾನವಾಗಿಯೋ, ಅಭ್ಯಾಸವಾಗಿಯೋ ಅದರಲ್ಲೇ ತೃಪ್ತಿಯನ್ನು ಕಾಣುತ್ತಾರೆ. ಆಗ ಅದರಲ್ಲಿರುವ ತಪ್ಪುನೆಪ್ಪುಗಳಿಗೆ ಹೆಚ್ಚು ಆದ್ಯತೆ ಕೊಡುವುದಿಲ್ಲ. ಈ ಜಗತ್ತೇ ಹೀಗೆ ಒಬ್ಬೊಬ್ಬರೂ ಒಂದೊಂದು ತರಹದ ವಸ್ತು, ವಿಧಾನದ ಅಳವಡಿಕೆಗೆ ಹೊಂದಿಕೊಂಡು, ಅದನ್ನೇ ಪಾಲಿಸಲು ಇಚ್ಛಿಸುತ್ತಾರೆ.ಅದರಲ್ಲೇ ತೃಪ್ತಿಯನ್ನು ಕಾಣುತ್ತಾರೆ. ಅದರಲ್ಲಿ ಯಾವುದು ಸರಿ, ಯಾವುದು ತಪ್ಪು ಅನ್ನುವ ಮಾತೇ ಇಲ್ಲ. ಅವರಿಗೆ ಇಷ್ಟ ಬಂದದ್ದು ಅವರು ಮಾಡಿರ್ತಾರೆ. ನಿಮಗೆ ಇಷ್ಟ ಬಂದಿದ್ದು ನೀವು ಮಾಡಿರ್ತೀರ. ಲೋಕೋ ಭಿನ್ನರುಚಿಃ.



Copyright © KCO – Brindavana

## ಕಿಶೋರ ವಾಣಿ



ಸಾರ್ಥಕ್ ರಾವ್, ಸೌತ್ ಬ್ರುನ್ಸ್ವಿಕ್ ಕನ್ನಡ ಶಾಲೆ






ವಿಸ್ಮಿತ ಪ್ರಶಾಂತ್

### *ಅನುಪಮ ಕೊಡುಗೆ*

ಕನ್ನಡ ಕಲಿಕೆಯ ಮೆಟ್ಟಿಲುಗಳನ್ನು ಹಂತ ಹಂತವಾಗಿ ಏರುತ್ತಿರುವ ನ್ಯೂ ಜೆರ್ಸಿ ಬೃಂದಾವನ ***"ಕನ್ನಡ ಕಲಿಸೋಣ"*** ಯೋಜನೆಗೆ ಹೆಗಲು ಕೊಟ್ಟಿದ್ದು ಬೆಂಗಳೂರಿನ "ಕಶ್ಯಪ್ ಕನ್ಸ್ಟ್ರಕ್ಷನ್" ಸಂಸ್ಥೆಯ ಶ್ರೀಯುತ ಸಂತೋಷ್ ಕಶ್ಯಪ್. ೨೦೧೫ ರ ಆಗಸ್ಟ್ ನಲ್ಲಿ ಮುಖ್ಯಮಂತ್ರಿ ಚಂದ್ರು ಅವರಿಂದ ಉದ್ಘಾಟಿಸಲ್ಪಟ್ಟ ಬೃಂದಾವನ ಕನ್ನಡ ಶಾಲೆ ಈಗ ಸೌತ್ ಬ್ರುನ್ಸ್ ವಿಕ್, ಈಸ್ಟ್ ವಿಂಡ್ಸರ್ ಹಾಗು ಎಡಿಸನ್ ನಗರಗಳಲ್ಲಿ ತನ್ನ ಶಾಖೆಗಳನ್ನು ಹೊಂದಿದೆ. ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಇದರ ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದಾರೆ. ಈ ಶಾಲೆಗಳು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಪ್ರಕಟಿಸಿರುವ, ಶ್ರೀ ಶಿವಗೌಡರ್ ರಚಿಸಿರುವ ಎಂಟು ಸಂಪುಟಗಳ ಪಠ್ಯಕ್ರಮವನ್ನು ಅನುಸರಿಸುತ್ತಿವೆ. ಶ್ರೀಯುತ ಸಂತೋಷ್ ಕಶ್ಯಪ್ ರವರು ಸುಮಾರು ಒಂದು ಲಕ್ಷ ರೂಪಾಯಿ ಮೌಲ್ಯದ ಪಠ್ಯ ಪುಸ್ತಕಗಳನ್ನು ದೇಣಿಗೆಯಾಗಿ ನೀಡುವ ಮೂಲಕ ತಮ್ಮ ಕನ್ನಡಾಭಿಮಾನ ಮೆರೆದಿದ್ದಾರೆ. ಇವರಿಗೆ ಬೃಂದಾವನ ಕನ್ನಡ ಕೂಟ ಚಿರಋಣಿಯಾಗಿದೆ.

ಆಸಕ್ತ ಪೋಷಕರು ತಮ್ಮಮಕ್ಕಳನ್ನು ಈ ಶಾಲೆಗಳಿಗೆ ಸೇರಿಸುವ ಮೂಲಕ ಇದರ ಸಂಪೂರ್ಣ ಪ್ರಯೋಜನ ಪಡೆಯಬಹುದಾಗಿದೆ.


Copyright © KCO – Brindavana

ಸಂಚಿಕೆ
೧೮
ಸೆಪ್ಟೆಂಬರ್, ೨೦೧೮

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ




## ಸದಸ್ಯತ್ವ ಮಾಹಿತಿ

ಬೃಂದಾವನ ಕನ್ನಡ ಕೂಟ ,ಕನ್ನಡ ಮತ್ತು ಕನ್ನಡಿಗರ ಪರವಾದ ಕಾರ್ಯಕ್ರಮಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ನ್ಯೂ ಜೆರ್ಸಿ ಮತ್ತು ಸುತ್ತ ಮುತ್ತ ಇರುವ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಎಂಬ ವಿನಂತಿ. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಬೃಂದಾವನದ "ಸದಸ್ಯತ್ವ". ವಾರ್ಷಿಕ , ದ್ವೈ ವಾರ್ಷಿಕ , ಅಜೀವ ಅಥವಾ ವಿದ್ಯಾರ್ಥಿ ಸದಸ್ಯತ್ವಗಳಲ್ಲಿ ,ನಿಮಗೆ ಸೂಕ್ತವಾದ ಸದಸ್ಯತ್ವವನ್ನು ಆಯ್ಕೆ ಮಾಡಿ. ಈಗ ಸದಸ್ಯತ್ವ ಪರಿಪೂರ್ಣ ಇಲೆಕ್ಟ್ರಾನಿಕ್ ರೂಪದಲ್ಲಿ ಆನ್ಲೈನ್ ದೊರೆಯುತ್ತದೆ. www.brindavana.orgಗೆ ಹೋಗಿ ನಿಮ್ಮ ವಿವರಗಳನ್ನು ನೀಡಿ ಸೂಕ್ತವಾದ ಸದಸ್ಯತ್ವ ಪಡೆಯಿರಿ. ಕ್ಷಣಾರ್ಧದಲ್ಲಿ ನಿಮಗೆ e-mail ಮುಖೇನ ಸದಸ್ಯತ್ವದ ವಿವರ ಬಂದು ಸೇರುವುದು. ನಿಮ್ಮ ಈ ಬೃಂದಾವನ, Karnataka Cultural Organization - Brindavana (KCOB) NJ, USA. 501(3)(c)ಪಡೆದ ಚಾರಿಟಿ ಸಂಸ್ಥೆ. ಇದಕ್ಕೆ ನಿಮ್ಮ ಕಾಣಿಕೆ ಪರಿಪೂರ್ಣ ಟ್ಯಾಕ್ಸ್ ರಹಿತ.
ಏನಾದರು ಪ್ರಶ್ನೆ ಇದ್ದಲ್ಲಿ president@brindavana.orgಗೆ ಇ-ಮೇಲ್ ಮಾಡಿ.
ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ, ಎಲ್ಲರೂ ಸೇರಿ ಕನ್ನಡ ತಾಯಿ ಭುವನೇಶ್ವರಿಯನ್ನು ಆರಾಧಿಸಿ, ಕನ್ನಡದ ಕಂಪನ್ನು ಹರಡೋಣ.

**ಸೂಚನೆ:**

ನ್ಯೂಜೆರ್ಸಿಯ ಮತ್ತು ಸಮಸ್ತ ಕನ್ನಡದ ಸ್ನೇಹಿತರೆಲ್ಲರೂ "ಬೃಂದಾವನ ವಾಣಿ"ಯಲ್ಲಿ ಭಾಗಿಗಳಾಗಬೇಕೆಂಬುದು ನಮ್ಮ ಆಶಯ. ವಾಣಿಯಲ್ಲಿ ಮೂಡಿಬರುವ ಅಂಕಣಗಳು-ಸಾಹಿತ್ಯವಾಣಿ,ವನಿತಾವಾಣಿ, ಪುಟಾಣಿ-ಪ್ರಪಂಚ, ಬಾಲಪ್ರತಿಭೆ, ಕ್ರೀಡ, ಅಮೆರಿಕಾ ನಾ ಕಂಡಂತೆ, ಯುವ ವಾಣಿ, ಸುತ್ತ-ಮುತ್ತ, ಹಾಗೇ ಸುಮ್ಮನೆ.. ಈ ಅಂಕಣಗಳಿಗೆ ಲೇಖನ,ಕವನ,ಕಥೆ, ಚುಟುಕುಗಳನ್ನು ಬರೆದು ಕಳಿಸಿ. ಅಡುಗೆ, ಮನೆ ಮದ್ದು, ಅಲಂಕಾರ, ಸಂಪ್ರದಾಯಗಳ ಮಾಹಿತಿ ನೀಡುವ ಕಿರುಲೇಖನಗಳನ್ನು, ಮಕ್ಕಳು ಬರೆದ ವರ್ಣಚಿತ್ರಗಳನ್ನು ಕಳುಹಿಸಬಹುದು. ಮಕ್ಕಳಿಗಾಗಿ ನೀತಿ ಕಥೆಗಳನ್ನು ಬರೆದು ಕಳಿಸಿ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ಅಮೆರಿಕಾ ನಾ ಕಂಡಂತೆ** - ಇದು ಜೀವನಾನುಭವಗಳ ಅಂಕಣ. ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿ. ನೀವು ಕ್ಲಿಕ್ಕಿಸಿದ ಸುಂದರ ಛಾಯಾಚಿತ್ರಗಳನ್ನು ಕಳುಹಿಸಬಹುದು.
ನಿಮ್ಮ ಅನಿಸಿಕೆ,ಸಲಹೆ,ಸೂಚನೆಗಳಿಗೆ ತಪ್ಪದೇ ತಿಳಿಸಿ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ವಿಶೇಷ ಸೂಚನೆ** : ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು. ಲೇಖನಗಳು ಸಂಕ್ಷಿಪ್ತವಾಗಿರಲಿ. ಕಳುಹಿಸಿದ ಮಾಹಿತಿ, ಲೇಖನ ಅಸಂಪೂರ್ಣ ಅಥವಾ ಅನುಚಿತವೆನಿಸಿದರೆ ಅದನ್ನು ಪ್ರಕಟಿಸಲಾಗುವುದಿಲ್ಲ.ಸಂಪಾದಕ ಮಂಡಳಿಯ ತೀರ್ಮಾನವೇ ಅಂತಿಮ. 'ಬೃಂದಾವನ ವಾಣಿ'ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು, ಮಾಹಿತಿಗಳಿಗೆಲ್ಲ ಲೇಖಕರೇ ಜವಾಬ್ದಾರರು.ಅಂಕಣಗಳಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ ,'ಬೃಂದಾವನ ವಾಣಿ' ಮತ್ತು ಬೃಂದಾವನ' ಕನ್ನಡ ಕೂಟ ಜವಾಬ್ದಾರರಲ್ಲ.

'ಬೃಂದಾವನ ವಾಣಿ' ಮತ್ತು 'ಬೃಂದಾವನ' ಕನ್ನಡ ಕೂಟ ಯಾವುದೇ ಒಂದು ರಾಜಕೀಯ ಪಕ್ಷವನ್ನು , ಧರ್ಮವನ್ನು ಅಥವಾ ಪಂಗಡವನ್ನು ಪ್ರತಿನಿಧಿಸುವುದಿಲ್ಲ . ನಮ್ಮ ಧ್ಯೇಯ ಕರ್ನಾಟಕ ರಾಜ್ಯ, ಕನ್ನಡ ಭಾಷೆ , ಸಂಸ್ಕೃತಿ ಹಾಗು ಕನ್ನಡಿಗರ ಅಭ್ಯುಧಯ ಮಾತ್ರ.


Copyright © KCO – Brindavana